
ದೆಹಲಿ ಕರ್ನಾಟಕ ಸಂಘದ

# ಅಭಿಮತ

ಸೆಪ್ಟೆಂಬರ್-2016
ಬೆಲೆ ರೂ. 1



## ದೆಹಲಿಯಲ್ಲಿ ಮಿಂಚಿದ ನಾಡಿನ ಜಾನಪದ ಕಲಾವಿದರು

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ
ಸಂಪುಟ 26 ಸಂಚಿಕೆ 12
ಸೆಪ್ಟೆಂಬರ್ 2016, ಬೆಲೆ ರೂ. 1

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ:
9958697823

**ಉಪಾಧ್ಯಕ್ಷರು**
ಆಶಾಲತಾ ಎಂ.:
9891249149
ಎಸ್.ಸಿ. ಹೇಮಲತ:
9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ:
9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ
9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ:
9654555795
ಜಮುನಾ ಸಿ. ಮಠದ:
9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್:
9811689337
ರಾಧಾಕೃಷ್ಣ:
9818252183
ಪೂಜಾ ಪಿ. ರಾವ್:
9810882498
ವಿ.ವಿ.ಬಿರಾದಾರ:
9873005409
ಸಖಾರಾಮ ಉಪ್ಪೂರು
9958807225
ಸುಮಿತಾ ಮುರಗೋಡ
9873000333
ಶಶಿಕಾಂತ್ ಪಾಟೀಲ್
9650182413
ಬಾಬುರಾಜ್ ಪೂಜಾರಿ
9818807696
ಎಸ್. ಪರಮೇಶ್
9015332380
ತ್ಯಾಗೇಶ್ ಮೂರ್ತಿ
9868393961

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಬಸವರಾಜ್ ಎಸ್. ಕಲ್ಲೂರು
ಎನ್.ಎ. ಮಾಧವ
ಡಾ. ಅಹಲ್ಯಾ ಚಿಂತಾಮಣಿ

## ನೇರ ಮಾತು

ಕೇಂದ್ರ ಸಚಿವ ಶ್ರೀ ವೆಂಕಯ್ಯ ನಾಯ್ಡು ಅವರಿಗೆ ಸಂಘದ ಮನವಿ ಮತ್ತು ನಿರಂತರ ಪ್ರಯತ್ನದಿಂದಾಗಿ ಮೋತಿಬಾಗ್‌ನ ಸಂಘದ ಪಕ್ಕದ ಮೆಟ್ರೋ ನಿಲ್ದಾಣಕ್ಕೆ ಭಾರತ ರತ್ನ 'ಸರ್. ಎಂ. ವಿಶ್ವೇಶ್ವರಯ್ಯ' ಎಂದು ಕನ್ನಡಿಗರೊಬ್ಬರ ನಾಮಕರಣ ಮಾಡಿರುವುದು, ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ಸರ್ಕಾರದ ಜೊತೆ ದಹೆಲಿ ಕರ್ನಾಟಕ ಸಂಘ ಕನ್ನಡ ಅಧ್ಯಯನ ಪೀಠ ಆರಂಭ ಮಾಡಬೇಕೆಂಬ ಬೇಡಿಕೆಗೆ ಬಿಡುವಿಲ್ಲದ ಶ್ರಮಪಟ್ಟು, ಅಗತ್ಯ ಬಿದ್ದಾಗ ಕೇಂದ್ರದ ಹಲವು ಮಂತ್ರಿಗಳು, ಶ್ರೀಮತಿ ಸೋನಿಯಾ ಗಾಂಧಿಯವರನ್ನು ಭೇಟಿ ಮಾಡಿ ಕನ್ನಡ ಅಧ್ಯಯನ ಪೀಠ ಸ್ಥಾಪಿಸುವಲ್ಲಿ ಯಶಸ್ಸು ಕಂಡದ್ದು, ಈಗ ಸಂಘದ ಇತಿಹಾಸದ ಪುಟಗಳಿಗೆ ದಾಖಲು. ಇದೀಗ ಜೆಎನ್‌ಯು ವಿನ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ ಡಾ. ಪುರುಷೋತ್ತಮ ಬಿಳಿಮಲೆಯವರು ಕನ್ನಡದ ಹತ್ತು ಹಲವು ಉತ್ತಮ ಕೆಲಸ ಕಾರ್ಯಗಳನ್ನು ಆರಂಭಿಸಿದ್ದಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡಕ್ಕೆ ಮಾನ್ಯತೆ ಸಿಗುವಂತಹ ಹಲವು ಯೋಜನೆಗಳನ್ನು ರೂಪಿಸಿಕೊಂಡಿದ್ದಾರೆ. ಮುಖ್ಯವಾಗಿ ಅಲ್ಲಿ ಸದ್ಯದಲ್ಲಿಯೇ ಎಂಫಿಲ್ ಮತ್ತು ಪಿಎಚ್‌ಡಿ ಅಧ್ಯಯನ ಆರಂಭವಾಗಲಿದೆ. ಜೊತೆಗೆ ಹಳಗನ್ನಡದ ಮುಖ್ಯ ಕೃತಿಗಳಾದ ಕವಿರಾಜ ಮಾರ್ಗ, ವಡ್ಡಾರಾಧನೆ ಮತ್ತು ಗದಾಯುದ್ಧ ಕೃತಿಗಳನ್ನು ಆಂಗ್ಲ ಭಾಷೆಗೆ ಅನುವಾದಿಸುವ ಕೆಲಸ ನಡೆದಿದೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ನಡೆಸಲು ಯೋಜನೆಗಳನ್ನು ರೂಪಿಸಲಾಗಿದೆ. ಕರ್ನಾಟಕದ ವಿವಿಧ ಸಾಂಸ್ಕೃತಿಕ ಮುಖಗಳನ್ನು ಜೆಎನ್‌ಯು ವಿಗೆ ಪರಿಚಯಿಸುವ ಕೆಲಸ ಈಗಾಗಲೇ ಆರಂಭವಾಗಿದೆ. ಮುಂದಿನ ದಶಂಬರದ ಹೊತ್ತಿಗೆ 10 ಸಾವಿರ ಪುಸ್ತಕಗಳುಳ್ಳ ಗ್ರಂಥಾಲಯವನ್ನು ಸಜ್ಜುಗೊಳಿಸಲು ಕೆಲಸ ನಡೆಯುತ್ತಿದೆ. ಇದನ್ನು ಕಂಡಾಗ ಸಂಘ ಕೇವಲ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದಕ್ಕೆ ಮಾತ್ರ ಮೀಸಲು ಎನ್ನುವುದಕ್ಕಿಂತ ಹೊರನಡೆದು ಕನ್ನಡಕ್ಕೆ ಕರ್ನಾಟಕ ಸಂಘ ವಿಶೇಷ ಕೊಡುಗೆಯನ್ನು ನೀಡುವಲ್ಲಿ ನಾವು ಯಶಸ್ಸನ್ನು ಕಂಡಿದ್ದೇವೆ ಎನ್ನುವ ಹೆಮ್ಮೆ, ಅಭಿಮಾನ ನಮಗಿದೆ.

ಇದೀಗ ಪಂಚದ್ರಾವಿಡ ಭಾಷೆಯಲ್ಲಿ ಒಂದಾದ ಅತ್ಯಂತ ಪ್ರಾಚೀನ ತುಳು ಭಾಷೆಗೆ ಭಾರತ ಸರ್ಕಾರದ ಎಂಟನೇ ಪರಿಚ್ಛೇದದಲ್ಲಿ ಸೇರಿಸಬೇಕೆನ್ನುವ ಬೇಡಿಕೆಗೆ ಪೂರಕವಾಗಿ ದೆಹಲಿ ಕರ್ನಾಟಕ ಸಂಘ ಸ್ಪಂದಿಸಿ, ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಕೇರಳ ಸರ್ಕಾರದ ಕೇರಳ ತುಳು ಅಕಾಡೆಮಿ, ಶ್ರೀಕ್ಷೇತ್ರ ಧರ್ಮಸ್ಥಳ, ಅಖಿಲ ಭಾರತೀಯ ತುಳು ಒಕ್ಕೂಟ ಮತ್ತು ದೆಹಲಿ ತುಳು ಸಿರಿಯು, ಪದ್ಮವಿಭೂಷಣ ಡಾ. ವೀರೇಂದ್ರ ಹೆಗ್ಗಡೆಯವರ ನೇತೃತ್ವದ ನಿಯೋಗವೊಂದು ಮಾನ್ಯ ಕೇಂದ್ರ ಸಚಿವ ಶ್ರೀ ರಾಜನಾಥ್ ಸಿಂಗ್ ಅವರಲ್ಲಿ ಮತ್ತು ಮಾನ್ಯ ಭಾರತದ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲು ಇದರ ಸಂಚಾಲನೆಯನ್ನು ಮಾಡಿದೆ. ಮಾನ್ಯ ಪ್ರಧಾನ ಮಂತ್ರಿಗಳು ಹಾಗೂ ಮಾನ್ಯ ಗೃಹಸಚಿವರು ನಿಯೋಗದ ಬೇಡಿಕೆಗೆ ಪೂರಕವಾಗಿ ಸ್ಪಂದಿಸಿದ್ದು, ತುಳು ಭಾಷೆ ಎಂಟನೇ ಪರಿಚ್ಛೇದಕ್ಕೆ ಸೇರುವ ಆಡಳಿತಾತ್ಮಕ ಕೆಲಸ ಕಾರ್ಯಗಳು ತ್ವರಿತಗತಿಯಲ್ಲಿ ಸಾಗಬಹುದೆಂಬ ಆಶಾಭಾವನೆ ನಮಗಿದೆ. ಈ ಭೇಟಿಗೆ ಎಲ್ಲಾ ರೀತಿಯ ಸಹಕಾರ ನೀಡಿ ಯಶಸ್ಸಿಗೆ ಕಾರಣಕರ್ತರಾದ ಮಾನ್ಯ ಕೇಂದ್ರ ಸಂಸದೀಯ ವ್ಯವಹಾರ ಮತ್ತು ರಸಾಯನಿಕ ಮತ್ತು ರಸಗೊಬ್ಬರ ಖಾತೆಯ ಸಚಿವರಾದ ಶ್ರೀ ಅನಂತ ಕುಮಾರ್ ಅವರಿಗೆ ನಮ್ಮ ಕೃತಜ್ಞತೆಗಳು ಅ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*



## ಮುನ್ನೋಟ

ದೆಹಲಿ ಕರ್ನಾಟಕ ಸಂಘ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ತಮಗೆ ಉಣಬಡಿಸುತ್ತಿದೆ. ಭಾರತ ಸರ್ಕಾರವು ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ದೆಹಲಿಯ ರಾಜಪಥ್‌ನಲ್ಲಿ ಆಯೋಜಿಸಿದ 'ಭಾರತ ಪರ್ವ' ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದ ಕರ್ನಾಟಕದ ನೂರಕ್ಕೂ ಹೆಚ್ಚು ಜಾನಪದ ಕಲಾವಿದರು ದೆಹಲಿ ಕರ್ನಾಟಕ ಸಂಘ ಹಾಗೂ ಕನ್ನಡ ಅಧ್ಯಯನ ಪೀಠ, ಜೆ.ಎನ್.ಯು.ವಿನಲ್ಲಿ ಕಾರ್ಯಕ್ರಮವನ್ನು ನೀಡಿ ಜನರ ಮೆಚ್ಚುಗೆಯನ್ನು ಪಡೆದಿದ್ದಾರೆ.

ಮಹಿಳೆಯರಿಗೆ ಪ್ರಾಧಾನ್ಯತೆ ನೀಡುವ ಬೆಂಗಳೂರಿನ ರಂಗಮಂಟಪದ ಕಲಾವಿದರು ಪ್ರದರ್ಶಿಸಿದ ಶ್ರೀಮತಿ ವೈದೇಹಿ ಅವರ ಸಣ್ಣಕಥೆಗಳ ಆಧಾರಿತ 'ಅಕ್ಕು' ಮತ್ತು ಶ್ರೀ ಕೆ.ವೈ. ನಾರಾಯಣಸ್ವಾಮಿ ಅವರ 'ಮಲ್ಲಿಗೆ' ನಾಟಕಗಳು ಪ್ರೇಕ್ಷಕರ ಮನಸೆಳೆದಿತ್ತು. ಶ್ರೀಮತಿ ದೇವಿಕಾ ರಾವ್ ಮತ್ತು ತಂಡ ಅರ್ಪಿಸಿದ 'ಯಾದೇವಿ' ನಾಲ್ಕು ದೇಶಗಳ, ನಾಲ್ಕು ಕಲಾವಿದರ, ಕಥಕ್, ಭರತನಾಟ್ಯ, ಕೂಚುಪುಡಿ, ಯಕ್ಷಗಾನ ಮತ್ತು ಮಯೂರ್ ಬಂಜಭಾವೋ ಈ ಐದು ನೃತ್ಯಪ್ರಕಾರಗಳು ನೋಡುಗರಿಗೊಂದು ನೆನಪಲ್ಲಿ ಉಳಿಯುವಂತಹ ಅನುಭವ ನೀಡಿತು.

ಕರ್ನಾಟಕ ಸಂಘವು ಕರ್ನಾಟಕದ ಸಾಂಸ್ಕೃತಿಕ ಕಾರ್ಯಕ್ರಮಗಳ ರಾಯಭಾರಿಯಾಗಿ ಕೆಲಸ ಮಾಡುತ್ತಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಿಂತ ಹೆಚ್ಚು ಕಾರ್ಯಕ್ರಮಗಳನ್ನು ನೀಡುತ್ತಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಇದಕ್ಕೆ ಕರ್ನಾಟಕ ಸರ್ಕಾರವು ಧನ ಸಹಾಯ ನೀಡುತ್ತಾ ಬರುತ್ತಿದೆ. ಅಮೆರಿಕಾದಲ್ಲಿ ನಡೆಯುವ ಅಕ್ಕ ಕಾರ್ಯಕ್ರಮಕ್ಕೆ ಸಮಾಜ ಕಲ್ಯಾಣ ಇಲಾಖೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈ ಎರಡು ದಿನಗಳ ಕಾರ್ಯಕ್ರಮಕ್ಕೆ 3.5ಕೋಟಿ ರೂಪಾಯಿ ಖರ್ಚು ಮಾಡುತ್ತಿದೆ. ಕರ್ನಾಟಕದ ಕಲಾವಿದರಿಗೆ ಅವಕಾಶ ಕಲ್ಪಿಸಿಕೊಡಬೇಕು ಸರಿ, ಆದರೆ ರಾಷ್ಟ್ರದ ರಾಜಧಾನಿಯಲ್ಲಿ ಕರ್ನಾಟಕ ಸಂಘಕ್ಕೆ ಇನ್ನೂ ಹೆಚ್ಚಿನ ಧನ ಸಹಾಯ ನೀಡಿದಲ್ಲಿ ರಾಷ್ಟ್ರಮಟ್ಟದಲ್ಲಿ ಕನ್ನಡದ ಸಾಹಿತ್ಯ ಮತ್ತು ಸಾಂಸ್ಕೃತಿಕ ಜಗತ್ತನ್ನು ಪರಿಚಯಿಸಲು ಅನುಕೂಲವಾದೀತು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕರ್ನಾಟಕದಿಂದ ದೆಹಲಿಗೆ ಬರುವ ಮಕ್ಕಳಿಗೆ ವಸತಿ ನಿಲಯ ಮಾಡಬೇಕೆಂದು ಮಾನ್ಯ ಕೇಂದ್ರದ ಮಂತ್ರಿಗಳಿಗೆ ಹಾಗೂ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೂ ಇತ್ತೀಚೆಗೆ ಪ್ರಸ್ತಾವನೆಯನ್ನು ನೀಡಲಾಗಿದೆ. ಈ ರೀತಿಯ ಪ್ರಸ್ತಾವನೆಗಳಿಗೆ ಸರ್ಕಾರ ಗಮನ ನೀಡಿದಲ್ಲಿ ಸಂಘವು ಇನ್ನೂ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡುವಲ್ಲಿ ಅನುಕೂಲವಾಗುತ್ತದೆ.

ಸಂಘವು ಸಾಂಸ್ಕೃತಿಕ, ಸಾಹಿತ್ಯಿಕ ಕಾರ್ಯಕ್ರಮಗಳ ಆಯೋಜನೆ ಜೊತೆ ಜೊತೆಗೆ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಗಬೇಕೆಂದು ಪ್ರಯತ್ನಪಟ್ಟಿದ್ದಕ್ಕೆ ಫಲ ಸಿಕ್ಕಿತ್ತು, ಹಾಗೆಯೇ ಸೋದರ ಭಾಷೆಯಾದ ತುಳು ಭಾಷೆಯನ್ನು ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರಿಸಬೇಕೆಂದು ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಹಾಗೂ ಗೃಹ ಸಚಿವರಾದ ಶ್ರೀ ರಾಜನಾಥ್ ಸಿಂಗ್ ಅವರನ್ನು ಧರ್ಮಸ್ಥಳದ ಧರ್ಮಾಧಿಕಾರಿ ಪದ್ಮವಿಭೂಷಣ ಡಾ. ವೀರೇಂದ್ರ ಹೆಗ್ಗಡೆ ಅವರ ನೇತೃತ್ವದ ನಿಯೋಗದಲ್ಲಿ ಪ್ರಸ್ತಾವನೆಯನ್ನು ನೀಡಲಾಗಿದೆ. ಆದಷ್ಟು ಬೇಗನೆ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ತುಳು ಭಾಷೆ ಸೇರ್ಪಡೆಗೊಂಡು ಕರ್ನಾಟಕಕ್ಕೆ ಸ್ಥಾನಮಾನ ಸಿಗಲಿ ಎಂಬುದು ನಮ್ಮ ಬಯಕೆ.

ಮುಂಬರುವ ರಾಜ್ಯೋತ್ಸವ ಕಾರ್ಯಕ್ರಮಗಳ ಅಂಗವಾಗಿ ಸಂಗೀತ, ನೃತ್ಯ ಮುಂತಾದವುಗಳಲ್ಲಿ ಪರಿಣಿತರಿಂದ ತರಬೇತಿ ಕೊಡಿಸಲಾಗುವುದು. ಸ್ಥಳೀಯರು ಹೆಚ್ಚು ಹೆಚ್ಚಾಗಿ ಭಾಗವಹಿಸಿ ತರಬೇತಿಯ ಲಾಭವನ್ನು ಪಡೆಯಬೇಕೆಂದು ವಿನಂತಿ.

ಈ ಬಾರಿಯ ಬ್ರಿಕ್ ಇಂಟರ್‌ನ್ಯಾಷನಲ್ ಫಿಲ್ಮ್ ಫೆಸ್ಟಿವಲ್‌ನಲ್ಲಿ ಇಂಡಿಯಾವೂ ಸೇರಿದಂತೆ ಐದು ರಾಷ್ಟ್ರಗಳು ಭಾಗವಹಿಸಿವೆ. ಇಂಡಿಯನ್ ಮೂವಿಗಳಲ್ಲಿ ಬಾಹುಬಲಿ, ಬಾಜಿರಾವ್ ಮಸ್ತಾನೆ, ಸಿನಿಮಾವಾಲಾ, ತಿಥಿ ಮೂವಿಗಳು ಪ್ರದರ್ಶನಗೊಂಡಿವೆ. ಕನ್ನಡದ ಹಿರಿಯ ಚಲನಚಿತ್ರ ನಿರ್ದೇಶಕ ಶ್ರೀ ಟಿ.ಎಸ್. ನಾಗಾಭರಣ ಐದು ರಾಷ್ಟ್ರಗಳ ತೀರ್ಪುಗಾರ ಮಂಡಳಿಯ ಅಧ್ಯಕ್ಷರಾಗಿದ್ದರು. ಈ ಎಲ್ಲಾ ದೇಶಗಳ ಸಿನಿಮಾಗಳಲ್ಲಿ ಅತ್ಯುತ್ತಮ ಚಲನಚಿತ್ರ 'ತಿಥಿ'ಗೆ ಪ್ರಶಸ್ತಿ ಲಭಿಸಿದೆ. ಕನ್ನಡ ಚಲನಚಿತ್ರಗಳು ಅತೀ ಹೆಚ್ಚು ಹೆಚ್ಚು ಪ್ರಶಸ್ತಿಗಳನ್ನು ಪಡೆಯಲಿ ಎಂದು ಆಶಿಸೋಣ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**5 ರಿಂದ 11 ಸೆಪ್ಟೆಂಬರ್ 2016**

ಗಣೇಶ ಸಾಂಸ್ಕೃತಿಕ ಉತ್ಸವ ಪ್ರತಿ ದಿನ ಬೆಳಗ್ಗೆ ಮತ್ತು ಸಂಜೆ

**11 ಸೆಪ್ಟೆಂಬರ್ 2016 ಭಾನುವಾರ ಬೆಳಿಗ್ಗೆ : 11.00 ಗಂಟೆಗೆ**

**ಸಾಂಸ್ಕೃತಿಕ ಕಾರ್ಯಕ್ರಮಗಳು**

ಮಳವಳ್ಳಿ ಮಹಾದೇವ ಸ್ವಾಮಿ ತಂಡ, ಜನಕಪುರಿ ಮಹಿಳಾ ಮಂಡಳಿ ಸದಸ್ಯೆಯರಿಂದ ಮತ್ತು ಶ್ರೀಮತಿ ನೇತ್ರಾಕುಮಾರ್, ಶ್ರೀ ಎಸ್. ಕುಮಾರ್ ಕರ್ನಾಟಕ ಭವನ, ಶ್ರೀ ಸುಧೀರ್ ಫಡ್ನೀಸ್ ಮತ್ತು ಶ್ರೀ ಅಮರೇಶ್ ಅವರಿಂದ

**18 ಸೆಪ್ಟೆಂಬರ್ 2016 ಭಾನುವಾರ ಸಂಜೆ : 5.30 ಗಂಟೆಗೆ**

ಸ್ಥಳೀಯ ಪ್ರತಿಭೆಗಳಿಂದ ಕನ್ನಡ **ರಸಮಂಜರಿ** ಕಾರ್ಯಕ್ರಮ

**8 ಮತ್ತು 9 ಅಕ್ಟೋಬರ್ 2016 ಶನಿವಾರ ಮತ್ತು ಭಾನುವಾರ ಪೂರ್ವಾಹ್ನ 10.00 ರಿಂದ**

ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ **ಹೊರನಾಡ ಕನ್ನಡಿಗರ ಸಮಾವೇಶ**

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ಸೆಪ್ಟೆಂಬರ್, 2016ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 18 ಸೆಪ್ಟೆಂಬರ್, 2016ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 25 ಸೆಪ್ಟೆಂಬರ್, 2016ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 25 ಸೆಪ್ಟೆಂಬರ್, 2016ರಂದು ಸಾಯಂಕಾಲ 4 ಗಂಟೆಯಿಂದ.

ಸೂಚನೆ : ವೈದ್ಯರನ್ನು ಭೇಟಿ ಮಾಡುವವರು ತಮ್ಮ ಹೆಸರನ್ನು ಸಂಘದ ಕಛೇರಿಯಲ್ಲಿ ಮುಂಚಿನ ದಿನ ನೋಂದಾಯಿಸಬೇಕು.

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011-26109615, 011-26104818




ಸಂಪುಟ 26 ಸಂಚಿಕೆ 12
ಸೆಪ್ಟೆಂಬರ್ 2016

**ಅಭಿಮತ ಪ್ರಧಾನ ಸಂಪಾದಕರು**

ಬಾಲಕೃಷ್ಣ ನಾಯ್ಕ್ ಡಿ.

**ಅಭಿಮತ ಸಂಪಾದಕ ಮಂಡಳಿ**

ಸಖಾರಾಮ ಉಪ್ಪೂರು
ಚಂದ್ರಶೇಖರ್ ಎನ್.ಪಿ.
ಎಸ್. ಕುಮಾರ್



## ಸಂಪಾದಕೀಯ

# ಕಾವೇರಿಗೆ ಶಾಶ್ವತ ಪರಿಹಾರ ಬೇಕಾಗಿದೆ

ಗಣೇಶ ಹಬ್ಬದೊಂದಿಗೆ ಮಳೆಗಾಲ ಮುಗಿದು ಹಬ್ಬಗಳ ಸೀಸನ್ ಆರಂಭವಾಗುತ್ತದೆ. ದೆಹಲಿಯಲ್ಲಿ ಈ ವರ್ಷ ಉತ್ತಮ ಮಳೆ ಬಿದ್ದಿದೆ. ನಗರಪ್ರದೇಶದ ಆಯಕಟ್ಟಿನ ಜಾಗಗಳಲ್ಲಿ ನೀರು ತುಂಬಿತ್ತು. ನಿರಂತರ ಟ್ರಾಫಿಕ್ ತೊಂದರೆಗೆ ಒಳಗಾದರೂ ಉತ್ತಮ ಮಳೆಯು ನೆಮ್ಮದಿಯ ಭಾವನೆಯನ್ನು ಮೂಡಿಸಿದೆ. ಆದರೆ ನಮ್ಮ ರಾಜ್ಯದ ಪರಿಸ್ಥಿತಿ ಹಾಗಿಲ್ಲ. ಕರ್ನಾಟಕದಲ್ಲಿಯೂ ಉತ್ತಮ ಮಳೆಯಾಗಿದೆ ಎಂದು ಅಂಕಿ ಅಂಶಗಳು ಹೇಳುತ್ತಿಲ್ಲ. ರಾಜ್ಯದ ಉತ್ತರ ಒಳನಾಡಿನಲ್ಲಿ ಸಾಧಾರಣವಾದ ಮಳೆಯಾಗಿದೆ ಎಂದರೂ ದಕ್ಷಿಣ ಒಳನಾಡು ಮತ್ತು ಕರಾವಳಿ ಪ್ರದೇಶದಲ್ಲಿ ಮಳೆಯ ಅಭಾವ ಕಂಡು ಬಂದಿದೆ. ನದೀಪಾತ್ರದ ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಮಳೆಯ ಪ್ರಮಾಣ ಸುಮಾರು 25 ರಿಂದ 40 ಪ್ರತಿಶತದಷ್ಟು ಕಡಿಮೆಯಾಗಿದ್ದುದರಿಂದ ನದಿಗಳಲ್ಲಿ ನೀರಿನ ಹರಿವು ಕಡಿಮೆಯಾಗಿ ರಾಜ್ಯದ ಅಣೆಕಟ್ಟುಗಳಲ್ಲಿ ನೀರು ತುಂಬಿಲ್ಲ. ಕರ್ನಾಟಕದಲ್ಲಿ ವಾರ್ಷಿಕ ಮಳೆಯ ಪ್ರಮಾಣ ಸರಾಸರಿ 1248 ಮಿಲಿಮೀಟರ್. ಆದರೆ ಕಳೆದ ಆರು ವರ್ಷಗಳಿಂದ ರಾಜ್ಯದಲ್ಲಿ ಬೀಳುವ ಮಳೆಯ ಪ್ರಮಾಣ ಸರಾಸರಿ ಪ್ರಮಾಣಕ್ಕಿಂತ ಕಡಿಮೆಯಾಗಿದೆ. ಮುಂಗಾರು ಕೊನೆಗೊಳ್ಳುವ ಈ ಸಂದರ್ಭದಲ್ಲಿ ಸುಮಾರು 33 ಪ್ರತಿಶತದಷ್ಟು ಕಡಿಮೆ ಮಳೆ ಬಿದ್ದು ನಮ್ಮ ಅಣೆಕಟ್ಟುಗಳಲ್ಲಿ ನೀರಿನ ಪ್ರಮಾಣ 50 ಪ್ರತಿಶತದಷ್ಟು ಕಡಿಮೆಯಾಗಿದೆ.

ನದೀಪಾತ್ರದ ಜಿಲ್ಲೆಗಳಲ್ಲಿ ಕಡಿಮೆ ಮಳೆ ಬಿದ್ದ ಪರಿಣಾಮವು ಹಲವು ಆಯಾಮಗಳಲ್ಲಿ ರಾಜ್ಯವನ್ನು ಕಾಡುತ್ತಿದೆ. ನೀರಾವರಿ ಕಾಲುವೆಗಳನ್ನು ಅವಲಂಬಿಸಿ ಬೇಸಾಯ ಮಾಡುವ ಕೃಷಿಕರು ಕೂಡಾ ಚಿಂತಿತರಾಗಿದ್ದಾರೆ. ನಾಡಿನ ಮುಖ್ಯ ಬೆಳೆಯಾದ ಕಾಫಿ ಬೆಳೆಯ ಮೇಲೂ ಕಡಿಮೆ ಮಳೆ ಋಣಾತ್ಮಕ ಪರಿಣಾಮವನ್ನು ಬೀರಿದೆ. ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಕುರಿತು ಈಗಲೇ ಚಿಂತೆ ಆರಂಭವಾಗಿದೆ. ಮುಖ್ಯವಾಗಿ ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿನ 40 ಸಾವಿರ ಎಕರೆ ಸಾಂಬಾ ಬೆಳೆ ಮಳೆಯಿಲ್ಲದೆ ತೀವ್ರ ತೊಂದರೆಯಲ್ಲಿರುವುದರಿಂದ ತಮಿಳುನಾಡಿಗೆ ದಿನಂಪ್ರತಿ 15000 ಕ್ಯೂಸೆಕ್ ನೀರು ಹರಿಸುವಂತೆ ಸುಪ್ರೀಂ ಕೋರ್ಟ್ ನೀಡಿದ ಆದೇಶ ಮತ್ತು ಅದನ್ನು ಪಾಲಿಸುವ ಸರಕಾರದ ಅನಿವಾರ್ಯತೆ ಸಾರ್ವಜನಿಕ ಆಕ್ರೋಶವನ್ನು ಹೆಚ್ಚಿಸಿ ಜನ ರಸ್ತೆಗಿಳಿದ್ದಿದ್ದಾರೆ. ಮಾಧ್ಯಮಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗಳಾಗುತ್ತಿವೆ. ನಮ್ಮ ಸರಕಾರವನ್ನು ಪ್ರತಿನಿಧಿಸಿ ಸುಪ್ರೀಂ ಕೋರ್ಟಿನಲ್ಲಿ ನಾಡಿನ ಜನತೆಯ ಪರವಾಗಿ ವಾದ ಮಂಡಿಸಬೇಕಾಗಿರುವ ರಾಜ್ಯದ ಕಾನೂನು ತಂಡದ ಮೇಲೆ ಜನತೆ ಬೇಸರ ವ್ಯಕ್ತ ಪಡಿಸುತ್ತಿದ್ದಾರೆ. ರಾಜ್ಯಾದ್ಯಂತ ಬಂದ್‌ನಂತಹ ಪ್ರತಿಭಟನೆಗಳು ಜನತೆಯ ಅಸಮಾಧಾನವನ್ನು ಸರಕಾರದ ಗಮನ ಸೆಳೆಯುವ ಕೆಲಸ ಮಾಡುತ್ತಿವೆ.

ಒಂದೆಡೆ ಕಾವೇರಿ ನದಿಯ ನೀರನ್ನು ತಮಿಳುನಾಡಿಗೆ ಬಿಟ್ಟುಕೊಡಬೇಕೆಂದು ಹೇಳುವ ಸುಪ್ರೀಂ ಕೋರ್ಟ್, ಇನ್ನೊಂದೆಡೆ ಮಹಾದಾಯಿ ಉಪನದಿಗಳಾದ ಕಳಸಾ–ಬಂಡೂರಿಯಿಂದ ನೀರು ಬಳಸಿಕೊಳ್ಳಲು ಅನುಮತಿ ಕೋರಿದ ಅರ್ಜಿಯನ್ನು ತಿರಸ್ಕರಿಸುವ ಜಲವಿವಾದ ನ್ಯಾಯಮಂಡಳಿಯ ತೀರ್ಪು ನೀರಿನ ವಿಷಯದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂಬುದನ್ನು ಸ್ಪಷ್ಟ ಪಡಿಸುತ್ತದೆ. ಕರ್ನಾಟಕವು ಈ ವರ್ಷವೂ ಬರಗಾಲದ ತೀವ್ರ ತೊಂದರೆಯನ್ನು ಅನುಭವಿಸುವ ಸಾಧ್ಯತೆ ಬಹಳಷ್ಟಿದೆ. ನೆಲ, ಜಲ, ಭಾಷೆಯಂತಹ ಸೂಕ್ಷ್ಮ ವಿಚಾರಗಳಲ್ಲಿ ನಮ್ಮ ನಾಡಿಗೆ ಅನ್ಯಾಯವಾಗುವಾಗ ನಮ್ಮ ಮುತ್ಸದ್ಧಿಗಳು ತಾತ್ಕಾಲಿಕ ಪರಿಹಾರಗಳನ್ನಷ್ಟೇ ನೀಡಿದರೆ ಸಾಲದು. ನೈಸರ್ಗಿಕವಾಗಿ ಹಾನಿಯಾಗುತ್ತಿರುವ ಮಲೆನಾಡನ್ನು ರಕ್ಷಿಸುವುದು, ಉದ್ಯಮಗಳ ತ್ಯಾಜ್ಯ ಮತ್ತು ಪಟ್ಟಣಗಳ ಚರಂಡಿಗಳಿಂದ ಮಾಲಿನ್ಯಗೊಂಡು ಕಲುಷಿತವಾಗಿರುವ ನಮ್ಮ ಪ್ರಮುಖ ನದಿಗಳನ್ನು ಮರುಜೀವಗೊಳಿಸುವುದು ಮತ್ತು ನಗರ ಪ್ರದೇಶಗಳಲ್ಲಿ ದೊಡ್ಡಮಟ್ಟದಲ್ಲಿ ಮಳೆ ನೀರಿನ ಸಂಗ್ರಹ ಮಾಡುವುದರಿಂದ ನಮ್ಮಲ್ಲಿ ಕುಡಿಯುವ ನೀರನ್ನಾದರೂ ಉಳಿಸಿಕೊಳ್ಳಬಹುದು. ಕೃಷಿಯ ನೀರಾವರಿಗಾಗಿ ದೀರ್ಘಕಾಲ ಉಳಿಯುವಂತಹ ಬೃಹತ್ ಯೋಜನೆಗಳನ್ನು ಹಮ್ಮಿಕೊಳ್ಳಬೇಕು. ಕಾವೇರಿ ನೀರು ಸಮಸ್ಯೆಗೆ ಕಾನೂನಿನ ಅಡಿಯಲ್ಲಿ ಶಾಶ್ವತವಾದ ಪರಿಹಾರವನ್ನು ಹುಡುಕಲು ರಾಜಕಾರಣಿಗಳು, ಜಲವಿಜ್ಞಾನಿಗಳು ಮತ್ತು ಕಾನೂನು ತಜ್ಞರು ಜತೆಯಲ್ಲಿ ಸ್ಪಂದಿಸಬೇಕಾಗಿದೆ. ಈ ನಿಟ್ಟಿನಲ್ಲಿ ದೆಹಲಿಯಲ್ಲಿರುವ ಚಿಂತಕರೂ ಯೋಚಿಸಬೇಕಾಗಿದೆ.

*ಬಾಲಕೃಷ್ಣ ನಾಯ್ಕ್ ಡಿ.*




# ಕನ್ನಡಿಗರ ಅಸ್ಮಿತತೆಯನ್ನು ನಾವು ಉಳಿಸಿಕೊಳ್ಳಬೇಕಾಗಿದೆ-ಡಾ. ವೀರೇಂದ್ರ ಹೆಗ್ಗಡೆ

ಕನ್ನಡ ಭಾಷೆ ಮತ್ತೆ ನಾಡಿಗೆ ನಮ್ಮ ದೇಶದಲ್ಲಿ ವಿಶಿಷ್ಟವಾದಂತಹ ಒಂದು ಸ್ಥಾನಮಾನ ಇದೆ. ಕನ್ನಡಿಗರು ಯಾವಾಗಲೂ ಶಾಂತಿಪ್ರಿಯರು, ಸಹಜೀವಿಗಳು ಮತ್ತು ಇತರರೊಂದಿಗೆ ಸ್ನೇಹಪೂರ್ಣವಾಗಿ ಇರುವಂತಹವರು. ಇಂತಹ ಸಂಸ್ಕೃತಿ, ಸೌಜನ್ಯ ಮತ್ತು ವಿಶೇಷತೆಗಳನ್ನು ನಾವು ಸದಾ ಕಾಲ ಉಳಿಸಿಕೊಳ್ಳಬೇಕಾಗಿದೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮದರ್ಶಿ ಡಾ. ವೀರೇಂದ್ರ ಹೆಗ್ಗಡೆ ಅವರು ಕರೆ ನೀಡಿದರು.

ಅವರು ದೆಹಲಿ ಕರ್ನಾಟಕ ಸಂಘದಲ್ಲಿ ಏರ್ಪಡಿಸಿದ್ದ 'ಪರಸ್ಪರ' ಕಾರ್ಯಕ್ರಮದಲ್ಲಿ ಇದೇ ಆಗಸ್ಟ್ 31ರಂದು ಸಭಿಕರನ್ನು ಉದ್ದೇಶಿಸಿ ಮಾತಾಡುತ್ತಿದ್ದರು. ಕನ್ನಡಿಗರ ಅಸ್ಮಿತತೆಯನ್ನು ನಾವು ಉಳಿಸಿಕೊಳ್ಳಬೇಕಾಗಿದೆ. ನಾವು ಸ್ನೇಹಪರರಾಗಿ ಇತರರ ಜೊತೆ ಹೊಂದಿಕೊಂಡು ಹೋಗುತ್ತೇವೆ. ನಮ್ಮಲ್ಲಿ ಯಾವುದೇ ಕಾರಣಕ್ಕೆ ಹಿಂದುಳಿದವರು, ಹೇಡಿಗಳು ಎಂಬ ಕೀಳರಿಮೆ ಅಥವಾ ತಪ್ಪು ಭಾವನೆ ಇಲ್ಲ. ಯೋಗ್ಯತೆ, ಅರ್ಹತೆ ಮೊದಲಾದ ಹಿರಿಮೆ ಗರಿಮೆಗಳನ್ನು ನಮ್ಮ ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಂಡು ಹೋಗುವ ಭಾವನೆ ನಮ್ಮದು. ಹಾಗಾಗಿ ಕನ್ನಡಿಗರು ಯಾವುದೇ ರಾಜ್ಯಕ್ಕೆ ಹೋದರೂ ತಮ್ಮ ವಿಶೇಷ ವ್ಯಕ್ತಿತ್ವದಿಂದ ತಮ್ಮ ಅನನ್ಯತೆಯನ್ನು ತೋರಿಸಿಕೊಳ್ಳುತ್ತಾರೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ಇವತ್ತು ಇಡೀ ವಿಶ್ವದ ಆಕರ್ಷಣೆಯ ಕೇಂದ್ರ ಆಗಿದೆ. ಬೆಂಗಳೂರಿನಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ನೆಲೆ ನಿಂತುದರಿಂದ ಅದು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆದು ಹೆಸರುವಾಸಿಯಾಗಿದೆ. ಉತ್ತರಭಾರತೀಯರು ಸಾವಿರಾರು ಸಂಖ್ಯೆಯಲ್ಲಿ ಬೆಂಗಳೂರಿಗೆ ಬಂದು ನೆಲೆಸಿದ್ದಾರೆ. ಚೀನಾ ದೇಶದ ಅಧ್ಯಕ್ಷರೂ ಭಾರತಕ್ಕೆ ಭೇಟಿ ನೀಡಿದಾಗ ಬೆಂಗಳೂರಿಗೇ ಮೊದಲು ಬಂದಿಳಿದಿರುವುದು ಕೂಡಾ ಗಮನಾರ್ಹವಾಗಿದೆ ಎಂದು ಡಾ. ಹೆಗ್ಗಡೆ ಅವರು ಹೇಳಿದರು. ಬ್ಯಾಂಕುಗಳು ರಾಷ್ಟ್ರೀಕರಣ ಆದಾಗ, ನಾಲ್ಕು ಬ್ಯಾಂಕುಗಳು ನಮ್ಮ ರಾಜ್ಯದಲ್ಲಿ ಹುಟ್ಟಿ ಬೆಳೆದಂತವುಗಳಾಗಿದ್ದವು. ಇಂತಹ ಪ್ರಾಮುಖ್ಯತೆಯ ಜತೆಗೆ ಸಾಹಿತ್ಯ, ಸಂಸ್ಕೃತಿ ಮತ್ತು ಶಿಕ್ಷಣ, ವೈದ್ಯಕೀಯ ಅದೇ ರೀತಿಯಲ್ಲಿ ಐಟಿ, ಬಿಟಿ, ಎಲ್ಲದರಲ್ಲೂ ಕೂಡಾ ನಾವು ಮುಂದಿದ್ದೇವೆ. ಹಾಗಾಗಿ ಎಲ್ಲರೂ ಕರ್ನಾಟಕದತ್ತ ನೋಡುತ್ತಿದ್ದಾರೆ ಎಂದರು. ದೆಹಲಿ ಕರ್ನಾಟಕ ಸಂಘವು ಸಾಂಸ್ಕೃತಿಕವಾಗಿ ಮತ್ತು ಸಾಹಿತ್ಯಿಕವಾಗಿ ಬಹಳ ಮುತುವರ್ಜಿಯಿಂದ ಕೆಲಸ ಮಾಡುತ್ತಿದೆ ಹಾಗೂ ತುಳು ಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸುವ ನಿಟ್ಟಿನಲ್ಲಿ ಬಹಳ ಸಹಾಯ ಮಾಡಿದೆ ಎಂದು ಪ್ರಶಂಶಿಸಿದರು.

ತುಳುಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಲು ಸನ್ಮಾನ್ಯ ಪ್ರಧಾನ ಮಂತ್ರಿ ಮತ್ತು ಮಾನ್ಯ ಕೇಂದ್ರ ಗೃಹ ಸಚಿವರಿಗೆ ಮನವಿ ಸಲ್ಲಿಸಲು ಬಂದ ನಿಯೋಗದ ಮುಂದಾಳತ್ವವನ್ನು ವಹಿಸಿ ಶ್ರೀ ನರೇಂದ್ರ ಮೋದಿ ಮತ್ತು ಶ್ರೀ ರಾಜನಾಥ್ ಸಿಂಗ್ ಅವರನ್ನು ಭೇಟಿ ಮಾಡಿದ ಡಾ. ಹೆಗ್ಗಡೆಯವರು ತುಳು ಭಾಷೆಯ ಅರ್ಹತೆ ಮತ್ತು ಅಗತ್ಯದ ಬಗ್ಗೆ ಮನವರಿಕೆ ಮಾಡಿ ಈ ಬಗ್ಗೆ ಖಂಡಿತವಾಗಿ ಗಮನಹರಿಸಬೇಕು ಎಂದು ಒತ್ತಾಯ ಮಾಡಿದ್ದೇನೆ ಎಂದರು. ದೆಹಲಿಗೆ ಬಂದು ಮನವಿ ಸಲ್ಲಿಸಿ ನಮ್ಮ ಕೆಲಸ ಮುಗಿಯಿತು ಎನ್ನುವ ಭಾವನೆ ನಮಗಿಲ್ಲ. ಬದಲಾಗಿ ಇದರ ಹಿಂದೆ ಮತ್ತು ಮುಂದೆ ಪ್ರಯತ್ನಕ್ಕಾಗಿ ನಮ್ಮ ರಾಜ್ಯದ ಸಚಿವರನ್ನು, ರಾಜ್ಯದ ಸಂಸದರು ಮತ್ತು ಕೇಂದ್ರದ ಮಂತ್ರಿಗಳನ್ನು ಕೇಳಿದ್ದೇವೆ. ಇನ್ನು ಮುಂದಿನ ದಿನಗಳಲ್ಲಿ ಈ ಮಾನ್ಯತೆ ಬರುತ್ತದೆ ಎಂದು ತಿಳಿದುಕೊಂಡಿದ್ದೇವೆ ಎಂದು ಡಾ. ಹೆಗ್ಗಡೆ ಅವರು ವಿವರಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತಾನಾಡಿ ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ಕಟ್ಟಡಕ್ಕೆ ಮೊಟ್ಟಮೊದಲಿಗೆ ಧನಸಹಾಯ ನೀಡಿದ್ದು ಶ್ರೀಕ್ಷೇತ್ರ ಧರ್ಮಸ್ಥಳದಿಂದ ಎಂದರು. ಶ್ರೀ ಕ್ಷೇತ್ರ ಧರ್ಮಸ್ಥಳವು ಮದ್ಯಪಾನ ಬಿಡಿಸುಂತಹ 990 ಕ್ಯಾಂಪ್‌ಗಳನ್ನು ಮಾಡಿ 70,000 ಜನರ ಮದ್ಯಪಾನ ಬಿಡಿಸುವಂತಹ ಮಹತ್ಕಾರ್ಯವನ್ನು ಮಾಡಿದೆ ಎಂದು ಹೇಳಿದರು. ಡಾ. ಹೆಗ್ಗಡೆಯವರ ಆಶೀರ್ವಾದ, ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿಯ ಆಶೀರ್ವಾದ ಮತ್ತು ಕನ್ನಡದ ಎಲ್ಲಾ ಜನತೆಯ ಆಶೀರ್ವಾದದಿಂದ ತುಳು ಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಸೇರಿಸುವ ಕಾರ್ಯ ಸಾಧ್ಯವಾಗುವುದು ಎಂದು ಭರವಸೆ ವ್ಯಕ್ತ ಪಡಿಸಿದರು. ನಿಯೋಗವು ಪ್ರಧಾನಿ ಮತ್ತು ಗೃಹ ಸಚಿವರನ್ನು ಭೇಟಿ ಮಾಡಲು ವ್ಯವಸ್ಥೆಯನ್ನು ಮಾಡಿದ ಕೇಂದ್ರ ಸಚಿವ ಶ್ರೀ ಅನಂತ ಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸಿದರು.

ದೆಹಲಿ ಕರ್ನಾಟಕ ಸಂಘದ ವತಿಯಿಂದ ಡಾ. ಹೆಗ್ಗಡೆಯವರನ್ನು ಭಕ್ತಿ ಮತ್ತು ಗೌರವದಿಂದ ಸಂಘದ ಸ್ಮರಣಿಕೆ, ಶಾಲು ಹಾಗೂ ಹೂಗುಚ್ಛ ನೀಡಿ ಗೌರವಿಸಲಾಯಿತು. ನಂತರ ದೆಹಲಿಯ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಮತ್ತು ಬ್ಯಾಂಕುಗಳ ಅಧಿಕಾರಿಗಳು, ಪದ್ಮವಿಭೂಷಣ ಡಾ. ವೀರೇಂದ್ರ ಹೆಗ್ಗಡೆ ಅವರಿಗೆ ಹೂಗುಚ್ಛವನ್ನು ನೀಡಿ ಗೌರವಿಸಿ ಆಶೀರ್ವಾದವನ್ನು ಪಡೆದರು. ಇದರಲ್ಲಿ ಪಾಲ್ಗೊಂಡ ಸಂಸ್ಥೆಗಳು–ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಬಂಟ್ಸ್ ಕಲ್ಚರಲ್ ಅಸೋಸಿಯೇಶನ್, ಕಾರ್ಪೋರೇಶನ್ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಗುರ್‌ಗಾಂವ್ ಕನ್ನಡ ಸಂಘ, ದೆಹಲಿ ಬಿಲ್ಲವರ ಅಸೋಸಿಯೇಶನ್, ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ, ಗೋಕರ್ಣ ಮಂಡಳ, ನಾಡಪ್ರಭು ಕೆಂಪೇಗೌಡ ಫೌಂಡೇಶನ್, ದೆಹಲಿ ದೂರದರ್ಶನ, ದೆಹಲಿ ತುಳುಸಿರಿ, ದೆಹಲಿ ಕರ್ನಾಟಕ ಸಂಘದ ಸಿಬ್ಬಂದಿ ವರ್ಗ, ದೆಹಲಿ ಒಕ್ಕಲಿಗ ಗೌಡ ಸಂಘ, ಜನಕಪುರಿ ಮಹಿಳಾ ಮಂಡಳಿ, ಕರ್ನಾಟಕ ಭವನ ರೆಸಿಡೆನ್ಸ್ ಅಸೋಸಿಯೇಶನ್, ಗಂಡುಗಲಿ ರಾಜವೀರ ಮದಕರಿ ನಾಯಕ ಅಸೋಸಿಯೇಶನ್, ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್, ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಕೃಷಿಕ್ ಸರ್ವೋದಯ ಫೌಂಡೇಶನ್, ನವದೆಹಲಿ ಶಾಖೆ, ಗಣೇಶ ಮಿತ್ರ ಮಂಡಳಿ, ಜನಕಪುರಿ ಕನ್ನಡ ಕೂಟ, ಕರ್ನಾಟಕ ಫುಡ್ ಸೆಂಟರ್, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ನವದೆಹಲಿ, ಸಂಗೊಳ್ಳಿ ರಾಯಣ್ಣ ಅಭಿಮಾನಿಗಳ ಸಂಘ.

ನಿಯೋಗದಲ್ಲಿ ಭಾಗವಹಿಸಿದ ಎಲ್ಲ ಗಣ್ಯರಿಗೂ ದೆಹಲಿ ಕರ್ನಾಟಕ ಸಂಘದ ವತಿಯಿಂದ ಹೂಗುಚ್ಛ ನೀಡಿ ಅಭಿನಂದಿಸಲಾಯಿತು. ಕಾರ್ಯಕ್ರಮವನ್ನು ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಸಖಾರಾಮ ಉಪ್ಪೂರು ಅವರು ನಿರೂಪಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ವಿದ್ಯಾಶ್ರೀ ರಾಧಾಕೃಷ್ಣ, ಗಾನ ನೃತ್ಯ ಅಕಾಡೆಮಿ ಮಂಗಳೂರು ತಂಡದಿಂದ ಶ್ರೀಕೃಷ್ಣ ಕಾಳಿಂಗ ಮರ್ದನ ಹಾಗೂ ಶಿವನ ಕುರಿತಾದ ಭರತನಾಟ್ಯ ನೃತ್ಯ ಪ್ರದರ್ಶನ ನಡೆಯಿತು. ಅ

***ಸಖಾರಾಮ ಉಪ್ಪೂರು***

# ಲೋಕಾಯತ ಮತ್ತು ಶಾಕ್ತ-ಶೈವ ಕೃತಿ ಲೋಕಾರ್ಪಣೆ

ಇಷ್ಟೊಂದು ವೈವಿಧ್ಯಮಯವಾದ ಲೋಕವನ್ನು ಸರಳೀಕರಿಸಿ ವಿವರಿಸಬಾರದು, ಬದಲು ಅದರ ಸಂಕೀರ್ಣತೆ ಮತ್ತು ಮುಕ್ತತೆಯನ್ನು ನಾವು ಅರ್ಥಮಾಡಿಕೊಳ್ಳಬೇಕು

'ಹಿಂದೂ ಧರ್ಮವು ಯಾವುದೇ ಒಂದು ಪ್ರಧಾನ ಸೈದ್ಧಾಂತಿಕ ಶಾಸನವನ್ನು ಹೊಂದಿಲ್ಲ ಮತ್ತು ಧರ್ಮವನ್ನು ಆಚರಿಸುವ ಹಲವು ಹಿಂದೂಗಳು ತಾವು ಯಾವುದೇ ನಿರ್ದಿಷ್ಟ ಪಂಥಕ್ಕೆ ಸೇರಿದ್ದೇವೆಂದು ಹೇಳುವುದಿಲ್ಲ' ಎಂದು ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕ, ಕವಿ ಪ್ರೊ. ಎಚ್.ಎಸ್. ಶಿವಪ್ರಕಾಶ್ ಅವರು ಹೇಳಿದರು.

ಅವರು ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆದ ಶ್ರೀ ಬಸವರಾಜ ತೂಲಹಳ್ಳಿ ಅವರ 1500 ಪುಟಗಳ ಬೃಹತ್ ಸಂಶೋಧನಾ ಗ್ರಂಥ 'ಲೋಕಾಯತ ಮತ್ತು ಶಾಕ್ತ–ಶೈವ ಸಂಶೋಧನಾ ಸಮೀಕ್ಷೆ' ಕೃತಿಯನ್ನು ಲೋಕಾರ್ಪಣೆ ಮಾಡಿ ಇದೇ ಆಗಸ್ಟ್ 7ರಂದು ಮಾತಾಡುತ್ತಿದ್ದರು.

ಇದರ ಬಗ್ಗೆ ಅಧ್ಯಯನ ಮಾಡಿದ ವಿದ್ವಾಂಸರು ಹಿಂದೂ ಧರ್ಮವನ್ನು ನಾಲ್ಕು ಪ್ರಮುಖ ಪಂಥಗಳಲ್ಲಿ ವರ್ಗೀಕರಿಸಿಕೊಂಡು, ವೈಷ್ಣವ ಪಂಥ, ಶೈವ ಪಂಥ, ಶಕ್ತಿ ಪಂಥ ಮತ್ತು ಸ್ಮಾರ್ತ ಪಂಥ ಎಂದು ಹೆಸರಿಸಿದ್ದಾರೆ. ಈ ಪಂಥಗಳು ಮುಖ್ಯವಾಗಿ ಪರಮಶಕ್ತ ರೂಪವೆಂದು ಆರಾಧಿಸಲಾಗುವ ದೇವರ ವಿಷಯದಲ್ಲಿ ಮತ್ತು ಆ ದೇವರ ಆರಾಧನೆಗೆ ಸಂಬಂಧಿಸಿದ ಸಂಪ್ರದಾಯಗಳಲ್ಲಿ ಭಿನ್ನವಾಗಿವೆ ಎಂದರು. ವೈಷ್ಣವರು ವಿಷ್ಣುವನ್ನು ಪರಮಶಕ್ತ ದೇವರೆಂದು ಆರಾಧಿಸಿದರೆ, ಶೈವರು ಶಿವನನ್ನು ಪರಮಶಕ್ತನೆಂದು ಆರಾಧಿಸುತ್ತಾರೆ; ಶಾಕ್ತರು ಸ್ತ್ರೀ ದೇವತೆ ಅಥವಾ ದೇವಿಯ ಮೂಲಕ ಮೂರ್ತಿಮತ್ತಾಗಿರುವ ಶಕ್ತಿಯನ್ನು ಆರಾಧಿಸುತ್ತಾರೆ; ಮತ್ತು ಸ್ಮಾರ್ತರು ಪರಮಶಕ್ತದ ಮೂರ್ತೀಕರಣಗಳೆಂದು ಐದು (ಪಂಚದೇವ) ಅಥವಾ (ತಮಿಳು ಹಿಂದೂಗಳು ಸ್ಕಂದನನ್ನು ಸೇರಿಸುವುದರಿಂದ) ಆರು ದೇವತೆಗಳ ಸಾರಭೂತವಾದ ಸಂಯೋಜನೆಯಲ್ಲಿ ನಂಬಿಕೆ ಇಡುತ್ತಾರೆ. ಇಷ್ಟೊಂದು ವೈವಿಧ್ಯಮಯವಾದ ಲೋಕವನ್ನು ಸರಳೀಕರಿಸಿ ವಿವರಿಸಬಾರದು, ಬದಲು ಅದರ ಸಂಕೀರ್ಣತೆ ಮತ್ತು ಮುಕ್ತತೆಯನ್ನು ನಾವು ಅರ್ಥಮಾಡಿಕೊಳ್ಳಬೇಕು ಪ್ರೊ. ಶಿವಪ್ರಕಾಶ್ ಅವರು ಹೇಳಿದರು.

ಬಿಡುಗಡೆಗೊಂಡ ಮೂರೂ ಸಂಪುಟಗಳ ಬಗ್ಗೆ ವಿಸ್ತೃತವಾಗಿ ಮಾತಾಡಿದ ತುಮಕೂರು ವಿಶ್ವವಿದ್ಯಾಲಯದ ಡಿ.ವಿ.ಜಿ. ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾದ ಪ್ರೊ. ಡಿ.ವಿ. ಪರಮಶಿವಮೂರ್ತಿ ಅವರು ಈ ಮೂರೂ ಸಂಪುಟಗಳ ಹಿಂದಿನ ಶ್ರಮವನ್ನು ವಿಶೇಷವಾಗಿ ಉಲ್ಲೇಖಿಸಿ, ಶಾಸನಾಧಾರಗಳಿಂದ ಈ ಅಧ್ಯಯನವನ್ನು ಹೇಗೆ ಇನ್ನಷ್ಟು ಮುಂದುವರಿಸಬಹುದೆಂಬುದನ್ನು ಸಾಧಾರವಾಗಿ ವಿವರಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಡಾ. ಪುರುಷೋತ್ತಮ ಬಿಳಿಮಲೆಯವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಲೇಖಕ ಶ್ರೀ ಬಸವರಾಜ ತೂಲಹಳ್ಳಿಯವರು ಗ್ರಂಥ ಬಿಡುಗಡೆ ಮಾಡಿದ ದೆಹಲಿ ಕರ್ನಾಟಕ ಸಂಘಕ್ಕೆ ತಮ್ಮ ಕೃತಜ್ಞತೆಗಳನ್ನು ಸಲ್ಲಿಸುವುದರೊಂದಿಗೆ, ಈ ಬಗೆಯ ಅಪರೂಪದ ಮತ್ತು ಸಂಕೀರ್ಣ ವಿಷಯದ ಮೇಲೆ ನಡೆಸುವ ಸಂಶೋಧನೆಯ ಕೆಲವು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದರು. ಕೊನೆಯಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಲೇಖಕರನ್ನು ಅಭಿನಂದಿಸಿ, ಈ ಬಗೆಯ ಸಾಹಿತ್ಯಿಕ ಕಾರ್ಯಕ್ರಮಗಳು ಸಂಘದಲ್ಲಿ ಇನ್ನೂ ಹೆಚ್ಚು ನಡೆಯಲಿವೆ ಎಂದು ಹೇಳಿದರು. ಡಾ. ಅವನೀಂದ್ರನಾಥ ರಾವ್ ಅವರು ಕಾರ್ಯಕ್ರಮ ನಿರ್ವಹಿಸಿದರು. ಅ

***ಡಾ. ಪುರುಷೋತ್ತಮ ಬಿಳಿಮಲೆ***







# ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ತುಳು ಸೇರ್ಪಡೆಗೆ ಪ್ರಧಾನಿಗೆ ಮನವಿ

ತುಳು ಭಾಷೆಯನ್ನು ಭಾರತದ ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಲು ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರ ನೇತೃತ್ವದ ನಿಯೋಗವು ನವದೆಹಲಿಯಲ್ಲಿ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವರಾದ ಶ್ರೀ ರಾಜನಾಥ್ ಸಿಂಗ್ ಅವರನ್ನು ಭೇಟಿಯಾಗಿ ಮನವಿಯನ್ನು ಇದೇ ಆಗಸ್ಟ್ 31 ರಂದು ಮನವಿ ಸಲ್ಲಿಸಿತು.

ಡಾ. ಹೆಗ್ಗಡೆಯವರು ನಿಯೋಗದ ಪರವಾಗಿ ಮಾನ್ಯ ಪ್ರಧಾನ ಮಂತ್ರಿ ಹಾಗೂ ಗೃಹ ಸಚಿವರಿಗೆ ಎಂಟನೇ ಪರಿಚ್ಛೇದಕ್ಕೆ ಸೇರಿಸಲು ತುಳು ಭಾಷೆಯ ಅರ್ಹತೆ ಮತ್ತು ಅಗತ್ಯದ ಬಗ್ಗೆ ಮನವರಿಕೆ ಮಾಡಿಕೊಟ್ಟರು. ತುಳು ಭಾಷೆಯ ಬಗೆಗಿನ ವಿವರವನ್ನು ತಾಳ್ಮೆಯಿಂದ ಆಲಿಸಿದ ಮಾನ್ಯ ಪ್ರಧಾನ ಮಂತ್ರಿಯವರು ಹಾಗೂ ಗೃಹ ಸಚಿವರು ಸಕಾರಾತ್ಮಕ ಸ್ಪಂದನೆಯನ್ನು ನೀಡಿದ್ದಾರೆ ಎಂದು ಅವರು ಹೇಳಿದರು.

ನಿಯೋಗದಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀಮತಿ ಎಂ. ಜಾನಕಿ ಬ್ರಹ್ಮಾವರ, ಕೇರಳ ತುಳು ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಬಿ. ಸುಬ್ಬಯ್ಯ ರೈ, ಸಮಾಜ ಸೇವಕರಾದ ಧರ್ಮಸ್ಥಳದ ಶ್ರೀ ಡಿ. ಸುರೇಂದ್ರ ಕುಮಾರ್, ತುಳು ಅಕಾಡೆಮಿಯ ಮಾಜಿ ಅಧ್ಯಕ್ಷರುಗಳಾದ ಡಾ. ವಾಮನ ನಂದಾವರ, ಶ್ರೀ ಉಮಾನಾಥ ಎ. ಕೋಟ್ಯಾನ್, ಅಖಿಲ ಭಾರತ ತುಳು ಒಕ್ಕೂಟದ ಅಧ್ಯಕ್ಷರಾದ ಶ್ರೀ ಧರ್ಮಪಾಲ ಯು. ದೇವಾಡಿಗ, ಶ್ರೀ ಎ.ಸಿ. ಭಂಡಾರಿ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಮತ್ತು ತುಳು ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಚಂದ್ರಹಾಸ ರೈ ಬಿ. ಇವರು ಪಾಲ್ಗೊಂಡಿದ್ದರು. ಅ

*ಅಭಿಮತ ವರದಿ*



# ದೆಹಲಿ ಕರ್ನಾಟಕ ಸಂಘದಲ್ಲಿ ಸ್ವಾತಂತ್ರ್ಯ ದಿನಾಚರಣೆ

ದೆಹಲಿ ಕರ್ನಾಟಕ ಸಂಘವು 70ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಆಯೋಜಸಿದ್ದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಕನ್ನಡದ ಸಾಹಿತಿ ಹಾಗೂ ನಾಟಕಕಾರ ಶ್ರೀ ಕೆ.ವೈ. ನಾರಾಯಣ ಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟೀ ನಿರ್ದೇಶಕ ಶ್ರೀ ಬಲವಂತ ರಾವ್ ಪಾಟೀಲ್, ನಿವೃತ್ತ ನ್ಯಾಯಮೂರ್ತಿ ಶ್ರೀ ಪಿ.ಎಸ್. ನಾರಾಯಣ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಧ್ವಜಾರೋಹಣ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ನಾರಾಯಣ ಸ್ವಾಮಿ ಅವರು ದೇಶಕ್ಕೆ ಸ್ವಾತಂತ್ರ್ಯ ಬಂದು 70 ವರ್ಷಗಳಾದರೂ ಇಂದಿಗೂ ಕೂಡಾ ಗ್ರಾಮಾಂತರ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುತ್ತಿರುವ ಕೋಟ್ಯಾಂತರ ಮಂದಿ ಭಾರತೀಯರಿಗೆ ಉಣಲು, ಉಡಲು ಹಾಗೂ ಮಳೆ ಬಿಸಿಲಿನಿಂದ ಕಾಪಾಡಿಕೊಳ್ಳಲು ಬೇಕಾಗುವ ಸೂರಿನ ಕೊರತೆಯಿರುವುದು ದುರಾದೃಷ್ಟಕರ. ಎಂದಿನವರೆಗೆ ಎಲ್ಲರಿಗೂ ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಆತ್ಮಗೌರವ ದೊರೆಯುವುದಿಲ್ಲವೋ, ಜನ ಬಡತನದಿಂದ ಮುಕ್ತರಾಗಿ ನೆಮ್ಮದಿ ಹಾಗೂ ಗೌರವಯುತವಾದ ಜೀವನವನ್ನು ನಡೆಸುವಂತಾಗುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಸ್ವಾತಂತ್ರ್ಯಕ್ಕೆ ಯಾವುದೇ ಅರ್ಥವಿಲ್ಲ ಎಂದು ನುಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಖಜಾಂಚಿ ಶ್ರೀ ಕೆ.ಎಸ್.ಜಿ. ಶೆಟ್ಟಿ, ಜಂಟೀ ಕಾರ್ಯದರ್ಶಿ ಶ್ರೀಮತಿ ಜಮುನಾ ಸಿ. ಮಠದ, ಸದಸ್ಯರಾದ ಡಾ. ಎಂ.ಎಸ್. ಶಶಿಕುಮಾರ್, ಶ್ರೀ ಸಖಾರಾಮ ಉಪ್ಪೂರು, ಶ್ರೀಮತಿ ಪೂಜಾ ರಾವ್, ದೆಹಲಿಯ ಹಿರಿಯ ಕನ್ನಡಿಗ ಶ್ರೀ ಭೀಮರಾವ್ ಮುರಗೋಡ, ಶ್ರೀಮತಿ ಶಾಲನ ಮುರಗೋಡ, ಶ್ರೀ ಚೆನ್ನು ಎಸ್. ಮಠದ, ಶ್ರೀ ಶಿವಾನಂದ ಇಂಗಳೇಶ್ವರ ಮೊದಲಾದವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಧ್ವಜಾರೋಹಣ ಹಾಗೂ ದೇಶಭಕ್ತಿ ಗೀತೆಗಳ ಜೊತೆಗೆ ರಾಷ್ಟ್ರಗೀತೆಯನ್ನು ಹಾಡಿ ಗೌರವ ಸಲ್ಲಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟೀ ನಿರ್ದೇಶಕರಾದ ಶ್ರೀ ಬಲವಂತರಾವ್ ಪಾಟೀಲ್ ಹಾಗೂ ಸಂಘದ ಪದಾಧಿಕಾರಿಗಳು ಮತ್ತು ಇತರ ಗಣ್ಯರು ಸಹ ಈ ಸಂದರ್ಭದಲ್ಲಿ ಸ್ವಾಂತ್ರ್ಯದ ಮಹತ್ವ, ದೇಶದ ಸ್ಥಿತಿಗತಿ, ಗಡಿ ಪ್ರದೇಶದಲ್ಲಿ ಸೈನಿಕರು ಎದುರಿಸುತ್ತಿರುವ ಸಮಸ್ಯೆಗಳು, ಸಾಮಾಜಿಕ ನ್ಯಾಯ ಸಮಾನತೆ, ಸ್ತ್ರೀ ಸ್ವಾತಂತ್ರ್ಯ ಯುವ ಶಕ್ತಿಯ ಸದ್ವಿನಿಯೋಗ ಇನ್ನಿತರ ವಿಷಯಗಳ ಕುರಿತಾಗಿ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಅ

*ಅಭಿಮತ ವರದಿ*



# ಭಾರತೀಯ ಭಕ್ತಿ ಪರಂಪರೆ ಮತ್ತು ಕನಕದಾಸರು ವಿಚಾರ ಸಂಕಿರಣ

## "ಶೋಷಣೆಗೆ ಒಳಗಾದವರಿಗೆ ದನಿ ನೀಡಿದ ಭಕ್ತಿಪರಂಪರೆ"

ಹದಿನಾಲ್ಕರಿಂದ ಹದಿನಾರನೇ ಶತಮಾನದ ವರೆಗೆ ಇಡೀ ಭಾರತ ಉಪಖಂಡದಲ್ಲಿ ಪ್ರಬಲವಾಗಿದ್ದ ಭಕ್ತಿಚಳುವಳಿಯಿಂದಾಗಿ ಸಮಾಜದ ವಂಚಿತ, ದಲಿತ ಮತ್ತು ಶೋಷಣೆಗೆ ಒಳಗಾದ ಸಮಾಜಕ್ಕೆ ದನಿ ಸಿಕ್ಕಿತು ಎಂದು ಪ್ರಸಿದ್ಧ ಹಿಂದಿ ಸಾಹಿತಿ ಪ್ರೊ. ಪುರುಷೋತ್ತಮ ಅಗರ್‌ವಾಲ್ ಅವರು ಹೇಳಿದರು. ಅವರು ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು ಇದರ ಆಶ್ರಯದಲ್ಲಿ ದೆಹಲಿ ಕರ್ನಾಟಕ ಸಂಘ ಮತ್ತು ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಸಹಯೋಗದಿಂದ ಭಾರತೀಯ ಭಕ್ತಿ ಪರಂಪರೆ ಮತ್ತು ಕನಕದಾಸರು ಎಂಬ ರಾಷ್ಟ್ರೀಯ ವಿಚಾರ ಸಂಕಿರಣವನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಇದೇ ಆಗಸ್ಟ್ 28ರಂದು ಉದ್ಘಾಟಿಸಿ ಮಾತಾಡುತ್ತಿದ್ದರು.

ಆ ಕಾಲದಲ್ಲಿ ಸಿಕ್ಕಿದ ದನಿ ಎಷ್ಟೊಂದು ಪ್ರಬಲವಾಗಿತ್ತೆಂದರೆ ಬಹಳಷ್ಟು ಉಚ್ಚವರ್ಗದ ಮಂದಿಯೂ ದನಿ ಎತ್ತಿದರು ಎಂದು ಪ್ರೊ. ಅಗರ್‌ವಾಲ್ ಹೇಳಿದರು. ಭಕ್ತಿ ಚಳುವಳಿಯ ಶಬ್ದದ ಪ್ರಯೋಗ ಸರಿಯಲ್ಲವೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಸಾಮಾನ್ಯ ಚಳುವಳಿಯ ಸಂದರ್ಭದಲ್ಲಿ ನಡೆಯುವ ಸಾಮಾಜಿಕ ಪರಿವರ್ತನೆಯ ಪ್ರಯತ್ನ ನಡೆಯಲಿಲ್ಲವಾದುದರಿಂದ ಅದು ಚಳುವಳಿಯಲ್ಲ ಎಂದು ಅವರು ಅಭಿಪ್ರಾಯ ಪಡುತಾರೆ. ಕೆಲವರು ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ರಾಷ್ಟ್ರೀಯ ಚಳುವಳಿಯಂತೆಯೇ ಭಕ್ತಿ ಚಳುವಳಿ ಎಂಬ ಕಲ್ಪನೆ ರೂಪಿತವಾಯಿತು ಎಂದು ಪ್ರಸ್ತಾಪಿಸುತ್ತಾರೆ. ಈಗಿನ ವಿದ್ವಾಂಸರಲ್ಲಿ ಅನೇಕರು ಅದನ್ನು ಭಕ್ತಿ ನೆಟ್‌ವರ್ಕ್ ಎಂದು ಕೂಡಾ ಗುರುತಿಸುತ್ತಾರೆ ಎಂದರು.

ಭಕ್ತಿಚಳುವಳಿಯ ಪ್ರಭಾವವು ಭಾರತದ ಆಧುನಿಕತೆಯ ಉದಯದ ಆರಂಭ ಕಥನವಾಗಿತ್ತು. ಭಕ್ತಿ ಚಳುವಳಿಯ ಸಂದರ್ಭದಲ್ಲಿ ಬ್ರಾಹ್ಮಣ್ಯದ

**ಹಿಂದಿಯ ಆಧುನಿಕರಲ್ಲಿ ಹಿಂದಿಯ ಭಾಷೆಯ ಎಷ್ಟು ಕವಿತೆಗಳ ಪರಿಚಯ ಎಷ್ಟು ಮಂದಿಗೆ ಇದೆ ಎಂಬುದು ಗೊತ್ತಿಲ್ಲ. ಆದರೆ ಇಂದು ಕಬೀರನ, ತುಲಸೀದಾಸರ, ಮೀರಾಬಾಯಿಯ ಅಥವಾ ಸೂರದಾಸನ ಕಾವ್ಯ ಕವಿತೆಗಳ ತುಣುಕೊಂದು ಅರಿಯದ ಉತ್ತರ ಪ್ರದೇಶ, ಬಿಹಾರ ಮಧ್ಯಪ್ರದೇಶದಲ್ಲಿ ಹಿಂದಿ ಭಾಷೆಯ ನಿರಕ್ಷರಿಯನ್ನು ಹುಡುಕುವುದು ಅಸಂಭವ**

ಪ್ರಾಧಾನ್ಯತೆ ಮತ್ತು ರಿಚ್ಯುವಲ್ ಸುಪಿರಿಯರಿಟಿ ಹೆಚ್ಚಾಗಿತ್ತು. ಸಾಮಾಜಿಕ ಸಂಬಂಧಗಳ ಆಡಳಿತಾಧಿಕಾರದ ಪ್ರಶ್ನೆ ಬಂದಾಗ ಈ ಕಾಲದಲ್ಲಿ ಬ್ರಾಹ್ಮಣ ವರ್ಚಸ್ಸಿಗೆ ಬಹಳಷ್ಟು ಸವಾಲುಗಳಿದ್ದವು ಎಂದರು. ಭಕ್ತಿಯ ಕಾವ್ಯಗಳಿಂದ ಮಾತ್ರವಲ್ಲ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ಕಾರಣದಿಂದಲೂ ಈ ಸವಾಲುಗಳನ್ನು ಎದುರಿಸಬೇಕಾಗುತ್ತಿತ್ತು. ಈ ಕಾಲವು ಭಾರತೀಯ ಸಮಾಜದಲ್ಲಿ ವ್ಯಾಪಾರದ ಅಭೂತಪೂರ್ವ ಬೆಳವಣಿಗೆಯ ಕಾಲವಾಗಿತ್ತು. ಭಕ್ತಿ ಪರಂಪರೆಯು ಸಾಮಾಜಿಕ ಬದಲಾವಣೆಗಳ ಕುರಿತು ಸವಾಲುಗಳನ್ನೆಸೆದುವು ಎಂದು ಪ್ರೊ. ಅಗರ್‌ವಾಲ್ ವಿವರಿಸಿದರು.

ವಿದ್ವಾಂವಂತರೆನಿಸಿಕೊಂಡ ಹಿಂದಿಯ ಆಧುನಿಕರಲ್ಲಿ ಹಿಂದಿಯ ಭಾಷೆಯ ಎಷ್ಟು ಕವಿತೆಗಳ ಪರಿಚಯ ಎಷ್ಟು ಮಂದಿಗೆ ಇದೆ ಎಂಬುದು ಗೊತ್ತಿಲ್ಲ. ಆದರೆ ಇಂದು ಕಬೀರನ, ತುಲಸೀದಾಸರ, ಮೀರಾಬಾಯಿಯ ಅಥವಾ ಸೂರದಾಸನ ಕಾವ್ಯ ಕವಿತೆಗಳ ತುಣುಕೊಂದು ಅರಿಯದ ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶದಲ್ಲಿ ಹಿಂದಿ ಭಾಷೆಯ ನಿರಕ್ಷರಿಯನ್ನು ಹುಡುಕುವುದು ಅಸಂಭವ. ಆದರೆ ವಿದ್ವಾಂವಂತರ ಕುರಿತು ಹಾಗನ್ನುವಂತಿಲ್ಲ. ಮರಾಠಿಯಲ್ಲಿ ತುಕಾರಾಮನ ಕುರಿತು ಈ ಮಾತು ಸತ್ಯವಾಗಿರಬಹುದು. ಕನ್ನಡದಲ್ಲಿ ವೀರಶೈವ ಕವಿಗಳ ಅಥವಾ ಕನಕದಾಸರ ಕುರಿತು ಸತ್ಯವಾಗಿರಬಹುದು. ಆ ಕಾಲದಲ್ಲಿ ಇಂತಹ ಸಂವೇದನೆ ಮತ್ತು ಕವಿತೆಗಳಿದ್ದುವು ಅದು ಸಂಸ್ಕೃತದ ಅಥವಾ ಜಗತ್ತಿನ ಇತರ ಭಾಷೆಯ ಸಾಹಿತ್ಯದ ಅನುವಾದಗಳ ಸಮಯವಾಗಿರಲಿಲ್ಲ ಎಂದರು.

ಬಹಳಷ್ಟು ವಿದ್ವಾಂಸರು ಹೇಳುವಂತೆ ಭಕ್ತಿ ಸಾಹಿತ್ಯವು ಆಚಾರ್ಯ ಪರಂಪರೆಯ ಮೂಲಕ ಪ್ರತಿಪಾದಿಸಿದ ಭಾವನೆಗಳ ಅನುವಾದವಾಗಿರಲಿಲ್ಲ. ದ್ವೈತವಾದಿಗಳು ಅಥವಾ ವಿಶಿಷ್ಟಾದ್ವೈತವಾದಿಗಳು ತಮ್ಮ ತತ್ವಗಳ ಕುರಿತು ಮಾತ್ರ ಹೇಳಲಿಲ್ಲ. ರಾನಡೆಯವರು ಪ್ರತಿಪಾದಿಸುವಂತೆ ತುಳಸಿದಾಸರಂತಹ ಭಕ್ತರು ಪ್ರತಿಪಾದಿಸಿದ ಬ್ರಹ್ಮನ ಕುರಿತಾದ ವಿಚಾರಗಳು ಉಪನಿಷತ್‌ನಿಂದ ಹೇಗಿತ್ತೋ ಹಾಗೆ ತೆಗೆದುಕೊಂಡಿರಲಿಲ್ಲ. ತುಳಸೀದಾಸರು ರಾಮಾನುಜಾಚಾರ್ಯರ, ಕಬೀರರು ರಾಮಾನಂದರ, ಸೂರದಾಸರು ವಲ್ಲಭಾಚಾರ್ಯರ ಚಿಂತನೆಗಳ ಭಾಷ್ಯಗಳನ್ನು ಬರೆಯುತ್ತಿರಲಿಲ್ಲ. ಅದು ಹೊಸತೊಂದು ಚಿಂತನೆಯ ರೂಪವಾಗಿತ್ತು. ಭಾರತೀಯ ಭಕ್ತಿ ಪರಂಪರೆಯ ಅಧ್ಯಯನ ಮಾಡುವಾಗ ಇದರ ಕುರಿತು ಗಮನವಿಡಬೇಕು. ಇದು ನಮ್ಮ ಅತ್ಯಂತ ವಂಚಿತ ಸಮಾಜದ ವಿಚಾರಗಳ ಸೃಜನಶೀಲತೆಯ ಪ್ರಕಟವಾಗಿವೆ. ಭಾರತೀಯ ಸಮಾಜದಲ್ಲಿ ಯಾವುದೇ ಉತ್ಕೃಷ್ಟ ವಿಚಾರ ಹುಟ್ಟಿದ್ದರೆ ಅದು ಹತ್ತನೇ ಶತಮಾನಕ್ಕಿಂತ ಮೊದಲೇ ಆಗಿತ್ತು ಎಂಬ ಪೌರೋತ್ಯ ಚಿಂತಕರ ಅಭಿಪ್ರಾಯವಾಗಿತ್ತು. ಅಂತಹವರಿಗೆ ಚೈತನ್ಯದಾಸರ ಚಿಂತನೆಗಳಿಗಿಂತ ಕಠೋಪನಿಷತ್ತಿನ ಮಾತುಗಳೇ ಮುಖ್ಯವಾಗಿದ್ದವು. ಐತಿಹಾಸಿಕ ಸತ್ಯವೇನೆಂದರೆ ಭಾರತೀಯ ಸಮಾಜದಲ್ಲಿ ವಿಚಾರಗಳ ಅಂಧಕಾರ ಯಾವತ್ತೂ ಆಗಿಲ್ಲ. ಆರನೇ ಶತಮಾನದಿಂದ ಎಂಟನೇ ಶತಮಾನದ ವರೆಗೆ ಉತ್ತರಭಾರತದಲ್ಲಿ ವ್ಯಾಪಾರದ



ಪಠನದೊಂದಿಗೆ ರಾಜಕೀಯ ಅಸ್ಥಿರವು ಇದ್ದಾಗ ದಕ್ಷಿಣದಲ್ಲಿ ಯಾದವ ಸಾಮ್ರಾಜ್ಯ ಉಚ್ಛ್ರಾಯ ಸ್ಥಿತಿಗೆ ಬಂದಿತ್ತು. ಯುರೋಪಿನಲ್ಲಿ ಸುಮಾರು ಒಂದು ಸಾವಿರ ವರ್ಷಗಳಷ್ಟು ಕಾಲ ಇದ್ದ ಅಂಧಕಾರಯುಗವು ಭಾರತದಲ್ಲಿರಲಿಲ್ಲ. ಅದು ದೇಸೀ ಭಾಷೆಗಳಾದ ಕನ್ನಡ, ತಮಿಳು, ತೆಲುಗು, ಮರಾಠಿ, ಹಿಂದಿಭಾಷೆಗಳಲ್ಲಿ ಮೌಲಿಕವಾದ ಚಿಂತನೆಗಳು ನಡೆದ ಸಂದರ್ಭವಾಗಿತ್ತು. ಇದೇ ಸಮಯದಲ್ಲಿ ಮಲಯಾಳಂನಲ್ಲಿ ಎಳುತ್ತಾಚ್ಚನ್ ರಾಮಾಯಣವನ್ನು ಬರೆದರು. ಇದೇ ಸಮಯದಲ್ಲಿ ಕಬೀರ ಮತ್ತು ತುಲಸೀದಾಸರಿದ್ದರು. ಇದೇ ಕಾಲದಲ್ಲಿ ಅಕ್ಕ ಮಹಾದೇವಿ, ನರಸಿನ್ ಮೆಹ್ತಾ ಇದ್ದರು. ಜ್ಞಾನಾರ್ಜನೆ ಮತ್ತು ಭಕ್ತಿ ಪರಂಪರೆಯ ಕುರಿತು ತಿಳಿಯಲು ತೌಲನಿಕ ಅಧ್ಯಯನದ ಅಗತ್ಯವಿದೆ. ಆದರೆ ಭಾಷೆಗಳು ಭಿನ್ನವಾದುದರಿಂದ ನೀವು ಕಬೀರನನ್ನು ಮತ್ತು ನಾವು ಕನಕದಾಸರನ್ನು ಇಂಗ್ಲೀಷ್‌ನಲ್ಲಿ ಮಾತ್ರ ಓದಬಹುದಾಗಿದೆ ಎಂದು ಪ್ರೊ. ಅಗರ್‌ವಾಲ್ ಅಭಿಪ್ರಾಯ ಪಟ್ಟರು.

ಭಾರತೀಯ ಭಕ್ತಿ ಪರಂಪರೆ ಕುರಿತು ವಿಶೇಷ ಉಪನ್ಯಾಸ ನೀಡಿದ ಕನ್ನಡದ ಖ್ಯಾತ ಕವಿ, ನಾಟಕಕಾರ ಮತ್ತು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕಲೆ ಮತ್ತು ಸೌಂದರ್ಯ ಶಾಸ್ತ್ರದ ಪ್ರಾಧ್ಯಾಪಕರಾದ ಪ್ರೊ. ಎಚ್.ಎಸ್. ಶಿವಪ್ರಕಾಶ್ ಅವರು ಭಕ್ತಿ ಪರಂಪರೆಯೆನ್ನುವುದು ಭಾರತೀಯ ದಾರ್ಶನಿಕ ಅನುಭವದ ಸಮಗ್ರ ಅಂಶಗಳ ಒಂದು ಚಮತ್ಕಾರ ಎಂದು ಬಣ್ಣಿಸಿದರು. ಕವಿ ರವೀಂದ್ರನಾಥ್ ಠಾಗೋರ್ ಅವರು ಭಕ್ತಿ ಮತ್ತು ಜಾನಪದ ಪರಂಪರೆಗಳು ಭಾರತದ ಏಕತೆಯ ಮೂಲವಾಗಿದೆ. ಅದೇ ನಮ್ಮ ಭಾರತೀಯತೆ ಮತ್ತು ಭಾರತೀಯ ಸಂಸ್ಕೃತಿಯ ಅಂಗವಾಗಿದೆ ಎಂದಿರುವರು ಎಂದು ಪ್ರೊ. ಶಿವಪ್ರಕಾಶ್ ಹೇಳಿದರು. ಶತಮಾನಗಳಷ್ಟು ಕಾಲ ಭಕ್ತಿ ಪರಂಪರೆಯು ಭಾರತೀಯ ಸಂಸ್ಕೃತಿಯನ್ನು ಒಂದುಗೂಡಿಸಿದೆ. ಭಕ್ತಿ ಪರಂಪರೆಯನ್ನು ಒಂದು ಪ್ರಗತಿಪರ ಚಳವಳಿಯೆಂದು ಪರಿಗಣಿಸದಿದ್ದರೂ ಅದೊಂದು ತಟಸ್ಥ ಸಂಸ್ಕೃತಿಗೆ ಚಲನಶೀಲತೆಯನ್ನು ನೀಡಿದೆ. ಆ ನಿಟ್ಟಿನಲ್ಲಿ ಅದೊಂದು ಚಳುವಳಿಯೇ ಆಗಿದೆ ಎಂದು ನುಡಿದರು.

ಭಕ್ತಿ ಪರಂಪರೆಯು ತಮಿಳುನಾಡಿನಲ್ಲಿ ಜನಿಸಿ ಕರ್ನಾಟಕ, ಆಂಧ್ರಪ್ರದೇಶಗಳ ಮೂಲಕ ಒಂದು ಕೊಂಡಿ ಒಡಿಸ್ಸಾ ಮತ್ತು ಬಂಗಾಳದ ಕಡೆಗೆ ಹೋದರೆ ಇನ್ನೊಂದು ಕೊಂಡಿಯು ಗುಜರಾತ್, ರಾಜಸ್ಥಾನದ ಮೂಲಕ ಪಂಜಾಬ್ ವರೆಗೂ ಹೋಯಿತು. ಕಾವೇರಿಯ ತಟದಿಂದ ಝೀಲಂ ನದಿದಂಡೆಯ ವರೆಗೆ ಭಕ್ತಿಯ ಪ್ರವಾಹವು ಹರಿದು ಭಾರತದಾದ್ಯಂತ ಪಸರಿಸಿ ಸಾಂಸ್ಕೃತಿಕ ಪರಿಸರವನ್ನೇ ಬದಲಿಸಿತು. ದೇಶದ ಪ್ರತಿಯೊಂದು ಭಾಗದಲ್ಲೂ ಭಕ್ತಿ ಪರಂಪರೆಯು ವಿವಿಧ ಕಲೆಗಳ ಹೊಸತೊಂದು ರೂಪವನ್ನು ಅರಳಿಸಿತು. ಕಾವ್ಯ, ರಂಗಭೂಮಿ, ಸಂಗೀತ, ಚಿತ್ರಕಲೆ, ಶಿಲ್ಪಕಲೆ ಮೊದಲಾದ ಪ್ರಕಾರಗಳಲ್ಲಿ ಭಕ್ತಿ ಪರಂಪರೆಯ ಪ್ರಭಾವ ಬಿತ್ತು ಎಂದರು.

ಭಕ್ತಿ ಪರಂಪರೆಯು ಸಂಸ್ಕೃತ ಮತ್ತು ಬ್ರಾಹ್ಮಣತ್ವದ ವಿರುದ್ಧ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಆದರೆ ಸಂಸ್ಕೃತದಲ್ಲಿಯೂ ಬಹಳಷ್ಟು ಭಕ್ತಿಕಾವ್ಯಗಳು ಹುಟ್ಟಿವೆ. ಭಕ್ತಿ ಪರಂಪರೆಯು ಬ್ರಾಹ್ಮಣತ್ವವನ್ನು ಮಾತ್ರವಲ್ಲ ಜೈನಧರ್ಮವನ್ನು ಮತ್ತು ತಾಂತ್ರಿಕರನ್ನೂ ವಿರೋಧಿಸಿತ್ತು. ಅಲ್ಲದೇ ಬಹಳಷ್ಟು ಬ್ರಾಹ್ಮಣರೇ ಭಕ್ತಿ ಪರಂಪರೆಗೆ ಸೇರಿದರು. ಅದರಂತೆ ದೇವಸ್ಥಾನಕ್ಕೆ ಹೋಗುವವರನ್ನೂ ಟೀಕಿಸಿತ್ತು. ಕನ್ನಡದ ಭಕ್ತಿ

**ಶತಮಾನಗಳಷ್ಟು ಕಾಲ ಭಕ್ತಿ ಪರಂಪರೆಯು ಭಾರತೀಯ ಸಂಸ್ಕೃತಿಯನ್ನು ಒಂದುಗೂಡಿಸಿದೆ. ಭಕ್ತಿ ಪರಂಪರೆಯನ್ನು ಒಂದು ಪ್ರಗತಿಪರ ಚಳವಳಯೆಂದು ಪರಿಗಣಿಸದಿದ್ದರೂ ಅದೊಂದು ತಟಸ್ಥ ಸಂಸ್ಕೃತಿಗೆ ಚಲನಶೀಲತೆಯನ್ನು ನೀಡಿದೆ.**

ಪರಂಪರೆಯಲ್ಲಿ ಅಂಬಿಗರ ಚೌಡಯ್ಯ ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗಿ/ ಹೊಟ್ಟೆಯಡಿಯಾಗಿ ಬೀಳುವ, ಲೊಟ್ಟೆ ಮೂಗನ ಕಂಡರೆ/ಮೆಟ್ಟಿದ್ದ ಎಡಪಾದರಕ್ಷೆಯ ತಕ್ಕೊಂಡು/ ಲಟಲಟನೆ ಹೊಡೆ ಎಂದು ಹಾಡಿದ್ದಾನೆ. ಅದೇ ರೀತಿ ಅಕ್ಕಮಹಾದೇವಿಯು ವೇದ, ಆಗಮ, ಶಾಸ್ತ್ರಗಳನ್ನು ಬಣ್ಣಿಸಿ ವಚನಗಳನ್ನು ರಚಿಸಿರುವ ನಿದರ್ಶನವನ್ನು ಪ್ರೊ. ಶಿವಪ್ರಕಾಶ್ ಅವರು ಕೊಟ್ಟರು. ವಿವಿಧ ಭಾಷೆಗಳಲ್ಲಿರುವ ಭಕ್ತಿ ಸಾಹಿತ್ಯವನ್ನು ಅಧ್ಯಯನ ಮಾಡಲು ನಮಗೆ ವಿವಿಧ ಭಾಷೆಗಳ ಪರಿಚಯ ಅಗತ್ಯ. ಭಕ್ತಿ ಸಾಹಿತ್ಯವು ಮುಖ್ಯ ಭಾಷೆಗಳಲ್ಲಿ ಮಾತ್ರವಲ್ಲದೇ ಬುಡಕಟ್ಟು ಭಾಷೆಗಳಲ್ಲೂ ಇರುವುದರಿಂದ ಇದು ಕಷ್ಟಕರ ಎಂದು ಅವರು ಅಭಿಪ್ರಾಯ ಪಟ್ಟರು.

ಮುಖ್ಯ ಅತಿಥಿಯಾಗಿದ್ದ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಭಾರತೀಯ ಭಾಷೆಗಳ ವಿಭಾಗದ ಅಧ್ಯಕ್ಷರಾದ ಪ್ರೊ. ಸೈಯದ್ ಮೊಹಮ್ಮದ್ ಅನ್ವರ್ ಆಲಂ (ಅನ್ವರ್ ಪಾಷಾ) ಅವರು ಮಾತಾಡಿ ಕನಕದಾಸರು ಬದುಕಿನಲ್ಲಿ ಅನುಭವಿಸಿದ ಘಟನೆಗಳು ಅವರನ್ನು ಒಬ್ಬ ಭಕ್ತ ಅಥವಾ ದಾಸನಾಗಿ ಹೇಗೆ ರೂಪಿಸಿತು ಎಂಬುದನ್ನು ವಿವರಿಸಿದರು. ಕನಕದಾಸರು ಮಾನವತೆಯ ನೋವನ್ನು ಸಮಾಜದಲ್ಲಿ ಹಂಚಿ ಹೊಸ ಸಮಾಜವನ್ನು ಕಟ್ಟಲು ಪ್ರಯತ್ನಿಸಿದರು. ಭಕ್ತಿ ಪರಂಪರೆ ಮತ್ತು ಸೂಫಿ ಪಂಥದ ಸಮಾನ ಚಿಂತನೆಗಳನ್ನೂ ಅವರು ವಿವರಿಸಿದರು. ರಾಷ್ಟ್ರೀಯತೆಯ ಭಾವನೆಯನ್ನು ರೂಪಿಸುವಲ್ಲಿ ಭಕ್ತಿ ಪರಂಪರೆಯ ಸಂತರು ಬಹಳಷ್ಟು ಕೊಡುಗೆಯನ್ನು ನೀಡಿದ್ದಾರೆ. ದೇಶಾದ್ಯಂತ ಸಂಚರಿಸಿ ಅವರು ಜನರ ಮನದಾಳದ ನೋವುಗಳನ್ನು ಅರ್ಥ ಮಾಡಿ ಎಲ್ಲವನ್ನೂ ಒಟ್ಟುಗೂಡಿಸಿ ಒಗ್ಗಟಿನ ಭಾವನೆಯನ್ನು ಮೂಡಿಸಿದರು ಎಂದು ಪ್ರೊ. ಅನ್ವರ್ ಪಾಷಾ ಅವರು ಹೇಳಿದರು. ನಮ್ಮ ಸಮಾಜಕ್ಕೆ ಕನಕದಾಸರ ಚಿಂತನೆಗಳ ಅಗತ್ಯ ಇಂದು ಕೂಡಾ ಇದೆ ಎಂದರು.

ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ ಡಾ. ಪುರುಷೋತ್ತಮ ಬಿಳಿಮಲೆ ಅವರು ಸ್ವಾಗತ ಭಾಷಣ ಮಾಡಿದರು. ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ವೇದಿಕೆಯ ಮೇಲೆ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಮನ್ವಯಾಧಿಕಾರಿ ಶ್ರೀ ಕಾ.ತ. ಚಿಕ್ಕಣ್ಣ, ಸಂಘದ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಉಪಸ್ಥಿತರಿದ್ದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಸಖಾರಾಮ ಉಪ್ಪೂರು ಅವರು ಉದ್ಘಾಟನಾ ಸಮಾರಂಭವನ್ನು ನಿರೂಪಿಸಿ ಮತ್ತು ವಂದನಾರ್ಪಣೆ ಸಲ್ಲಿಸಿದರು. ಆರಂಭದಲ್ಲಿ ಶ್ರೀ ಮಂಜುನಾಥ ನಾಯಕ್ ಅವರಿಂದ ಕನಕದಾಸರ ಕೀರ್ತನೆ ಮತ್ತು ಎ.ಟಿ. ಶ್ರೀನಿವಾಸ್, ವಿದ್ಯಾ ಭಟ್, ಅರವಿಂದ ಬಿಜ್ಜೈ ಮತ್ತು ಶುಭಾ ದೇವಿಪ್ರಸಾದ್ ಇವರಿಂದ ನಾಡಗೀತೆಯ ಗಾಯನ ನಡೆಯಿತು.

ಮೊದಲ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದ ದೆಹಲಿ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ. ಶುಭಾ ದಾಸ್‌ಗುಪ್ತ ಅವರು ಮಾತಾಡುತ್ತಾ ಕನಕದಾಸರ ಕುರಿತು ಅಂತರ್ಜಾಲದಲ್ಲಿ ಬಹಳಷ್ಟು ವಿವರಗಳು ಇನ್ನೂ ಇಲ್ಲ. ಅದನ್ನು ಮಾಡುವ ಕೆಲಸ ಆಗಬೇಕಾಗಿದೆ. ಕನಕದಾಸರ ಚಿಂತನೆಗಳು ಮೂಲಭೂತವಾದರೂ ಚಲನಶೀಲವಾಗಿವೆ. ಅದೊಂದು ನಿಂತ ನೀರಲ್ಲ ಎಂದರು.

ಭಾರತೀಯ ಪರಂಪರೆಯಲ್ಲಿ ನಳನ ಕಥೆ ಮತ್ತು ಕನಕದಾಸರು ಎಂಬ ಪ್ರಬಂಧವನ್ನು ಮಂಡಿಸಿದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಕನಕದಾಸರ ನಳದಮಯಂತಿಯನ್ನು ಮುಂದಿಟ್ಟುಕೊಂಡು ನಳದಮಯಂತಿ ಕಥೆಯು ಭಾರತೀಯ ಭಾಷೆಗಳಲ್ಲಿ ಹಲವಾರು ಆಯಾಮಗಳನ್ನು ಪಡೆದುಕೊಂಡಿರುವ ಕುರಿತು ಪಠ್ಯ ಮತ್ತು ದೃಶ್ಯಶ್ರಾವ್ಯ ಮಾಧ್ಯಮಗಳ ಮೂಲಕ ವಿವರಿಸಿದರು. ಕನ್ನಡ ಸೇರಿದಂತೆ ವಿವಿಧ ಭಾಷೆಗಳಲ್ಲಿ ನಳದಮಯಂತಿಯ ಹಲವಾರು ಪಠ್ಯಗಳನ್ನು ಪರಿಚಯಿಸಿದರು. ಮಹಾಭಾರತದ ವನಪರ್ವದಿಂದ ತೊಡಗಿ ಪರ್ಶಿಯನ್ ಭಾಷೆಯಲ್ಲಿ ಪ್ರೇಮಕಥೆಯಾಗಿ, ಶ್ರೀ ಹರ್ಷನ ನೈಷಧ ಚರಿತ, ತ್ರಿವಿಕ್ರಮ ಭಟ್ಟನ ನಳಚಂಪು, ಚಾವುಂಡರಸನ ನಳಚರಿತೆ, ಕನಕದಾಸರ ನಳಚರಿತ್ರೆಯಿಂದ ಮುಂದುವರಿದು ಒಡಿಯಾ, ಪಂಜಾಬಿ ಭಾಷೆಗಳಲ್ಲಿ ಅಲ್ಲದೇ, ಉತ್ತರಭಾರತದಲ್ಲಿ ನಳನ ಕಥೆಯು ದೋಲ–ಮಾರು ಕಥೆಯಾಗಿ ಬಂದಿರುವುದನ್ನು ವಿವರಿಸಿದರು. ರಾಜಸ್ಥಾನ ಮತ್ತು ಗಡವಾಲ್‌ನ ಚಿತ್ರಕಲೆಗಳಲ್ಲಿ ನಳದಮಯಂತಿ ಮತ್ತು ದೋಲ–ಮಾರುಗಳನ್ನು ಗುರುತಿಸುವುದೇ ಕಷ್ಟ ಅದು ಅಷ್ಟೊಂದು ಅನ್ಯೋನವಾಗಿ ಇದೆ. ಉತ್ತರ ಭಾರತದ ಪಠ್ಯಗಳಲ್ಲಿ ನಳನಿಗೆ ಇನ್ನೊಬ್ಬ ಪತ್ನಿ ಇರುವಂತೆ ದಕ್ಷಿಣ ಭಾರತದ ಪಠ್ಯಗಳಲ್ಲಿ ನಳದಮಯಂತಿರು ಮಾತ್ರವೇ ಇದ್ದಾರೆ. ದೋಲಮಾರು ಕಥೆಯನ್ನಾಧರಿಸಿ ರಾಜಾಸ್ಥಾನದಲ್ಲಿ ಬಹಳಷ್ಟು ಗೊಂಬೆಯಾಟ ಮತ್ತು ಚಿತ್ರಕಲೆಗಳಿವೆ. ಆಧುನಿಕ ಪಠ್ಯಗಳಲ್ಲೂ



ನಳದಮಯಂತಿಯರ ಕಥೆಗಳನ್ನು ಕಾಣಬಹುದು ಅಲ್ಲದೇ ತಮಿಳುನಾಡಿನ ತಿರುನಲ್ಲೂರುನಲ್ಲಿ ನಳನಿಗೊಂದು ದೇವಸ್ಥಾನವಿದೆ ಎಂದು ಅವರು ಹೇಳಿದರು.

ಕನ್ನಡದ ಸಂದರ್ಭದಲ್ಲಿ ಚಾವುಂಡರಸ, ಕನಕದಾಸ, ಕೆಂಪನ ಗೌಡ, ಧ್ವಜಪುರ ನಾಗಪ್ಪಯ್ಯ, ಗಳಗನಾಥನವರು ನಳನ ಕಥೆಗಳನ್ನು ನೀಡಿದ್ದಾರೆ. ಆದರೆ ಇವೆಲ್ಲವನ್ನೂ ಚರಿತೆ ಎಂದು ಕರೆಯಲಾಗಿದೆ. ಕನಕದಾಸರ ನಳ ಚರಿತೆಯ ಪಠ್ಯವನ್ನು ನೋಡಿದಾಗ ಕಥೆಯು ಮೌಖಿಕವಾಗಿ ಹರಿದು ಬಂದಿದೆ ಮತ್ತು ಬಹಳಷ್ಟು ಸ್ಥಳೀಕರಣಗೊಂಡಿದೆ ಎಂದೆನಿಸುತ್ತದೆ. ಕನಕದಾಸರು ದಮಯಂತಿ ಮತ್ತು ನಳನ ಪ್ರೇಮಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಸ್ವಯಂವರ ಮಂಟಪದ ವಿವರಣೆಯು ಕೂಡಾ ಕರ್ನಾಟಕದ ಮದುವೆಯ ಮಂಟಪದಂತೆಯೇ ಇದೆ. ನಿಷದಪುರದ ಬಣ್ಣನೆಯು ವಿಜಯನಗರದ ಬಣ್ಣನೆಯೇ ಆಗಿದೆ. ಕನಕದಾಸರು ವ್ಯಾಸನ ಮಹಾಭಾರತದ ನಳೋಪಖ್ಯಾನವನ್ನು ಅನುಸರಿಸಿದಂತೆ ಕಾಣುತ್ತದೆ. ಧ್ವಜಪುರ ನಾಗಪಯ್ಯ ಕನಕದಾಸರ ನಳದಮಯಂತಿಯನ್ನು ಹರಿಕಥೆ ಮತ್ತು ಯಕ್ಷಗಾನಕ್ಕೆ ಅಳವಡಿಸಿದರು. ಭಾಮಿನಿ ಷಟ್ಪದಿಯಲ್ಲಿ ರಚಿತವಾದ ಕನಕದಾಸರ ನಳ ಚರಿತ್ರೆಯು ಪಠ್ಯದಿಂದ ಪ್ರದರ್ಶನ ಕಲೆಯಾಗಿ ಬೆಳೆಯುತ್ತದೆ. ಹೀಗೆ ನಳದಮಯಂತಿ ಪಠ್ಯವು ಕರ್ನಾಟಕದಲ್ಲಿ ಇನ್ನೂ ಉಳಿದಿದೆ ಎಂದು ಡಾ. ಬಿಳಿಮಲೆಯವರು ವಿವರಿಸಿದರು.

ದೆಹಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ಟಿ.ಎಸ್. ಸತ್ಯನಾಥ್ ಅವರು ಭಾರತೀಯ ಸಂತ ಪರಂಪರೆ ಮತ್ತು ಕನಕದಾಸರು–ಭಕ್ತಿಯ ಕುರಿತಾದ ಒಂದು ಪರ್ಯಾಯ ನೋಟ ಎಂಬ ವಿಷಯದ ಮೇಲೆ ಪ್ರಬಂಧ ಮಂಡಿಸಿದರು. ಅವರು ತಮ್ಮ ಪ್ರಬಂಧದಲ್ಲಿ ಮಾನವ ಜನಾಂಗವು ನದೀಮೂಲದಿಂದ ಕೆರೆಗಳತ್ತ ಸಾಗಿದಾಗ ಧಾರ್ಮಿಕ ಆರಾಧನೆಯು ರಾಜನಿಂದ ಭಕ್ತನಾಗಿ ಪರಿವರ್ತಿತವಾಗುವುದನ್ನು ವಿವರಿಸಿದರು. ಭಕ್ತಿಯು ಪರ್ಯಾಯ ದಾರಿಯನ್ನು ಕಂಡಿತು. ಧಾರ್ಮಿಕ ನೆಲೆಯು ವಿವಿಧ ವೃತ್ತಿಯವರಿಗೆ ತೆರೆದಿಟ್ಟಿತು. ಕೃಷಿ ಕಾರ್ಯದಲ್ಲಿ ಪ್ರಬಲವಾಗಿ ತೊಡಗಿಸಿಕೊಂಡವರಿಂದ ಅದು ಇತರ ವೃತ್ತಿಗಳಾದ ಬೇಟೆಗಾರ, ಕುರುಬ ಮೊದಲಾದ ಜನರತ್ತ ತಿರುಗಿ ಬಹುಜನತ್ವದ ಬೆಂಬಲವನ್ನು ಪಡೆಯಿತು. ಅದೊಂದು ಪಠ್ಯದಿಂದ ಧ್ವನಿ ಕೇಂದ್ರವಾಗಿ ಮುಂದೆ ದೇಹ ಕೇಂದ್ರಿತವಾಯಿತು. ಕಾಲಾನುಗುಣವಾಗಿ ಅದು ಸಮಾಜದ ವಿವಿಧವಲಯಗಳನ್ನು ಆವರಿಸಿತು ಎಂದರು. ಭಕ್ತಿಯೆನ್ನುವುದು ಪ್ರವಾಹದಂತೆ ಸದಾ ಹರಿಯುತ್ತಿರುತ್ತದೆ. ರಾಷ್ಟ್ರೀಯ, ಪ್ರಾದೇಶಿಕ ಮತ್ತು ಒಂದು ವಲಯದ ಭಕ್ತಿಯ ಏಕರೂಪತೆಯನ್ನು ಪರಿಚಯ ಮಾಡಿಕೊಡುತ್ತದೆ ಎಂದು ಪ್ರೊ. ಸತ್ಯನಾಥ್ ವಿವರಿಸಿದರು. ಈ ಗೋಷ್ಠಿಯನ್ನು ಶ್ರೀಮತಿ ಪೃಥ್ವೀ ಕಾರಿಂಜೆ ಅವರು ನಡೆಸಿಕೊಟ್ಟರು.

ಧ್ವಜಪುರ ನಾಗಪಯ್ಯ ಕನಕದಾಸರ ನಳದಮಯಂತಿಯನ್ನು ಹರಿಕಥೆ ಮತ್ತು ಯಕ್ಷಗಾನಕ್ಕೆ ಅಳವಡಿಸಿದರು. ಭಾಮಿನಿ ಷಟ್ಪದಿಯಲ್ಲಿ ರಚಿತವಾದ ಕನಕದಾಸರ ನಳ ಚರಿತ್ರೆಯು ಪಠ್ಯದಿಂದ ಪ್ರದರ್ಶನ ಕಲೆಯಾಗಿ ಬೆಳೆಯುತ್ತದೆ. ಹೀಗೆ ನಳದಮಯಂತಿ ಪಠ್ಯವು ಕರ್ನಾಟಕದಲ್ಲಿ ಇನ್ನೂ ಉಳಿದಿದೆ

ಎರಡನೇ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದ ಕನ್ನಡದ ಹೆಸರಾಂತ ಕವಿ ಮತ್ತು ವಿಮರ್ಶಕ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಅವರು ಕನಕದಾಸರ ಕಾವ್ಯದ ಕುರಿತು ಮಾತಾಡುತ್ತಾ ಮುಖ್ಯವಾಗಿ ರಾಮಧಾನ್ಯ ಚರಿತದ ಸಂದರ್ಭದಲ್ಲಿ ಕನಕದಾಸರ ಕೊಡುಗೆಯನ್ನು ಸೂಕ್ಷ್ಮವಾಗಿ ಮಂಡಿಸಿದರು. ಮಹಾಕಾವ್ಯಗಳಲ್ಲಿ ವ್ಯಕ್ತಿಗಳು ಮುಖ್ಯವಾದರೆ ಕನಕರ ಈ ರಾಮಧಾನ್ಯ ಚರಿತದಲ್ಲಿ ಎರಡು ಕಾಳುಗಳು ರಾಗಿ ಮತ್ತು ಭತ್ತ ಮುಖ್ಯ ವಸ್ತುಗಳಾಗಿ ಕೆಳವರ್ಗ ಮತ್ತು ಮೇಲ್ವರ್ಗದ ಸೂಚಕಗಳಾಗಿ ಉಪಯೋಗಿಸಿಕೊಂಡು ಅಂದಿನ ಸಮಾಜದಲ್ಲಿನ ಎಲ್ಲ ಅಂಶಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಸೃಷ್ಟಿಸಿದ್ದಾರೆ ಎಂದು ನುಡಿದರು.

ವಿಮರ್ಶಕಿ ಡಾ. ತಾರಿಣಿ ಶುಭದಾಯಿಣಿ ಅವರು ಕನಕದಾಸರ ಭಕ್ತಿಯ ಸಾಮಾಜಿಕ ಆಯಾಮಗಳು ಎಂಬ ವಿಷಯದಲ್ಲಿ ಮಾತಾಡಿದರು. ತಮ್ಮ ಪ್ರಬಂಧ ಪ್ರಸ್ತುತಪಡಿಸುತ್ತಾ ಅಂದಿನ ಸಮಾಜದ ಒತ್ತಡಗಳು ಅನುಭವಗಳು ಮತ್ತು ಅನಿವಾರ್ಯಗಳು ಕನಕದಾಸರನ್ನು ತಮ್ಮ ಕೀರ್ತನೆಗಳು, ಕಾವ್ಯಗಳು ಹಾಗೂ ಮಂಡಿಕೆಗಳ ಮೂಲಕ ಅಂತಹ ಅವಿಭಕ್ತಿಯನ್ನು ವ್ಯಕ್ತಪಡಿಸುವಂತೆ ಮಾಡಿರಬಹುದು ಎಂದು ಅಭಿಪ್ರಾಯಪಟ್ಟರು.

ಲೇಖಕಿ ರೇಣುಕಾ ನಿಡಗುಂದಿ ಅವರು ಭಕ್ತಿ ಸಾಹಿತ್ಯದಲ್ಲಿ ಮಹಿಳೆ ಮತ್ತು ಕನಕದಾಸರು ಎಂಬ ವಿಷಯದಲ್ಲಿ ಪ್ರಬಂಧ ಮಂಡಿಸಿದರು. ಅವರು ಅಕ್ಕಮಹಾದೇವಿ ಹಾಗೂ ಅಲ್ಲಮಪ್ರಭುಗಳಂತಹ ವೀರಶೈವ ಶರಣರಿಗೆ ಹೋಲಿಸಿದರೆ, ಕನಕದಾಸರು ತಮ್ಮ ಕೀರ್ತನೆಗಳಲ್ಲಾಗಲಿ, ಅಥವಾ ಕಾವ್ಯಗಳಲ್ಲಾಗಲಿ ಎಲ್ಲಿಯೂ ಅತ್ಯಂತ ಸ್ಪಷ್ಟ ರೂಪದಲ್ಲಿ ಮಹಿಳೆಯರ ಪರವಾಗಿ ಒತ್ತುಕೊಟ್ಟು ಮಾತನಾಡಿರುವುದು ಕಂಡು ಬರುವುದಿಲ್ಲ ಎಂದು ನುಡಿದರು. ಶ್ರೀ ಎನ್.ಪಿ. ಚಂದ್ರಶೇಖರ ಅವರು ಈ ಗೋಷ್ಠಿಯನ್ನು ನಿರ್ವಹಿಸಿದರು.

ಸಮಾರೋಪ ಸಮಾರಂಭದಲ್ಲಿ ಮಾತಾಡಿದ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಇಂತಹ ಕಾರ್ಯಕ್ರಮ ಇನ್ನೂ ಹೆಚ್ಚು ಹೆಚ್ಚಾಗಿ ನಡೆದು ಕನ್ನಡದ ಭಕ್ತಿಪರಂಪರೆಯ ದಾಸರು, ಶರಣರು ಮತ್ತು ಸೂಫಿಗಳ ವಿಚಾರಗಳು ಕನ್ನಡೇತರರಿಗೆ ತಲುಪುವಂತಾಗಬೇಕು ಎಂದರು. ಈ ಸಂದರ್ಭದಲ್ಲಿ ಶ್ರೀ ಕಾ.ತ. ಚಿಕ್ಕಣ್ಣ ಅವರು ಮಾತಾಡುತ್ತಾ ಕಬೀರ, ರಾಮಾನಂದ, ತುಕಾರಾಮ, ಬಸವಣ್ಣ, ಕನಕದಾಸ, ಪುರಂದರದಾಸ ಹಾಗೂ ಮತ್ತಿತರ ಭಕ್ತಿ ಸಂತರ ಕಾವ್ಯಗಳು, ಬರಹಗಳು ಮತ್ತು ಕೀರ್ತನೆಗಳು ದೇಶದ ಎಲ್ಲ ಭಾಷೆಗಳಿಗೆ ತರ್ಜುಮೆಗೊಂಡು ಈ ಮಹಾಸಂತರ ಸಂದೇಶ ದೇಶದ ಪ್ರತಿಯೊಬ್ಬ ಪ್ರಜೆಗೂ ಅದರಲ್ಲೂ ಮುಖ್ಯವಾಗಿ ಯುವಜನಾಂಗಕ್ಕೆ ತಲುಪುವಂತಾಗಬೇಕು ಎಂದು ನುಡಿದರು. ಜೊತೆಗೆ ಕಾರ್ಯಕ್ರಮ ಯಶಸ್ವಿಯಾಗಲು ಸಹಕರಿಸಿದ ಎಲ್ಲರಿಗೂ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸಿದರು. ಡಾ. ಪುರುಷೋತ್ತಮ ಬಿಳಿಮಲೆ ಅವರು ಸಮಾರೋಪ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ವಿಚಾರ ಸಂಕಿರಣದ ವಿಶೇಷ ಆಹ್ವಾನಿತರಾಗಿ ಡಾ. ಅಹಲ್ಯಾ ಚಿಂತಾಮಣಿ, ಡಾ. ವೈ. ಅವನೀಂದ್ರನಾಥ್ ರಾವ್, ಚೆನ್ನು ಎಸ್. ಮಠದ್, ಶಿವಾನಂದ ಇಂಗಳೇಶ್ವರ್, ಸವಿತಾ ಇನಾಂದಾರ್, ಬಾಲಕೃಷ್ಣ ನಾಯ್ಕ್ ಡಿ, ಎನ್.ಪಿ. ಚಂದ್ರಶೇಖರ್, ಚಂದ್ರಶೇಖರ್ ಜೋಳದರಾಶಿ ಮತ್ತು ಪೃಥ್ವಿ ಕಾರಿಂಜೆ ಭಾಗವಹಿಸಿದ್ದರು. ಶ್ರೀ ಸಿ.ಎಂ. ನಾಗರಾಜ ಅವರು ವಿಚಾರ ಸಂಕಿರಣದ ಯಶಸ್ಸಿಗೆ ಶ್ರಮಿಸಿದ ಎಲ್ಲ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಅರವಿಂದ ಬಿಜೈ ಅವರು ಮಾಡಿದರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಕಲಾವಿದೆ ಕೃಪಾ ಫಡ್ಕೆ ಮತ್ತು ತಂಡದಿಂದ ಕನಕ ಕಾವ್ಯ ನೃತ್ಯ ಹಾಗೂ ಸ್ಥಳೀಯ ಕಲಾವಿದರಿಂದ ಕನಕದಾಸರ ಕೀರ್ತನೆಗಳ ಗಾಯನ ನಡೆದವು. ಅ

*ಬಾಲಕೃಷ್ಣ ನಾಯ್ಕ್ ಡಿ.*






# ಸಂಘದ ಕಲಾವಿದರ ಕನ್ನಡ ರಸಮಂಜರಿ

ಕನ್ನಡದ ಜನಪ್ರಿಯ ಹಳೆಯ ಮತ್ತು ಹೊಸ ಚಲನಚಿತ್ರಗಳ ಹಾಗೂ ಹೆಸರಾಂತ ಹಿನ್ನೆಲೆ ಗಾಯಕರು ಹಾಡಿರುವ ಹಲವಾರು ಹಾಡುಗಳನ್ನು ದೆಹಲಿಯ ಸ್ಥಳೀಯ ಪ್ರತಿಭೆಗಳು ಇದೇ ಆಗಸ್ಟ್ 20ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಡೆದ 'ಕನ್ನಡ ರಸಮಂಜರಿ–2' ಕಾರ್ಯಕ್ರಮದಲ್ಲಿ ಸುಮಧುರವಾಗಿ ಹಾಡಿ ನೆರೆದಿದ್ದ ಪ್ರೇಕ್ಷಕರನ್ನು ತನ್ಮಯಗೊಳಿಸಿದರು.

ಜಯಶ್ರೀ ಬಸವರಾಜು, ಪೂರ್ಣಿಮಾ ಅಡಿಗ, ಜಮುನಾ ಸಿ. ಮಠದ, ಎ.ಟಿ. ಶ್ರೀನಿವಾಸ್, ಡಾ. ಗಾಯತ್ರಿ ಎಸ್., ಅರವಿಂದ್ ಬಿಜ್ಜೈ, ಪೂಜಾ ಪಿ. ರಾವ್ ಹಾಗೂ ವಿದ್ಯಾಭಟ್ ಅವರು ಹಾಡುಗಳನ್ನು ಹಾಡಿ ಸಭಿಕರನ್ನು ರಂಜಿಸಿದರು. ಶ್ರೀಮತಿ ಪೂಜಾ ರಾವ್ ಅವರು ಆರಿಸಿಕೊಂಡ ಹಾಡುಗಳು ಸಭಿಕರಿಗೆ ಮುದ ನೀಡಿದವು.

ಅದೇ ರೀತಿ ಶ್ರೀ ಅರವಿಂದ ಬಿಜ್ಜೈ ಅವರು ಎಸ್.ಪಿ. ಅವರ ಹಾಡುಗಳನ್ನು ಬಹಳ ಸುಂದರವಾಗಿ ಹಾಡಿ ಕೇಳುಗರ ಮನರಂಜಿಸಿದರು. ಶ್ರೀ ಎ.ಟಿ. ಶ್ರೀನಿವಾಸ್ ಮತ್ತು ಶ್ರೀಮತಿ ವಿದ್ಯಾಭಟ್ ಅವರು ಹಾಡಿನ ಜೊತೆಗೆ ನಯವಾದ ಹೆಜ್ಜೆಗಳನ್ನು ಹಾಕಿ ಸಭಿಕರನ್ನು ಕುಣಿಯುವಂತೆ ಮಾಡಿದರು.ಶ್ರೀಮತಿ ಜಮುನಾ ಸಿ. ಮಠದ ಅವರು 60 ಮತ್ತು 70ರ ದಶಕದ 'ಹಿಟ್' ಹಾಡುಗಳನ್ನು ಹಾಡಿ ನೆರೆದವರನ್ನು ರಂಜಿಸಿದರು.

ಸಂಘದ ಉಪಾಧ್ಯಕ್ಷೆ ಶ್ರೀಮತಿ ಆಶಾಲತ ನಿರೂಪಿಸಿದ ಈ ಕಾರ್ಯಕ್ರಮ ದೆಹಲಿ ಕನ್ನಡಿಗರ ಮನದಾಳದಲ್ಲಿ ಬಹಳ ಸಮಯದವರೆಗೆ ಅಚ್ಚಳಿಯದೆ ಉಳಿಯುವ ಸಂಗೀತ ಸಂಜೆಯಾಗಿತ್ತು. ಈ ಎರಡು ಅದ್ದೂರಿಯ ರಸಮಂಜರಿಗಳ ನಂತರ ಇದೀಗ ದೆಹಲಿಯ ರಸಿಕರು ಮುಂದಿನ ರಸಮಂಜರಿಗಾಗಿ ತವಕದಿಂದ ಎದುರು ನೋಡುತ್ತಿದ್ದಾರೆ. ಅ

***ಅಭಿಮತ ವರದಿ***

# ಯಾದೇವಿ ನೃತ್ಯ ಪ್ರದರ್ಶನ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಮತ್ತು ಸಿ.ಡಿ. ಫೌಂಡೇಶನ್ ನವದೆಹಲಿ ಇವರ ಸಹಯೋಗದೊಂದಿಗೆ ಕಲಾವಿದೆ ದೇವಿಕಾ ರಾವ್ ನಿರ್ದೇಶನದ 'ಯಾದೇವಿ' ನೃತ್ಯ ಪ್ರದರ್ಶನವು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಆಗಸ್ಟ್ 21ರಂದು ನಡೆಯಿತು.

ಯಾ ದೇವಿ ಮಹಿಳಾ ಸಬಲೀಕರಣ ಸಾಧ್ಯತೆಗಳ ಒಂದು ಅದ್ಭುತ ಶೋಧನೆ. ಸಂಸ್ಕೃತಿ, ಕಾಲ, ಪರಂಪರೆ ಮತ್ತು ಸೃಜನಶೀಲತೆಯ ಅಪೂರ್ವ ಸಂಗಮ. ಸಂಸ್ಕೃತಿಯನ್ನು ಶೈಕ್ಷಣಿಕವಾಗಿ ಪ್ರತಿಬಿಂಬಿಸುವ ಈ ನೃತ್ಯಪ್ರಕಾರ ಯುನೈಟೆಡ್ ಕಿಂಗ್‌ಡಮ್, ಬ್ರೆಜಿಲ್, ಸ್ವೀಡನ್ ಮತ್ತು ಭಾರತ ಈ ನಾಲ್ಕು ದೇಶಗಳ, ನಾಲ್ಕು ಕಲಾವಿದರ, ಕಥಕ್, ಭರತನಾಟ್ಯ, ಕೂಚುಪುಡಿ, ಯಕ್ಷಗಾನ ಮತ್ತು ಮಯೂರ್ ಬಂಜಭಾವೋ ಈ ಐದು ನೃತ್ಯಪ್ರಕಾರಗಳು ನೋಡುಗರಿಗೊಂದು ನೆನಪಲ್ಲಿ ಉಳಿಯುವಂತಹ ಅನುಭವ ನೀಡಿತು.

ನವೀನ ಮಾದರಿಯ ಈ ನೃತ್ಯ ಕಾರ್ಯಕ್ರಮ ಯುನೈಟೆಡ್ ಕಿಂಗ್‌ಡಮ್‌ನ ನೋಡುಗರಿಗಾಗಿ ವಿಶೇಷವಾಗಿ ರಚಿಸಲಾಗಿದ್ದು ಭಾರತೀಯರ ಆಸಕ್ತಿಗನುಗುಣವಾಗಿ ರೂಪಿತಗೊಂಡಿತ್ತು. ಮೊದಲಿಗೆ ಭಾರತೀಯ ಸಾಂಪ್ರದಾಯಿಕ ನೃತ್ಯಪ್ರಕಾರಗಳ ಪರಿಚಯ ಮಾಡಿಕೊಟ್ಟು, ವಿಮೆನ್ ಇನ್ ಕಾಂಟೆಂಪರರಿ ಸೊಸೈಟಿ ಎಂಬ ಮೂಲಭೂತ ಉದ್ದೇಶದ ಅಡಿಯಲ್ಲಿ ಇತಿಹಾಸದಲ್ಲಿ ಆಗಿ ಹೋಗಿರುವ ಮೇರು ಸ್ತ್ರೀಯರ ಬಗೆಗಿನ ವಿಶ್ಲೇಷಣೆಯನ್ನು ತೋರಿಸಿಕೊಡಲಾಯಿತು. ನಂತರ ಶಕ್ತಿರೂಪಿಣಿ ದುರ್ಗಾಮಾತೆಯ ಮಹಾತ್ಮೆಯನ್ನು ಬಿಂಬಿಸುವ ನೃತ್ಯರೂಪಕ ನೋಡುಗರಲ್ಲಿ ಭಕ್ತಿ ಭಾವವನ್ನು ತುಂಬಿತು. ದೇವಿಕಾ ರಾವ್, ಬ್ರೆಜಿಲ್ ಮೂಲದ ಮ್ಯಾನುಯೆಲಾ ಬೆನಿನಿ, ಬೆಲಾರಾಸ್‌ನ ಯಾನ ಕೌಶಿಕಾವ, ಹಾಂಗಕಾಂಗ್‌ನ ಫನ್ ಯೂನ್ ಚಿಂಗ್, ಕುಲೇಶ್ವರ್ ಠಾಕೂರ್, ನಿಖಿಲ್ ಲಾಲ್, ರಾಜೇಶ್ ಕಟೀಲ್, ವಸಂತ ಕಟೀಲ್, ಕೃಷ್ಣ ಕಟೀಲ್, ವೈಷ್ಣವಿ ರಾವ್, ಆನ್ನಾ ಬೆತ್ ರಾಬಿನ್‌ಸನ್, ಪ್ರವೀಣ್ ಡಿ ರಾವ್ ಮುಂತಾದ ಕಲಾವಿದರನ್ನೊಳಗೊಂಡ ಈ ಕಾರ್ಯಕ್ರಮ ದೆಹಲಿ ನೋಡುಗರ ಕಣ್ಮನ ಸೆಳೆದಿತ್ತು.

ರಾಜ್ಯ ಸಭಾ ಸದಸ್ಯ, ಮಾಜಿ ಕೇಂದ್ರ ಸಚಿವ ಶ್ರೀ ಆಸ್ಕರ್ ಫರ್ನಾಂಡೆಸ್, ಸಿ.ಡಿ. ಫೌಂಡೇಶನ್‌ನ ನಿರ್ದೇಶಕಿ ಶ್ರೀಮತಿ ಸುಮಿತಾ ದಾಸ್, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಸೇರಿದಂತೆ ಎಲ್ಲ ಕಾರ್ಯಕಾರಿ ಸಮಿತಿಯ ಪದಾಧಿಕಾರಿ ಮತ್ತು ಸದಸ್ಯರುಗಳ ಉಪಸ್ಥಿತಿ ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿತು. ಶ್ರೀಮತಿ ಪೃಥ್ವಿ ಕಾರಂಜೆ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಅ

***ಪೃಥ್ವಿ ಕಾರಂಜೆ***



# ಸಂಘದಲ್ಲಿ ನಾಟಕ ವರ್ಷ 2016-ರಂಗ ಗೌರವ ಮತ್ತು ನಾಟಕಗಳ ಪ್ರದರ್ಶನ

ದೆಹಲಿ ಕರ್ನಾಟಕ ಸಂಘದ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರದ ಸಹಯೋಗದೊಂದಿಗೆ ರಂಗಮಂಟಪ ಬೆಂಗಳೂರು ಇವರ ನಾಟಕ ವರ್ಷ 2016ರ ಅಂಗವಾಗಿ ರಂಗಗೌರವ ಪ್ರಶಸ್ತಿ ಪ್ರದಾನ ಮತ್ತು ಎರಡು ನಾಟಕಗಳ ಪ್ರದರ್ಶನವನ್ನು ಸಂಘದ ಸಭಾಂಗಣದಲ್ಲಿ ಇದೇ ಅಗಸ್ಟ್ 13 ಮತ್ತು 14ರಂದು ನಡೆಯಿತು.

ಜಾನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಮತ್ತು ದೆಹಲಿಯ ರಂಗಕರ್ಮಿ ಮತ್ತು ಸಂಘಟಕರಾದ ಶಿವಾನಂದ ಇಂಗಳೇಶ್ವರ ಅವರಿಗೆ ರಂಗಮಂಟಪ ರಂಗ ಗೌರವವನ್ನು ನೀಡಿ ಸನ್ಮಾನಿಸಲಾಯಿತು. ರಂಗಮಂಟಪದ ಚಂಪಾ ಶೆಟ್ಟಿ ಅವರ ನಿರ್ದೇಶನದಲ್ಲಿ ವೈದೇಹಿಯವರ ಕಥೆಗಳನ್ನು ಆಧರಿಸಿದ ಅಕ್ಕು ಮತ್ತು ಪ್ರಕಾಶ್ ಪಿ. ಶೆಟ್ಟಿ ಅವರ ನಿರ್ದೇಶನದಲ್ಲಿ ಕೆ.ವೈ. ನಾರಾಯಣ ಸ್ವಾಮಿ ಅವರ ಮಲ್ಲಿಗೆ ನಾಟಕಗಳನ್ನು ಪ್ರದರ್ಶಿಸಲಾಯಿತು.

ಈ ಸಂದರ್ಭದಲ್ಲಿ ಹಿರಿಯ ನಾಟಕಕಾರ, ಕವಿ ಪ್ರೊ. ಎಚ್.ಎಸ್. ಶಿವಪ್ರಕಾಶ್ ಅವರು ದೆಹಲಿಯಲ್ಲಿ ನಡೆಯುತ್ತಿರುವ ಕನ್ನಡ ರಂಗ ಚಟುವಟಿಕೆಗಳ ಕುರಿತು ಮಾತಾಡುತ್ತಾ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಸಂಘದ ಅಧ್ಯಕ್ಷರಾಗಿ ಬಂದ ಮೇಲೆ ಯುದ್ಧವನ್ನು ಮಾಡುವ ರೀತಿಯಲ್ಲಿ ಬಹಳಷ್ಟು ಉತ್ಸಾಹದಿಂದ ನಾಟಕ ಚಟುವಟಿಕೆಯನ್ನು ಚುರುಕುಗೊಳಿಸಿದ್ದಾರೆ ಎಂದರು. ಅದಕ್ಕೆ ಪ್ರೋತ್ಸಾಹವನ್ನು ನೀಡಿದ ದೆಹಲಿಯ ಕನ್ನಡಿಗರನ್ನು ಕೂಡಾ ಅಭಿನಂದಿಸಿದರು. "ಪ್ರಕಾಶ್ ಶೆಟ್ಟಿ ಮತ್ತು ಚಂಪಾ ಶೆಟ್ಟಿ ಅವರಿಬ್ಬರನ್ನು ನಾನು, ಮಗಳು-ಅಳಿಯ ಅನ್ನಬೇಕೋ ಅಥವಾ ಮಗ-ಸೊಸೆ ಅನ್ನಬೇಕೋ ಗೊತ್ತಿಲ್ಲ! ಈಕೆ ವಿದ್ಯಾರ್ಥಿನಿಯಾಗಿ ಇದ್ದಂದಿನಿಂದ ಆಕೆಯ ಪ್ರತಿಭೆಯನ್ನು ಗುರುತಿಸಿದ್ದೆ. ಆದರೆ ಇವರಿಬ್ಬರು ಆಗಿನ ಪ್ರತಿಭೆಯನ್ನು ಮೀರಿ ಈಗ ಕರ್ನಾಟಕದ ದೊಡ್ಡ ಪ್ರತಿಭೆಗಳಾಗಿ ಬೆಳೆದಿದ್ದಾರೆ. ಇಷ್ಟು ಬೇಗ ಅವರು ನಾಟಕ ರಂಗಗಳಲ್ಲಿ ತಮ್ಮ ಛಾಪನ್ನು ಇಷ್ಟೊಂದು ರೀತಿಯಲ್ಲಿ ಮೂಡಿಸಿರುವುದು ನನಗೆ ಬಹಳ ಹೆಮ್ಮೆಯ ವಿಷಯ" ಎಂದರು. ಕರ್ನಾಟಕದಲ್ಲಿ ಕನ್ನಡದ ಕಹಳೆಯನ್ನು ಊದುವುದು ಸುಲಭ, ಆದರೆ ದೆಹಲಿಯಲ್ಲಿ ಕನ್ನಡದ ಕಹಳೆಯನ್ನು ಊದುವುದು ಕಷ್ಟ ಎಂದು ಅವರು ಅಭಿಪ್ರಾಯ ಪಟ್ಟರು. ದೆಹಲಿಯಲ್ಲಿ ಕನ್ನಡ ನಾಟಕಕ್ಕಾಗಿ ಬಹಳ ಕೆಲಸವನ್ನು ಮಾಡಿರುವ



ಶಿವಾನಂದ ಇಂಗಳೇಶ್ವರರನ್ನು ಗುರುತಿಸಿ ಸನ್ಮಾನ ಮಾಡುತ್ತಿರುವುದು ಬಹಳ ಮುಖ್ಯವಾದ ಒಂದು ಕೆಲಸ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಶ್ರೀ ಬಲವಂತ ರಾವ್ ಪಾಟೀಲ್ ಅವರು ಮಾತಾಡುತ್ತಾ ದೆಹಲಿ ಕರ್ನಾಟಕ ಸಂಘವು ಸದಾ ಚಟುವಟಿಕೆಯಲ್ಲಿ ತೊಡಗಿಸಿರುವಂತಹ ಸಂಘ. ಇದು ದೆಹಲಿಯಲ್ಲಿದ್ದರೂ ಕೂಡಾ ಅದು ಬೆಂಗಳೂರಿನಲ್ಲಿ ಇದೆ ಅಂತ ಅನಿಸುತ್ತಾ ಇದೆ. ಬೆಂಗಳೂರು ಮತ್ತು ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳ ನಾಟಕ, ಜಾನಪದ ಕಲಾತಂಡಗಳ ಪ್ರದರ್ಶನ ಮೊದಲಾದ ಸಾಂಸ್ಕೃತಿಕ ಚಟುವಟಿಕೆಗಳನ್ನು ಮಾಡುವುದರ ಮೂಲಕ ದೆಹಲಿ ಕರ್ನಾಟಕ ಸಂಘವು ಕ್ರಿಯಾಶೀಲವಾಗಿದ್ದು ಕನ್ನಡಿಗರೆಲ್ಲರ ಅಭಿನಂದನೆಗೆ ಪಾತ್ರವಾಗಿದೆ ಎಂದರು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತಾಡುತ್ತಾ ರಂಗ ಮಂಟಪವು ಈ ಹಿಂದೆ ಎರಡು ನಾಟಕಗಳನ್ನು ದೆಹಲಿಯಲ್ಲಿ ಪ್ರದರ್ಶಿಸಿ ಬಹಳಷ್ಟು ಪ್ರಶಂಸೆಯನ್ನು ಪಡೆದಿತ್ತು. ಅವರ 'ಅಕ್ಕು' ನಾಟಕದ ಕುರಿತು ಕರ್ನಾಟಕದ ಎಲ್ಲಾ ಪತ್ರಿಕೆಗಳಲ್ಲೂ ಅತ್ಯಂತ ಉತ್ತಮ ವಿಮರ್ಶೆಗಳು ಬಂದಿವೆ. ರಂಗಮಂಟಪವು ಕೆಲವೇ ನಾಟಕಗಳನ್ನು ಮಾಡಿದರೂ ಅವುಗಳಿಗೆ ಕರ್ನಾಟಕದ ಪತ್ರಿಕೆಗಳಲ್ಲಿ ಉತ್ತಮ ವಿಮರ್ಶೆಗಳು ಬಂದಿವೆ. ಪ್ರೇಕ್ಷಕರು ಕೂಡಾ ಅವುಗಳನ್ನು ಮೆಚ್ಚಿಕೊಂಡಿದ್ದಾರೆ. ಹಾಗಾಗಿಯೇ ನಾಟಕವರ್ಷ 2016 ಕಾರ್ಯಕ್ರಮವನ್ನು ದೆಹಲಿಯಲ್ಲಿ ಮಾಡುತ್ತಿದ್ದೇವೆ ಎಂದರು. ರಂಗ ಗೌರವನ್ನು ಪಡೆದ ಶಿವಾನಂದ ಇಂಗಳೇಶ್ವರ ಅವರು ಸಂಘದಲ್ಲಿ ಆಗುವ ಎಲ್ಲಾ ನಾಟಕಗಳಿಗೆ, ನೃತ್ಯ, ಸಂಗೀತ ಇತ್ಯಾದಿ ಕಾರ್ಯಕ್ರಮಗಳಿಗೆ ಧ್ವನಿ ಮತ್ತು ಬೆಳಕಿನ ವ್ಯವಸ್ಥೆಯನ್ನು ಕಾರ್ಯಕ್ರಮ



## ರಂಗ ಪ್ರಶಸ್ತಿ ವಿಜೇತರು

### ಡಾ. ಪುರುಷೋತ್ತಮ ಬಿಳಿಮಲೆ

ನವದೆಹಲಿಯ ಜವಾಹರ ಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿರುವ ಡಾ. ಪುರುಷೋತ್ತಮ ಬಿಳಿಮಲೆ ಅವರು ಜಾನಪದ ವಿದ್ವಾಂಸರಾಗಿ ಮತ್ತು ವಿಮರ್ಶಕರಾಗಿ ನಾಡಿನಾದ್ಯಂತ ಹೆಸರಾಗಿದ್ದಾರೆ. ಭಾರತೀಯ ಅಧ್ಯಯನಗಳ ಅಮೇರಿಕಾ ಸಂಸ್ಥೆ, ನವದೆಹಲಿಯಲ್ಲಿ ನಿರ್ದೇಶಕರಾಗಿ ಕೆಲಸ ಮಾಡಿರುವ ಅವರು ದೇಶವಿದೇಶಗಳಲ್ಲಿ ಹಲವಾರು ವಿಚಾರಸಂಕಿರಣಗಳಲ್ಲಿ ವಿಷಯ ಮಂಡನೆ ಮಾಡಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಮತ್ತು ಮಂಗಳೂರು ವಿಶ್ವವಿದ್ಯಾಲಯದಲ್ಲಿಯೂ ಅವರು ಅಧ್ಯಾಪನ ಕೆಲಸದಲ್ಲಿದ್ದರು. ಜಾನಪದ, ಯಕ್ಷಗಾನ,



ಸಂಶೋಧನೆ ಮತ್ತು ವಿಮರ್ಶೆಗಳ ಹಲವಾರು ಪುಸ್ತಕಗಳನ್ನು ಬರೆದಿರುವ ಅವರು ಅಂಕಣಕಾರರಾಗಿಯೂ ವಿಚಾರಶೀಲ ಚಿಂತನೆಗಳನ್ನು ಮಾಡಿದ್ದಾರೆ. ಅವರು ದೆಹಲಿ ಕರ್ನಾಟಕ ಸಂಘದ ಮಾಜೀ ಅಧ್ಯಕ್ಷರೂ ಆಗಿದ್ದಾರೆ.



ತನ್ನದೇ ಎಂಬ ನಿಷ್ಠೆಯಿಂದ ಮಾಡುತ್ತಾರೆ. ಅವರು ಸಂಘದೊಂದಿಗೆ ನಿರಂತರವಾಗಿ ತೊಡಗಿಸಿಕೊಂಡು ಇಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗುವುದಕ್ಕೆ ದುಡಿದಿದ್ದಾರೆ, ಎಂದರು. ಮುಂದಿನ ದಿನಗಳಲ್ಲಿ ಪ್ರೊ. ಎಚ್.ಎಸ್. ಶಿವಪ್ರಕಾಶ್ ಅವರ ನಾಟಕವನ್ನು ಸಂಘವು ಮಾಡುವ ಆಲೋಚನೆ ಇದೆ ಎಂದು ಕೂಡಾ ನುಡಿದರು.

ರಂಗ ಗೌರವ ಸ್ವೀಕರಿಸಿದ ಶಿವಾನಂದ ಇಂಗಳೇಶ್ವರ ಮಾತಾಡುತ್ತಾ ನಾಟಕ ಅಥವಾ ಏನೇ ಒಂದು ಸಾಂಸ್ಕೃತಿಕ ಕಾರ್ಯಕ್ರಮ ಆಗಬೇಕಾದಾಗ ಸಮೂಹದ ಅವಶ್ಯಕತೆ ಬಹಳ ಅಗತ್ಯ. ಆದರೆ ಸಮೂಹ ಇಲ್ಲದೇ ನಾವು ಏನೂ ಮಾಡೋದಕೆ ಆಗುವುದಿಲ್ಲ. ಬೆಂಗಳೂರಿನ ರಂಗಮಂಟಪದವರು ನೀಡಿದ ಗೌರವ ನನ್ನೊಂದಿಗೆ ಅಂದಿನಿಂದ ಇಂದಿನವರೆಗೆ ಮತ್ತು ಇನ್ನು ಮುಂದೆ ಕೆಲಸ ಮಾಡುವ ಎಲ್ಲಾ ಸಹಕಲಾವಿದರಿಗೆ ಸಂದ ಗೌರವ ಎಂದರು.

ರಂಗಮಂಟಪದ ಪ್ರಕಾಶ್ ಶೆಟ್ಟಿ ಅವರು ಪ್ರಾಸ್ತಾವಿಕವಾಗಿ ಮಾತಾಡುತ್ತಾ "ಸೆಪ್ಟೆಂಬರ್‌ಗೆ ನಾವು ರಂಗಭೂಮಿಗೆ ಬಂದು ಸುಮಾರು 25 ವರ್ಷವಾಗುತ್ತದೆ. ನಾವು ಮೊದಲು ಮಾಡಿದ ನಾಟಕ ಎಚ್.ಎಸ್. ಶಿವಪ್ರಕಾಶ್ ಅವರ 'ಮಂಟೇಸ್ವಾಮಿ ಕಥಾ ಪ್ರಸಂಗ. ಇವತ್ತು ಅವರು ನಮ್ಮ ಕಾರ್ಯಕ್ರಮಕ್ಕೆ ಬಂದಿರುವುದು ನಮಗೆ ತುಂಬಾ ಸಂತೋಷವಾಗಿದೆ" ಎಂದರು. ರಂಗಮಂಟಪವು ತಂಡ ಸುಮಾರು ಎಂಟು ವರ್ಷಗಳ ಹಿಂದೆ ಹುಟ್ಟಿದಂತಹ ತಂಡ. ಅದು ಹೆಸರಾಂತ ರಂಗನಿರ್ದೇಶಕ, ಬೆಳಕಿನ ವಿನ್ಯಾಸಕಾರರಾದ ವಿ. ರಾಮಮೂರ್ತಿಯವರ ಲೈಟಿಂಗ್ ವರ್ಕ್‌ಶಾಪ್ ಮುಖಾಂತರ ಆರೇಳು ಜನ ರಂಗದ ಹಿಂದೆ ಕೆಲಸ ಮಾಡುವಂತಹ ಹುಡುಗರು ಕಟ್ಟಿದಂತಹ ತಂಡವಾಗಿದೆ. ನಾಟಕ ವರ್ಷ"ವು ನಾಲ್ಕು ವರ್ಷಗಳಿಂದ ನಡೆಯುತ್ತಿದೆ. ಮೊದಲ ಎರಡು ವರ್ಷದಲ್ಲಿ ಬೆಂಗಳೂರಿನಲ್ಲಿಯೇ ಮಾಡಿದೆವು. ಆನಂತರ ನಾಟಕ ವರ್ಷವನ್ನು ಬೆಂಗಳೂರು ಬಿಟ್ಟು ಹೊರಗಡೆ ಮಾಡಬೇಕೆಂದು ಆಲೋಚನೆ ಮಾಡಿದೆವು. ಕಳೆದ ಬಾರಿ ಮೈಸೂರಲ್ಲಿ ಈ ವರ್ಷ ದೆಹಲಿಯಲ್ಲಿ ಮಾಡುತ್ತಾ ಇದ್ದೇವೆ. ಪ್ರತಿ ನಾಟಕ ವರ್ಷ ಸಂದರ್ಭದಲ್ಲೂ ಕೂಡಾ ರಂಗಭೂಮಿಯಲ್ಲಿ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಯಾವುದೇ ಅಪೇಕ್ಷೆ ಇಲ್ಲದೆ ಗಣನೀಯವಾಗಿ ಸೇವೆ ಸಲ್ಲಿಸಿರುವಂತಹ ಹಿರಿಯರನ್ನು ಗುರುತಿಸಿ ಅವರನ್ನು ಅಭಿನಂದನೆ ಮಾಡುತ್ತಾ ಬಂದಿದ್ದೇವೆ ಎಂದರು. ಮೊದಲನೇ ವರ್ಷ ಶಶಿಧರ ಅಡಪ, ಎರಡನೇ ವರ್ಷ ಹಿರಿಯ ರಂಗಕರ್ಮಿ ವೆಂಕಟಸುಬ್ಬಯ್ಯ, ಮೂರನೇ ವರ್ಷ ಮೈಸೂರಿನ ಹಿರಿಯ ನಟಿ ರಾಮೇಶ್ವರಿ ವರ್ಮ ಮತ್ತು ರಾಷ್ಟ್ರಪ್ರಶಸ್ತಿ ವಿಜೇತ ನಟ ಸಂಚಾರಿ ವಿಜಯ್ ಹಾಗೆಯೇ ಈ ವರ್ಷದ ರಂಗ ಗೌರವವನ್ನು ದೆಹಲಿಗೆ ಚಿರಪರಿಚಿತರಾಗಿರುವಂತಹ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಮತ್ತು ಜಾನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ನೀಡುತ್ತಿದ್ದೇವೆ ಎಂದರು.

ಎರಡನೇ ದಿನ ನಡೆದ ಸಮಾರಂಭದಲ್ಲಿ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ರಂಗಗೌರವವನ್ನು ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ನಾಟಕಕಾರ ಕೆ.ವೈ. ನಾರಾಯಣ ಸ್ವಾಮಿ ಮಾತಾಡಿ ಸಮಾರಂಭದಲ್ಲಿ ಭಾಗವಹಿಸಿದ ಪ್ರೊ. ಶಿವಪ್ರಕಾಶ್ ಮತ್ತು ಡಾ. ಬಿಳಿಮಲೆ ಅವರ ಜತೆಗಿನ ಒಡನಾಟಗಳನ್ನು ನೆನೆದರು. "ಪ್ರೊ. ಶಿವಪ್ರಕಾಶ್ ಅವರು ನನ್ನ ಕಾವ್ಯಗುರುವಾಗಿದ್ದರು. ಸುಮಾರು 10 ವರ್ಷಗಳ ಕಾಲ ಅವರ ಗರಡಿಯಲ್ಲಿ ನಾನು ಕವಿತೆಯನ್ನು ಓದುವುದು ಅರ್ಥ ಮಾಡಿಕೊಳ್ಳುವದನ್ನು ಕಲಿತೆ. ಬಿಳಿಮಲೆ ಅವರು ತಮ್ಮ ಅಲೋಚನೆಗಳ ಮೂಲಕ ನಮಗೆ ಕಲಿಸಿದ್ದಾರೆ, ತಿದ್ದಿ ಬೆಳೆಸಿದ್ದಾರೆ" ಎಂದು ನಾರಾಯಣ ಸ್ವಾಮಿ ಹೇಳಿದರು. ಇವರಿಬ್ಬರೂ ಒಂದೇ ಕಾಲಕ್ಕೆ ಕರ್ನಾಟಕವನ್ನು ಬಿಟ್ಟು ಬಂದರು. ಅವರು ಕರ್ನಾಟಕವನ್ನು ಬಿಟ್ಟ ಕಾಲ ಬಹಳ ಚಾಲೆಂಜಿಂಗ್ ಆಗಿತ್ತು. ಹಾಗಾಗಿ ಕರ್ನಾಟಕದಲ್ಲಿ ಆ ರೀತಿಯಾಗಿ ನಮ್ಮ ತಲೆಮಾರಿನ ಹುಡುಗರ ದೃಷ್ಟಿಯೊಳಗೆ ಒಂದು ಮಾದರಿಯಿಲ್ಲದಂತೆ ಆಗಿ ಹೋಯಿತು. ಶಿವಪ್ರಕಾಶ್ ಅವರು ನಿಜಕ್ಕೂ ಕನ್ನಡದಲ್ಲಿ ಜನರ ನಾಟಕಕಾರ. ಅವರು ಕನ್ನಡದ ಜನಸಮುದಾಯಗಳ ನೆನಪಿನಿಂದ ಘಟನೆಗಳನ್ನು ಕಂಡು ಮಂಟೆಸ್ವಾಮಿ ಮೊದಲಾದ ನಾಟಕಗಳನ್ನು ಬರೆದರು ಎಂದರು.

ಪ್ರೊ. ಶಿವಪ್ರಕಾಶ್ ಮಾತಾಡಿ ರಂಗ ಗೌರವ ಪುರಸ್ಕೃತ ಡಾ. ಬಿಳಿಮಲೆಯವರು ತಮ್ಮ ಹಿಂದಿನ ಎಲ್ಲ ಸಾಧನೆಗಳಿಗೆ ಮುಕುಟವಿಟ್ಟಂತೆ ಇವತ್ತು ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಪ್ರಥಮ ಪ್ರಾಧ್ಯಾಪಕರಾಗಿದ್ದಾರೆ. ಅಲ್ಲೂ ಕೂಡಾ ಅವರು ಬಹಳ ಬೇಗ ಸಕ್ರಿಯವಾಗಿ, ಕಾರ್ಯನಿರತರಾಗಿದ್ದಾರೆ ಎಂದರು.

ಶ್ರೀ ಬಲವಂತರಾವ್ ಪಾಟೀಲ್ ಅವರು ಮಾತಾಡುತ್ತಾ ನಾರಾಯಣ ಸ್ವಾಮಿ ಅವರು ಇತ್ತೀಚೆಗೆ ತಮ್ಮ ನಾಟಕ ರಚನೆಗಳ ಮುಖಾಂತರ ಕನ್ನಡ ನಾಡಿನಲ್ಲಿ ಒಬ್ಬ ಭರವಸೆಯ ನಾಟಕಕಾರರಾಗಿ ಹೊರಹೊಮ್ಮಿದ್ದಾರೆ. ಅವರು ಶಿವಪ್ರಕಾಶ್, ಚಂದ್ರಶೇಖರ ಕಂಬಾರ, ಗಿರೀಶ್ ಕಾರ್ನಾಡರಂತೆ ನಾಟಕದಲ್ಲಿ ಹೆಸರು ಪಡೆಯುತ್ತಿದ್ದಾರೆ ಎಂದರು. ಅವರು ತುಂಬಾ ಒಳ್ಳೆಯ ನಾಟಕಗಳನ್ನು ಈಗಾಗಲೇ ಕೊಟ್ಟಿದ್ದಾರೆ. ಮಲೆಗಳಲ್ಲಿ ಮದುಮಗಳು ಅಹೋರಾತ್ರಿ ಬೃಹತ್ ನಾಟಕ ಈಗಗಾಲೆ ಹಲವಾರು ಪ್ರದರ್ಶನಗಳನ್ನು ಕಂಡು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಹಾಗೆಯೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವಚನ ಚಳುವಳಿಯನ್ನು ಕುರಿತು ಒಂದು ಅಹೋ ರಾತ್ರಿ ನಾಟಕ ಮಾಡಲು ಪ್ರಗತಿಪರ ವಿಚಾರವನ್ನು ಹೊಂದಿರುವ ಯುವ ಲೇಖಕಕರ ಒಂದು ತಂಡವನ್ನು ಮಾಡಿಕೊಂಡು ಈಗಾಗಲೇ ಕಾರ್ಯನಿರತರಾಗಿದ್ದಾರೆ. ಆ ನಾಟಕ ಪ್ರದರ್ಶನ ಆದರೆ ಅದು ಸಂಚಲನವನ್ನೇ ಮೂಡಿಸುತ್ತದೆ ಎಂಬ ಆಶಾಭಾವನೆ ನಮ್ಮೆಲ್ಲರಿಗಿದೆ ಎಂದರು.

ರಂಗಗೌರವ ಸ್ವೀಕರಿಸಿದ ಡಾ. ಬಿಳಿಮಲೆ ಅವರು ಮಾತಾನಾಡಿ ನಾರಾಯಣ ಸ್ವಾಮಿ ಅವರು ಕನ್ನಡ ಭಾಷೆಗೆ ಬಹಳ ದೊಡ್ಡ ಆಯಾಮವನ್ನು ಕೊಟ್ಟವರು; ಅವರು ಭಾಷೆಯನ್ನು ಮುರಿದು ಅದಕ್ಕೆ ಹೊಸ ಶಕ್ತಿ ಕೊಡುವ ಬಹಳ ದೊಡ್ಡ ಧೀಮಂತರು ಎಂದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ದೆಹಲಿಯಲ್ಲಿ ನಡೆದ ಭಾರತ ಪರ್ವ ಕಾರ್ಯಕ್ರಮಕ್ಕೆ ಬಂದ ಕಲಾವಿದರು ಜೆ.ಎನ್.ಯು.ವಿನಲ್ಲಿ ನೀಡಿದ ಕಾರ್ಯಕ್ರಮವನ್ನು ಮೆಚ್ಚಿ ಇಲಾಖೆಯ ಜಂಟಿ ನಿರ್ದೇಶಕರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

ರಂಗ ಮಂಟಪದ ನಟಿ ಗೀತಾ ಸುರತ್ಕಲ್ ಅವರು ಮಾತಾಡಿ ಡಾ. ಬಿಳಿಮಲೆ ಅವರನ್ನು ಅವರೊಬ್ಬ ರಂಗಭೂಮಿಯ ಕಾರ್ಯಕರ್ತ ಎಂಬ ನೆಲೆಯಲ್ಲಿ ಅಲ್ಲ, ದೇಶದ ಅತ್ಯಂತ ಅಪರೂಪದ ಪ್ರಜ್ಞಾವಂತ ಚಿಂತಕರಲ್ಲಿ ಒಬ್ಬರು ಅನ್ನುವ ನೆಲೆಯಿಂದ ಸನ್ಮಾನಿಸಿದ್ದೇವೆ ಎಂದರು.

ಇದೇ ವೇಳೆ ನಾಟಕಕಾರರಾದ ಶ್ರೀ ಕೆ.ವೈ. ನಾರಾಯಣ ಸ್ವಾಮಿ ಅವರನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಸನ್ಮಾನಿಸಲಾಯಿತು. 'ಅಕ್ಕು' ಪಾತ್ರ ವಹಿಸಿದ ರಂಗಮಂಟಪದ ಕಲಾವಿದೆ ಯಶಸ್ವಿನಿ ರಾವ್ ಅವರು ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾಕ್ಕೆ ಆಯ್ಕೆಯಾಗಿದ್ದು ಅವರನ್ನೂ ಇದೇ ವೇದಿಕೆಯಲ್ಲಿ ಅಭಿನಂದಿಸಲಾಯಿತು. ಸಂಘದ ಉಪಾಧ್ಯಕ್ಷೆ ಶ್ರೀಮತಿ ಆಶಾಲತ ಉಪಸ್ಥಿತರಿದ್ದರು. ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಸಖಾರಾಮ ಉಪ್ಪೂರು ಅವರು ಕಾರ್ಯಕ್ರಮ ನಿರೂಪಿಸಿದರು. ಅ

*ಸಖಾರಾಮ ಉಪ್ಪೂರು*



**ಶಿವಾನಂದ ಇಂಗಳೇಶ್ವರ**

ದೆಹಲಿ ನಗರದಲ್ಲಿ ಕನ್ನಡ ರಂಗ ಚಟುವಟಿಕೆಯನ್ನು ಉಳಿಸಿ, ಬೆಳೆಸಿಕೊಂಡು ಹೋಗುವ ದಿಸೆಯಲ್ಲಿ ಹವ್ಯಾಸಿ ರಂಗಕರ್ಮಿಗಳೊಂದಿಗೆ 'ದಿನಕರ' (ದಿಲ್ಲಿ ನಗರ ಕನ್ನಡ ಕಲಾವಿದರ ರಂಗ) ಎಂಬ ರಂಗತಂಡವನ್ನು ಹುಟ್ಟು ಹಾಕಿದ ಶಿವಾನಂದ ಇಂಗಳೇಶ್ವರ ಅವರು ದೆಹಲಿಯಲ್ಲಿ ಮಾತ್ರವಲ್ಲದೇ ಹಂಪಿ ಉತ್ಸವ, ಬೆಂಗಳೂರು, ಬೆಳಗಾವಿ ವಿಶ್ವಕನ್ನಡ ಸಮ್ಮೇಳನ, ಇಲಕಲ್ಲ, ವಾರಾಣಾಸಿ, ಮೈಸೂರು ರಂಗಾಯಣ ಮೊದಲಾದೆಡೆ ಹಲವಾರು ನಾಟಕಗಳನ್ನು ನಿರ್ದೇಶಿಸಿ ಪ್ರದರ್ಶಿಸಿದ್ದಾರೆ. ವೃತ್ತಿ ನಿಮಿತ್ತ ಬೆಳಗಾವಿ, ಪುಣೆ, ಭೋಪಾಲ್, ಜೈಪುರ್, ನವದೆಹಲಿ ಮೊದಲಾದೆಡೆ ಮರಾಠಿ, ಹಿಂದಿ ಹಾಗೂ ಇತರ ಸ್ಥಾನೀಯ ಭಾಷೆಗಳ ಸ್ಥಳೀಯ ರಂಗ ತಂಡಗಳೊಂದಿಗೆ ರಂಗ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಪ್ರಾದೇಶಿಕ ರಂಗ ಪರಂಪರೆ ಹಾಗೂ ಸಾಂಸ್ಕೃತಿಕ ವಲಯದ ಅರಿವನ್ನು ಹೆಚ್ಚಿಸಿಕೊಂಡಿದ್ದಾರೆ. ಅವರು ಭಾರತ ಸರ್ಕಾರದ ನದಿಗಳ ಜೋಡಣೆ ಕಾರ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅ

# ಸಂಬಂಧಗಳೊಳಗೆ ಹೆಣ್ಣಿನ ಒಳನೋಟಗಳನ್ನು ಹುಡುಕಲು ಹೊರಟ ಅಕ್ಕು ಮತ್ತು ಮಲ್ಲಿಗೆ

## ಸಂಘದಲ್ಲಿ ರಂಗಮಂಟಪ ತಂಡದ ಎರಡು ನಾಟಕಗಳ ಪ್ರದರ್ಶನ



ಬೆಂಗಳೂರಿನ ರಂಗ ಮಂಟಪ ತಂಡವು ಈ ಹಿಂದಿನ ವರ್ಷಗಳಲ್ಲಿ ಪ್ರದರ್ಶಿಸಿದ ಗಾಂಧಿ ಬಂದ ಗಾಂಧಿ ಮತ್ತು ಅನಭಿಜ್ಞ ಶಾಕುಂತಲಾ ನಾಟಕಗಳು ನವದೆಹಲಿಯ ರಂಗಾಸಕ್ತರಿಂದ ಹೆಚ್ಚು ಮನ್ನಣೆಯನ್ನು ಪಡೆದಿದ್ದವು. ಅದೇ ತಂಡವು ಈ ಸಲ ನಾಟಕ ವರ್ಷ ಉತ್ಸವದ ಮೂಲಕ ವೈದೇಹಿ ಅವರ ಅಕ್ಕು ಮತ್ತು ಕೆ.ವೈ. ನಾರಾಯಣ ಸ್ವಾಮಿ ಅವರ ಮಲ್ಲಿಗೆ ನಾಟಕವನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಇದೇ ಆಗಸ್ಟ್ 13 ಮತ್ತು 14ರಂದು ಪ್ರದರ್ಶಿಸಿತು. ಎರಡೂ ನಾಟಕಗಳನ್ನು ನೋಡಿದ ದೆಹಲಿಯ ಪ್ರೇಕ್ಷಕರು ರಂಗಮಂಟಪ ತಂಡದ ಚಂಪಾ ಶೆಟ್ಟಿ ಮತ್ತು ಪ್ರಕಾಶ್ ಪಿ. ಶೆಟ್ಟಿ ಅವರ ಅಭಿಮಾನಿಗಳಾದರು. ಭರವಸೆಯ ನಾಟಕಗಳ ಮೂಲಕ ಈ ಇಬ್ಬರು ನಿರ್ದೇಶಕರೂ ಮತ್ತೊಮ್ಮೆ ದೆಹಲಿಯಲ್ಲಿ ಮೆರೆದರು. ಸಂಬಂಧಗಳ ಸಂಕೀರ್ಣ ಕಥಾಹಂದರದ ಜತೆಗೆ ಬಿಗು ನಿರ್ದೇಶನ, ವಿಶಿಷ್ಟ ರಂಗಸಜ್ಜಿಕೆ, ವಿನೂತನ ಬೆಳಕಿನ ವಿನ್ಯಾಸ, ಮೆಲುಕು ಹಾಕುವ ಸಂಗೀತ ಮತ್ತು ಅದ್ಭುತ ಅಭಿನಯಗಳ ಮೂಲಕ ಎರಡೂ ನಾಟಕಗಳು ಅಂತಾರಾಷ್ಟ್ರೀಯ ರಂಗಭೂಮಿಯ ನಾಟಕಗಳು ಪ್ರದರ್ಶನಗೊಳ್ಳುವ ನವದೆಹಲಿಯಲ್ಲಿ ಮುಕ್ತ ಪ್ರೇಕ್ಷಕರಿಗೆ ಅಪೂರ್ವವಾದ ಅನುಭವವನ್ನು ನೀಡಿದವು.

**ಅಕ್ಕು**

ತಮ್ಮ ಕಥೆಗಳ ಮೂಲಕ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಸಂವೇದನಾಶೀಲ ಬರಹಗಾರ್ತಿಯಾಗಿ ಗುರುತಿಸಿಕೊಂಡಿರುವ ವೈದೇಹಿಯವರು ಬರೆದ ಮೂರು ಕಥೆಗಳ ಆಧಾರದ ಮೇಲೆ ಅಕ್ಕು ನಾಟಕವು ರಂಗಭೂಮಿಯ ಮೇಲೇರಿದೆ. ಸಮಾಜದ ಸಮಸ್ಯೆಗಳ ಸಂಕೀರ್ಣತೆಯನ್ನು ಅಕ್ಷರಗಳ ಮೂಲಕ ಕಥೆಯಲ್ಲಿ ಹೇಳುವ ವೈದೇಹಿಯವರ ಚಿಂತನಾ ಲಹರಿಯನ್ನು ದೃಶ್ಯಶ್ರಾವ್ಯ ಮಾಧ್ಯಮವಾದ ರಂಗಭೂಮಿಯ ಮೂಲಕ ಪ್ರಸ್ತುತ ಪಡಿಸುವ ಸವಾಲನ್ನು ತೆಗೆದುಕೊಂಡು ಅದನ್ನು ಯಶಸ್ವಿಯಾಗಿ ನಿಭಾಯಿಸಿದವರು ರಂಗಮಂಟಪ ತಂಡದ ನಿರ್ದೇಶಕಿ ಚಂಪಾ ಶೆಟ್ಟಿಯವರು. 'ಅಕ್ಕು', 'ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು', ಮತ್ತು 'ಅಮ್ಮಚ್ಚಿಯೆಂಬ ನೆನಪು' ವೈದೇಹಿಯವರ ಮೂರು ಕಥೆಗಳ ಪಾತ್ರಗಳನ್ನು ಒಂದಕ್ಕೊಂದು ಹೆಣೆದು ಬೇರೆಯೇ ಒಂದು ಕಥೆಯನ್ನು ಸಿದ್ಧಪಡಿಸಿ ಈ ನಾಟಕವನ್ನು ತಯಾರಿಸಲಾಗಿದೆ. ಮುಖ್ಯ ಪಾತ್ರವಾದ ಅಕ್ಕು ವೈದೇಹಿಯವರ ಅಕ್ಕು ಕಥೆಯಿಂದ ಬಂದರೆ ನಾಟಕದಲ್ಲಿ ಬರುವ ಅಜ್ಜಿ ಪುಟ್ಟಮ್ಮತ್ತೆ ಕತೆಯಿಂದ ಬರುತ್ತಾರೆ. ಅಜ್ಜಿಯ ಮೊಮ್ಮಗಳು ಅಮ್ಮಚ್ಚಿ ಕತೆಯ ಮುಖ್ಯ ಪಾತ್ರದಿಂದ ಬೆಳೆಯುತ್ತಾಳೆ. ವೈದೇಹಿಯವರ ಕತೆಯಲ್ಲಿನ ಪಾತ್ರಗಳು ಕುಂದಾಪುರದ ಆಡು ಭಾಷೆ ಕುಂದಕನ್ನಡದಲ್ಲಿ ಮಾತಾಡುವಂತೆ ನಾಟಕದಲ್ಲಿಯೂ ಪಾತ್ರಗಳು ಅದೇ ಭಾಷೆಯನ್ನು ಬಹಳಷ್ಟು ಪ್ರಭಾವಶಾಲಿಯಾಗಿ ಬಳಸಿದವು.

ಅರೆಹುಚ್ಚಿಯಾಗಿದ್ದ ಅಕ್ಕು ತನ್ನ ಗಂಡ ಸನ್ಯಾಸಿಯ ಹಿಂದೆ ಹೋದಂದಿನಿಂದ ಬಸುರಿ ಎಂದು ನಟಿಸುತ್ತಿದ್ದಳು. ಅವಳಿಗೆ ಬೇಕೆಂದಾದಾಗ ಹೊಟ್ಟೆನೋವು ಬರುತ್ತಿತ್ತು. ಜತೆಗೆ ತನ್ನ ಕೈಯಲ್ಲಿ ಯಾವಾಗಲೂ ಇರುವ ಟುವಾಲು ಅವಳ ಭಾಗವೇ ಆಗಿತ್ತು. ಅವಳ ಗಲಾಟೆ ಹೆಚ್ಚಾದಾಗ ವಾಸು ಚಿಕ್ಕಪ್ಪಯ್ಯನಿಂದ ಸರಿಯಾಗಿ ಪೆಟ್ಟು ತಿನ್ನುತ್ತಿದ್ದಳು. ಅವಳ ಗಂಡ ಸಂಕಪ್ಪ, ಯಾವುದೋ ಸ್ವಾಮಿಗಳ ಹಿಂದೆ ಹೋದವ ಕಾಶಿ, ಹಿಮಾಲಯಕ್ಕೂ ಹೋಗಿ, ಸ್ವಾಮಿಗಳ ಜತೆಗೆ ಒಳ್ಳೆಯ ಸಂಪಾದನೆಯನ್ನೂ ಮಾಡಿದ ಎನ್ನುತ್ತಾನೆ. ಮತ್ತೆ ಬಂದ ಗಂಡನನ್ನು ತೊಟ್ಟಿಲಿನ ಸರಪಳಿ ಎಳೆದು ಬೀಸಿ ಬೀಸಿ ಹೊಡೆದು ಓಡಿಸುತ್ತಾಳೆ.

ವೈದೇಹಿಯವರ ಅಮ್ಮಚ್ಚಿಯೆಂಬ ನೆನಪು ಕಥೆಯ ಅಮ್ಮಚ್ಚಿ ನಾಟಕದಲ್ಲಿ ಅವರ ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು ಕತೆಯಲ್ಲಿರುವ ಪುಟ್ಟಮ್ಮತ್ತೆಯ ಮೊಮ್ಮಗಳಾಗುತ್ತಾಳೆ. ವೈದೇಹಿಯವರ ಅಮ್ಮಚ್ಚಿ ಕಥಾಪಾತ್ರದ ಕುರಿತು ಹಿರಿಯ ಲೇಖಕ ಶಾಂತಿನಾಥ ದೇಸಾಯಿ ಅವರು "ಆಕೆ ಬಂಡಾಯದ ಅರಿವನ್ನು ಒಳಗಿಟ್ಟುಕೊಂಡಿರುವವಳು. ಗಟ್ಟಿಯಾದ ವೈಯಕ್ತಿಕತೆಯಿರುವವಳು. ವೆಂಕಪ್ಪಯ್ಯನಿಂದ ಅತ್ಯಾಚಾರಕ್ಕೂ ದಮನಕ್ಕೂ ಒಳಗಾಗಿ ಆಕೆ ಆತನನ್ನು ಒತ್ತಾಯದಿಂದ ಮದುವೆಯಾಗಿದ್ದಾಳೆ" ಎಂದು ಹೇಳಿದ್ದಾರೆ. ರಂಗದಲ್ಲಿ ನಿರ್ದೇಶಕರು ಈ ಪಾತ್ರವನ್ನು ಇಡೀ ನಾಟಕದಲ್ಲಿ ಲವಲವಿಕೆಯ, ತಿಳಿಹಾಸ್ಯದ ಛಾಯೆಯಲ್ಲಿ ಕಟ್ಟಿಕೊಂಡು ಅಕ್ಕುವಿನ ಕಥೆಯ ಇನ್ನೊಂದು ರೂಪವನ್ನು ಪ್ರೇಕ್ಷಕರಿಗೆ ತೋರಿಸುತ್ತಾ ಎರಡು ವಿಭಿನ್ನ ಹೆಣ್ಣು ಪಾತ್ರಗಳ ಒಳನೋಟಗಳನ್ನು ವಿಸ್ತರಿಸುತ್ತಾ ಹೋಗುತ್ತಾರೆ. ಸಾಹಿತ್ಯದ ಆಶಯ, ರಂಗದ ಮೇಲಿನ ಭಾವನಾತ್ಮಕತೆ ಮತ್ತು ನಾಟಕದ ಒಟ್ಟು ಸಂವೇದನೆಯನ್ನು ಈ ಪಾತ್ರದ ಮೂಲಕ ಬಿಂಬಿಸಿದ ಶ್ರೇಯಸ್ಸು ನಿರ್ದೇಶಕಿ ಮತ್ತು ನಟಿಗೆ ಸೇರಬೇಕು. ಸ್ತ್ರೀವಾದಿ ಧೋರಣೆಯ ಅಂತರಾಳದ ಅರ್ಥವನ್ನು ಹುಡುಕಲು ಈ ಪಾತ್ರ ಪ್ರಯತ್ನ ಪಟ್ಟಿದೆ.

ರಂಗಪ್ಪಯ್ಯನ ಮನೆಯಲ್ಲಿ ಚಾಕರಿ ಮಾಡಿಕೊಂಡಿರುವ ಅನಾಥೆ ಪುಟ್ಟಮ್ಮತ್ತೆಯ ಕಥೆಯೂ ಒಂದು ಹೆಣ್ಣಿನ ಕಷ್ಟದ ಮತ್ತು ದುಗುಡದ ಸನ್ನಿವೇಶವಾಗಿದೆ. ನಾಟಕದಲ್ಲಿ ತನ್ನ ಕಥೆಯನ್ನು ಮಕ್ಕಳಿಗೆ ಹೇಳುತ್ತಾ ಪುಟ್ಟಮ್ಮತ್ತೆ ತಾಯಿಯನ್ನು ಆರು ತಿಂಗಳಿರುವಾಗಲೇ ಕಳಕೊಂಡು, ಅಪ್ಪ ಊರು ಬಿಟ್ಟು ಹೋದಾಗ ತನ್ನ ಅಜ್ಜಿಯೇ ಆಶ್ರಯ ನೀಡಿದಳು ಎನ್ನುತ್ತಾಳೆ. ತಾನು ಅಜ್ಜಿಯ ಮೊಲೆಹಾಲಿಗೆ ತಡಕಾಡಿದೆ ಎನ್ನುವ ಪುಟ್ಟಮ್ಮತ್ತೆ "ಪ್ರೀತಿಯೆಂದ್ರೆ ಮಕ್ಳೇ, ಕರುಳಗ್ ಇಪ್ಪುದಲ್ಲ. ಇಲ್ಲಿ, ಇಲ್ಲಿ ಇಪ್ಪುದು" ಎಂದು ಎದೆ ತಟ್ಟಿ ತೋರಿಸುತ್ತಾಳೆ. ಅಜ್ಜಿ ಸತ್ತು ವೈಕುಂಠದ ರಾತ್ರಿ ಅವಳ ಮೇಲೆ ಯಾರೋ ಕೈ ಮಾಡುತ್ತಾರೆ. ಮುಂದೆ ಮದುವೆಯಾದರೆ ಗಂಡನೂ ಬಿಟ್ಟು ಹೋಗುತ್ತಾನೆ. ಪುಟ್ಟಮ್ಮತ್ತೆಯ ಪಾತ್ರಕ್ಕೆ ನ್ಯಾಯ ನೀಡುವಲ್ಲಿ ರಾಧಾಕೃಷ್ಣ ಉರಾಳ ಅವರು ಯಶಸ್ವಿಯಾಗಿದ್ದಾರೆ.

ಅಕ್ಕು ನಾಟಕದಲ್ಲಿ ಹೆಣ್ಣಿನ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಲೇ ಇದ್ದರೂ ನಾಟಕದುದ್ದಕ್ಕೂ ಅದೊಂದು ದುಗುಡದ ವಾತಾವರಣವನ್ನು ನೀಡದೇ ಲವಲವಿಕೆಯನ್ನು ನಿರಂತರವಾಗಿ ರಂಗದ ಮೇಲೆ ಕಾಣಬಹುದಾಗಿತ್ತು. ಇದಕ್ಕೆ ಮುಖ್ಯ ಕಾರಣ ರಂಗನಟರ ನಿರಾಳವಾದ ಅಭಿನಯ ಮತ್ತು ಕಥೆಯನ್ನು ರಂಗಕ್ಕೆ ಅನುಗುಣವಾಗಿ ಹೆಣೆದುದರ ಪರಿಣಾಮವಾಗಿದೆ. ಅಕ್ಕು ಒಂದೆಡೆ ಬಲಿಪಶುವಾದರೂ ದೃಢವಾಗಿ ಪ್ರತಿಭಟನೆಯನ್ನು ಮಾಡುತ್ತಾಳೆ. ಆ ಪ್ರತಿಭಟನೆಯ ರೂಪ ಭಿನ್ನ ಭಿನ್ನವಾದುದು. ಇತ್ತ ಅಮ್ಮಚ್ಚಿ ನಿರಂತರ ಪ್ರತಿಭಟನೆಯ ಬಿಂಬವಾದರೂ ಕೊನೆಗೂ ತಾನೊಲ್ಲದವನೊಡನೆ ಬದುಕುವ ಅನಿವಾರ್ಯತೆಗೆ ಒಳಗಾಗುತ್ತಾಳೆ. ಪುಟ್ಟಮ್ಮತ್ತೆ ಎಲ್ಲವನ್ನೂ ಸಹಿಸುತ್ತಾ ಪ್ರತಿಭಟನೆಗೆ ಸ್ಫೂರ್ತಿಯಾಗುತ್ತಾಳೆ. ಕಾಶಿನಾಥ ಪತ್ತಾರರ ಸಂಗೀತದಲ್ಲಿ ಮೂಡಿಬಂದ ವೈದೇಹಿಯವರ ಕವಿತೆಗಳು ನಾಟಕದುದ್ದಕ್ಕೂ ಆಪ್ಯಾಯಮಾನವಾಗಿತ್ತು. ವಸ್ತ್ರ ವಿನ್ಯಾಸ (ರಮಾದೇವಿ), ರಂಗ ಪರಿಕರ (ವೇಣು ನೆಪೋಲಿಯನ್), ಪ್ರಸಾದನ (ರಾಮಕೃಷ್ಣ ಬೆಳತ್ತೂರ್), ಕಲೆ (ಕೃಷ್ಣ ರಾಯಚೂರ್), ಬೆಳಕು (ಅರುಣ್ ಮೂರ್ತಿ) ಎಲ್ಲವೂ ಪೂರ್ತಿ ನಾಟಕಕ್ಕೆ ಪೂರಕವಾಗಿದ್ದು ರಂಗಪ್ರದರ್ಶನವನ್ನು ಎತ್ತರಕ್ಕೇರಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸಿದ್ದವು.

**ಮಲ್ಲಿಗೆ**

ಮಲ್ಲಿಗೆ ನಾಟಕವು ಹಲವು ಸಮಾನಾಂತರ ಕಥೆಗಳ ಮೂಲಕ ಸಾಗುತ್ತದೆ. ಐಟಿ ಉದ್ಯೋಗಿಯಾಗಿರುವ ನಂದಿನಿಯನ್ನು ಪ್ರೇಮಿಸಿ ಮದುವೆಯಾಗಿರುವ


ರಾಜಶೇಖರನು ಆಕೆ ತನ್ನ ಹುಟ್ಟುದಿನದ ರಾತ್ರಿಯೂ ಮನೆಗಿನ್ನೂ ತಲುಪದಿರುವ ಸಂದರ್ಭದಲ್ಲಿ ಆತ್ಮಹತ್ಯೆ ಮಾಡುತ್ತಾನೆ. ಆತನ ಆತ್ಮಹತ್ಯೆಗೆ ಕಾರಣವಾಗಿರಬಹುದಾದ ನಂದಿನಿಯ ವಿಚಾರಣೆಗೆಂದು ಬಂದ ಪೋಲೀಸ್ ಇನ್ಸ್‌ಪೆಕ್ಟರ್‌ನ ವೈಯಕ್ತಿಕ ಬದುಕಿನಲ್ಲೂ ಗಂಡ–ಹೆಂಡಿರ ನಡುವಿನ ಸಂಶಯದ ಸುಳಿಗೆ ಬಲಿಯಾಗಿದ್ದ ಅನುಭವವಿದ್ದುದರಿಂದ ಆಕೆಯನ್ನು ನಿರಾಪರಾಧಿ ಎಂದು ಸಾಬೀತು ಮಾಡಲು ಆತ ಪ್ರಯತ್ನ ಪಡುತ್ತಿದ್ದ. ಆದರೆ ದೊರಕುವ ಎಲ್ಲಾ ಸುಳಿವುಗಳು ನಂದಿನಿಯನ್ನು ಅಪರಾಧಿಯನ್ನಾಗಿಸುತ್ತವೆ. ಹಲವು ಕನಸುಗಳನ್ನು ಕಾಣುತ್ತಾ ಮದುವೆಯಾಗಿ ಏಳು ವರ್ಷಗಳಾದರೂ ಮಕ್ಕಳಿಲ್ಲದ ದಂಪತಿ ಹೊಸದೊಂದು ಮನೆಯನ್ನು ಕಟ್ಟಿಕೊಂಡು ಕನಸುಗಳನ್ನು ಕಾಣುತ್ತಿರುವ ಸಂದರ್ಭ ಅವರ ಬದುಕು ಹಲವು ಸೋಲುಗಳನ್ನು ಕಾಣುತ್ತವೆ. ನಂದಿನಿ ತನ್ನ ಸಹೋದ್ಯೋಗಿಯ ಬೆಂಬಲದೊಂದಿಗೆ ಹಗಲು ರಾತ್ರಿ ದುಡಿದು ತನ್ನ ಮನೆಯನ್ನು ಉಳಿಸಲು ಪ್ರಯತ್ನಿಸುತ್ತಾಳೆ. ಮನೆಯನ್ನು ತನ್ನ ಹೆಸರಿಗೆ ಮಾಡುವುದು, ಏಳು ವರ್ಷಗಳಿಂದ ಬಾರದ ಆಕೆಯ ತಂದೆ ಬರುವುದು ಇದಾದ ಕೆಲವೇ ದಿನಗಳಲ್ಲಿ ಗಂಡ ಆತ್ಮಹತ್ಯೆ ಮಾಡುವುದು ನಂದಿನಿಯನ್ನು ಅಪರಾಧಿಯನ್ನಾಗಿಸುತವೆ. ತನ್ನ ಪತ್ನಿ, ಪುರುಷ ಸಹೋದ್ಯೋಗಿಯೊಂದಿಗೆ ರಾತ್ರಿಗಳನ್ನು ಕಳೆಯುತ್ತಿದ್ದಾಳೆ ಎಂಬ ಸಂಶಯದಿಂದ ಜುಗುಪ್ಸೆಗೊಂಡ ರಾಜಶೇಖರ ಆತ್ಮಹತ್ಯೆ ಮಾಡಿದರೆ, ತಾನು ಅತೀವವಾಗಿ ಪ್ರೀತಿಸುವ ಗಂಡನೊಂದಿಗೆ ತನ್ನ ಬದುಕನ್ನು ಹಸನುಗೊಳಿಸಬೇಕು ಎಂದು ಹೆಣಗಾಡುವ ನಂದಿನಿ ಅಪರಾಧಿಯಾಗುತ್ತಾಳೆ. ಅಂತಹ ಸುಂದರ ಮನೆಯಲ್ಲಿ ಗಂಡಹೆಂಡತಿಯರಿಬ್ಬರೂ ತಮ್ಮ ವಿಶಿಷ್ಟ ಹವ್ಯಾಸವಾಗಿ ಸಂಗ್ರಹಿಸುತ್ತಿದ ಹಳೆಯ ಗೊಂಬೆಯೊಂದು ನಿಜವಾಗಿ ನಡೆದ ಘಟನೆಗಳನ್ನು ನೋಡಿ ಚಡಪಡಿಸುತ್ತದೆ. ಈ ಕತೆಯ ಸಾಮ್ಯತೆಯನ್ನು ಗೊಂಬೆಯು ತನ್ನ ಸೂತ್ರಧಾರನಿಗೆ ಹಳೆಯ ಕತೆಯೊಂದರ ಮೂಲಕ ವಿವರಿಸಲು ತೊಡಗುತ್ತದೆ. ಗೊಂಬೆ ಮಲ್ಲಿಗೆ ರಾಯನ ಕತೆ ಹೇಳುತ್ತದೆ.

ತನ್ನ ತಂದೆ ತಾಯಿಗೆ ದೊರೆತ ವರಫಲವಾಗಿ ಮಲ್ಲಿಗೆರಾಯ ಹುಟ್ಟಿನಿಂದಲೇ ತನ್ನ ನಗುವಿನಿಂದ ಸುಗಂಧ ಹರಡುವ ಮಲ್ಲಿಗೆ ಹೂಗಳನ್ನು ಅರಳಿಸುವ ರಾಜನಾಗಿರುತ್ತಾನೆ. ಸ್ವತಃ ಕಂಪುಸೂಸುವ, ನಿರ್ಭರ ಶುಭ್ರವಾದ ರಾಣಿಯೂ ಮಲ್ಲಿಗೆಯೇ. ಆದರೆ ಗಂಡನನ್ನು ಪ್ರೀತಿಸುವ ರಾಣಿಗೆ ರಾಜನ ರಾಜ್ಯಾಭಾರದ ಒತ್ತಡದಲ್ಲಿ ಒಂಟಿತನವೇ ಮಾಮೂಲಾಗಿರುತ್ತದೆ. ಹತ್ತು ಯೋಜನ ದೂರ ಹೊರಟ ರಾಜ ಸದ್ಯ ಮರಳುವುದಿಲ್ಲವೆಂಬ ವ್ಯಾಕುಲದಿಂದ ರಾಣಿ ಒಂಟಿಯಾಗಿರಲು ಬಯಸಿ ಯಾರು ಬಂದರೂ ತಾನು ವಿಶ್ರಮಿಸುತ್ತಿರುವುದರಿಂದ ತೊಂದರೆ ಕೊಡಬಾರದೆಂದು ದಾಸಿಯರಿಗೆ ಆಜ್ಞಾಪಿಸುತ್ತಾಳೆ. ಕೆಟ್ಟ ಕನಸು ಕಂಡು ವಾಪಸು ಬಂದ ರಾಜ ರಾಣಿಯ ಆಜ್ಞೆಯನ್ನು ದಾಸಿಯರಿಂದ ಕೇಳಿ ಆಕೆಗೆ ತೊಂದರೆ ಕೊಡಬಾರದು. ವ್ಯಾಧಿಯಿಂದಿರುವ ರಾಣಿ ವಿಶ್ರಾಂತಿ ಪಡೆಯಲಿ ಎಂದು ರಾಜ ಅವಳನ್ನು ಭೇಟಿಯಾಗದೇ ಮತ್ತೆ ಹೊರಡುತ್ತಾನೆ. ತನ್ನ ಪರಮಮಿತ್ರ ಚೆನ್ನಿಗರಾಯನಲ್ಲಿಗೆ ತನ್ನ ನಗುವಿನಿಂದ ಮಲ್ಲಿಗೆಯನ್ನು ಅರಳಿಸುವ ಚಮತ್ಕಾರವನ್ನು ತೋರಿಸಲು ಬಂದ ಮಲ್ಲಿಗೆರಾಯನಿಗೆ ನಗಲು ಆಗುವುದೇ ಇಲ್ಲ. ತನ್ನ ಸ್ನೇಹಿತ ಮೋಸ ಮಾಡುತ್ತಾನೆ ಎಂದು ಚೆನ್ನಿಗರಾಯ ಮಲ್ಲಿಗೆರಾಯನನ್ನು ಬಂಧಿಸಿಡುತ್ತಾನೆ. ಸೂತ್ರಧಾರನಿಗೆ ಕತೆ ಹೇಳುವ ಗೊಂಬೆಗೆ ಇಲ್ಲಿ ಮತ್ತೊಂದು ಕತೆಯ ಎಳೆ ಸಿಗುತ್ತದೆ. ಚೆನ್ನಿಗರಾಯನ ಮಹಾರಾಣಿಯು ನಡುರಾತ್ರಿಯಲ್ಲಿ ಗುಪ್ತವಾಗಿ ಕಾರಾಗೃಹದಲ್ಲಿ ಯಾರನ್ನೋ ಸಂಧಿಸಲು ಬರುತ್ತಾಳೆ ಎಂಬ ಸಂದೇಹ ಬಂಧನದಲ್ಲಿರುವ ಮಲ್ಲಿಗೆರಾಯನಿಗೂ ತಿಳಿಯುತ್ತದೆ. ತನ್ನ ಕನಸಿನಲ್ಲಿ ಮಹಾರಾಣಿಯ ಬಳಿಗೆ ಬರುವ ನಾಗರಹಾವು ತನಗೆ ತನ್ನ ಹೆಂಡತಿಯಿಂದ ಆಗುವ ಮೋಸದ ಸಂಕೇತವಾಗಿ ಕಾಣುತದೆ. ತನ್ನ ಬದುಕಿನ ಕುರಿತು ಜುಗುಪ್ಸೆಗೊಂಡು ನಗು ಉಕ್ಕಿ ಹರಿಯುತ್ತದೆ. ಜತೆಗೆ ಮಲ್ಲಿಗೆಗಳು ಅರಳುತ್ತವೆ. ಆದರೆ ಅದು ಮಹಾರಾಣಿಯ ದಾಸಿಯೊಬ್ಬಳು ಸೆರೆಮನೆಯಲ್ಲಿ ಬಂಧನದಲ್ಲಿರುವ ತನ್ನ ಪ್ರಿಯಕರನನ್ನು ಸೇರಲು ಮಹಾರಾಣಿಯ ಉಂಗುರದ ಗುರುತನ್ನು ರಾಜಭಟರಿಗೆ ತೋರಿಸಿ ಒಳಗೆ ಬರುತ್ತಿರುವ ಗುಟ್ಟು ಮಹಾರಾಣಿಗೂ ಗೊತ್ತಾಗುತದೆ. ಸೆರೆಮನೆಯಲ್ಲಿ ಮಲ್ಲಿಗೆ ಅರಳಿಸಿ ಮತ್ತೆ ತನಗೆ ಅಪಮಾನ ಮಾಡಿದ ಎನ್ನುವ ಕಾರಣಕ್ಕೆ ಮಲ್ಲಿಗೆರಾಯನಿಗೆ ಶಿಕ್ಷೆಯಾಗುತ್ತದೆ. ಹೀಗೆ ಹೆಣ್ಣು–ಗಂಡಿನ ಸಂಬಂಧಗಳ ಒಳನೋಟಗಳು ಬಿಚ್ಚುತ್ತಾ ಹೋದರೂ ಒಬ್ಬರು ಇನ್ನೊಬ್ಬರ ಮನದಾಳದ ನಿಟ್ಟುಸಿರುಗಳನ್ನು ಅರಿಯದವರಾಗುತ್ತಾರೆ.

ಗಂಡಿನ ಲೋಕದಲ್ಲಿ ಹೆಣ್ಣು, ಹೊನ್ನು ಮತ್ತು ಮಣ್ಣು ಮುಖ್ಯವಾದರೆ, ಹೆಣ್ಣಿಗೆ ತನ್ನ ಗಂಡನೇ ಲೋಕವೆಲ್ಲವೂ. ಇಲ್ಲಿ ಗಂಡೇ ಗುರಿ ಮತ್ತು ದಾರಿ. ಗಂಡು–ಹೆಣ್ಣಿನ ಸಂಬಂಧಗಳ ಸಂಕೇತವಾಗುತ್ತದೆ ಮಲ್ಲಿಗೆ. ಮಲ್ಲಿಗೆಯ ಸೊಬಗು, ಮೃದುತ್ವ ಮತ್ತು ಪರಿಮಳ ಉಪಮೆಯಾಗುತ್ತದೆ. ನಮ್ಮ ಕತೆ ಮತ್ತು ಕಾವ್ಯಗಳಲ್ಲಿ ಇದುವರೆಗೂ ಹೆಣ್ಣು ದುರಂತದ ಕಾರಣವಾಗುತ್ತಾಳೆ. ಆಧುನಿಕ ಶಿಕ್ಷಣ, ಉದ್ಯೋಗ ಮತ್ತು ತನಗೆ ಬೇಕಾದಂತೆ ಬದುಕುವ ಸ್ವಾತಂತ್ರ್ಯ ಹೆಣ್ಣಿನ ಲೋಕದಲ್ಲಿ ಇದ್ದರೂ ಗಂಡು ಹೆಣ್ಣಿನ ಸಂಬಂಧದ ನಡುವಿನ ಬಿರುಕು ಹಾಗೆಯೇ ಉಳಿದುಕೊಂಡಿದೆ. ಹೆಣ್ಣನ್ನು ಅರ್ಥೈಸುವ ಪ್ರಯತ್ನದಲ್ಲಿ ಗಂಡು ಯಾವಾಗಲೂ ಸೋತಿರುತ್ತಾನೆ. ಗಂಡು ಹೆಣ್ಣಿನ ನಡುವೆ ಇದ್ದೂ ಕಾಣದ ಬಿರುಕುಗಳು ಒಡೆದ ಕನ್ನಡಿಯ ಬಿಂಬಗಳಾಗಿ ಕಾಣುತವೆ.

ಗಂಡು–ಹೆಣ್ಣಿನ ಸಂಬಂಧಗಳ ಸಂಕೀರ್ಣತೆಯನ್ನು ನಾಟಕಕಾರ ಕೆ.ವೈ. ನಾರಾಯಣಸ್ವಾಮಿಯವರು ತಮ್ಮ ರಚನೆಯಲ್ಲಿ ಅಪೂರ್ವವಾಗಿ ನೇಯ್ದಿರುವಂತೆಯೇ ನಿರ್ದೇಶಕ ಪ್ರಕಾಶ್ ಪಿ. ಶೆಟ್ಟಿಯವರು ರಂಗದ ಮೇಲೆ ನಾಟಕವನ್ನು ಸರಳವಾಗಿ ಪ್ರೇಕ್ಷಕರಿಗೆ ಮುಟ್ಟಿಸುವಲ್ಲಿ ಶ್ರಮಿಸಿದ್ದಾರೆ. ಹಲವು ಫ್ಲಾಶ್‌ಬ್ಯಾಕ್‌ಗಳ ಮೂಲಕ ಕತೆ ಸಾಗಿದರೂ ನಿರಾಳವಾಗಿ ರಂಗವು ಬದಲಾಗುತ್ತಾ ಸಾಗುತ್ತದೆ. ವಿನಯ ಚಂದ್ರ ಅವರು ಸೃಜನಶೀಲ ಬೆಳಕಿನ ವಿನ್ಯಾಸದ ಮೂಲಕ ಶಶಿಧರ ಅಡಪ ಅವರು ಸೆಟ್ಟೇರಿಸಿದ ರಂಗಸಜ್ಜಿಕೆಯ ಮೇಲೆ ಆಧುನಿಕ ಮನೆಯ ಲಿವಿಂಗ್ ರೂಮ್, ನೆರಳಿನ ಮೂಲಕ ಸೆರೆಮನೆಯ ಸರಳುಗಳು, ನಗುವಾಗ ಅರಳುವ ಮಲ್ಲಿಗೆ, ತಾನೇ ರಚಿಸಿದ ರಾಜನ ಚಿತ್ರದ ಮೂಲಕ ರಾಣಿಯ ಪ್ರೇಮ ನಿವೇದನೆ ಮೊದಲಾದ ದೃಶ್ಯಗಳಿಗೆ ಜೀವ ಮತ್ತು ಅರ್ಥಗಳನ್ನು ತುಂಬುತ್ತಾರೆ. ರಂಗಗೀತೆಗಳ ಸಂಗೀತದ ಮೂಲಕ ಗಜಾನನ ಟಿ. ನಾಯ್ಕ್ ಅವರು ಹಲವು ಎಳೆಗಳ ಪೂರ್ತಿ ನಾಟಕವನ್ನು ಒಂದೇ ಸೂತ್ರದಲ್ಲಿ ಬಂಧಿಸಿಡುತ್ತಾರೆ. ಮನೆಯಲ್ಲಿ ನೇತು ಹಾಕಿದ್ದ ಗೊಂಬೆ ಜೀವಗೊಂಡು ಪಾತ್ರವಾಗಿ ನಾಟಕದ ಉದ್ದಕ್ಕೂ ರಂಗದಲ್ಲಿ ಪ್ರೇಕ್ಷಕರನ್ನು ಸೆಳೆದ ರಾಧಾಕೃಷ್ಣ ಉರಾಳ ಅವರು ಎಂತಹ ಕ್ಲಿಷ್ಟ ಪಾತ್ರಗಳಿಗೂ ಜೀವ ತುಂಬಿಸಬಲ್ಲರು. ನಾಟಕವು ಇನ್ನಷ್ಟು ಪ್ರದರ್ಶನಗಳನ್ನು ನಡೆಸುವಾಗ ಮತ್ತಷ್ಟು ಬೆಳೆಯುವ ಸಾಧ್ಯತೆಗಳಿವೆ. ಅ

***ಬಾಲಕೃಷ್ಣ ನಾಯ್ಕ್ ಡಿ.***



### ಅಕ್ಕು ಮತ್ತು ಮಲ್ಲಿಗೆ ನಾಟಕಗಳ ಕುರಿತು ಪ್ರೇಕ್ಷಕರ ಅನಿಸಿಕೆಗಳು

"ಮಲ್ಲಿಗೆ" ಸಂಬಂಧಗಳ ಬಗ್ಗೆ ಮರು ಯೋಚಿಸುವಂತೆ ಮಾಡಿದ ಬಹಳ ಪರಿಣಾಮಕಾರೀ ನಾಟಕ

***ಡಾ. ಪುರುಷೋತ್ತಮ ಬಿಳಿಮಲೆ (ವಿದ್ವಾಂಸ)***

ಮಲ್ಲಿಗೆಯು ಒಂದು ಅದ್ಭುತ ನಾಟಕ. ಹಲವು ವಿಷಯಗಳನ್ನು ಅರಿಯುವಂತಾಯ್ತು. ತಂಡದವರಿಗೆಲ್ಲಾ ಅಭಿನಂದನೆಗಳು.

***ಆಶಾಲತಾ ಮಹಾದೇವ್ (ರಂಗ ನಟಿ)***

ಅಕ್ಕು ಹಾಗೂ ಮಲ್ಲಿಗೆ ನಾಟಕಗಳು ಅತ್ಯುತ್ತಮವಾಗಿ ಮೂಡಿ ಬಂದು, ನೋಡುಗರ ಮನ ಮುಗ್ಧಗೊಳಿಸಿ, ಜನರ ಮೆಚ್ಚುಗೆಗೆ ಪಾತ್ರವಾದವು.

***ಎಸ್.ಎಲ್. ಭಂಡಾರ್‌ಕರ್ (ರಂಗ ಕರ್ಮಿ)***

ಕೆಲ ಹೂವ ಹಣೆ ಬರಹ ಅರಳಿದೊಡೆ ಬಾಡಲು, ಕೆಲ ಹೂವು ಶವಕೆ ಶೃಂಗರಿಸಲು ... ಈ ಸಾಲುಗಳು ವೈದೇಹಿಯವರ ಅಕ್ಕು ನಾಟಕದಲ್ಲಿ ಮನಕಲಕುವಂತಿದ್ದವು. ಚಂಪಾ ಶೆಟ್ಟಿಯವರ ಅದ್ಭುತ ಪ್ರಯತ್ನ.

***ಪೃಥ್ವಿ ಕಾರಿಂಜೆ (ರಂಗ ನಟಿ)***

ಅಕ್ಕು ನಾಟಕದ ನಂತರ ವೀರಾವೇಶದ ಜಾನಪದ ನೃತ್ಯ ಕಾರ್ಯಕ್ರಮ ನಾಟಕವನ್ನು ನೋಡಿ ಆಸ್ವಾದಿಸಿ ಮತ್ತೆ ಮೆಲುಕು ಹಾಕುವಲ್ಲಿ ತೊಡಕಾಯಿತು. ಇಂತಹ ನಾಟಕಗಳು ಪ್ರೇಕ್ಷಕರ ಒಳಗೆ ಬೆಳೆಯಲು ನಾಟಕ ಮುಗಿದ ನಂತರ ಇತರ ಕಾರ್ಯಕ್ರಮಗಳನ್ನು ಇಡಬಾರದು.

***ರಾಕೇಶ್ ಎನ್.ಎಸ್. (ಪತ್ರಕರ್ತರು)***

# ಮಾಯೆಯಂಥಾ...ಮಲ್ಲಿಗೆ ನಾಟಕ

ಒಬ್ಬಳು ಅಂದಿನ ಹೆಣ್ಣು, ನಕ್ಕರೆ ಮಲ್ಲಿಗೆ ಸುರಿಯುವ ಯುವರಾಜನನ್ನು ಬಯಸಿ ಒಲಿದವನ ಪಟ್ಟದರಸಿಯಾಗಿ ನಲಿದ ಮಹಾರಾಣಿಗೆ ಅವನು ಸಿಗದೇ ಬರಿ ಚಿತ್ರದ ಗೊಂಬೆಯಾಗಿ ಹೋದಾಗ ಒಂಟಿತನದಲ್ಲಿ ನರಳುತ್ತಾಳೆ.

ಇನ್ನೊಬ್ಬಳು ಇಂದಿನ ಹೆಣ್ಣು: ಬಯಸಿ, ಪ್ರೇಮಿಸಿ ಮದುವೆಯಾದವರಲ್ಲಿ ಮೊದಲಿನ ಪ್ರೇಮದ ಹೂವೆಲ್ಲ ಕಮರಿಹೋಗಿ, ಒಂದೇ ಸೂರಿನಡಿ ಒಬ್ಬರಿಗೊಬ್ಬರಿಗೆ ಸಮಯವೇ ಇರದಂತೆ ಬದುಕುತ್ತಿರುವ ನಗರದ ಒತ್ತಡದ ಜೀವನದಲ್ಲಿ ಏಕಾಂಗಿಯಾಗಿ, ತಾನೆಲ್ಲ ಮಾಡುತ್ತಿರುವುದು ಅವನಿಗಾಗಿಯೇ, ತಮ್ಮಿಬ್ಬರ ಭವಿಷ್ಯದ ಬದುಕಿಗಾಗಿಯೇ ಎಂದೇ ನಂಬಿಕೊಂಡು, ತನ್ನ ಆಫೀಸು, ಕರಿಯರ್, ಪ್ರಾಜೆಕ್ಟ್ ಎಂದು ಅತಂತ್ರವಾಗಿ ಹೋದವಳ ಏಕಾಂಗಿತನ ಇನ್ನೊಂದು.

ಇಬ್ಬರೂ ದುರಂತ ನಾಯಕಿಯರೇ. ಅವರಿಬ್ಬರೂ ಸೋಲುವುದು ಅವರಿಬ್ಬರೂ ನೆಚ್ಚಿಕೊಂಡ ಜೀವಗಳಿಂದಲೇ. ಬಹುವಾಗಿ ಪ್ರೀತಿಸುವ ಸಂಗಾತಿಗಳ ಅನುಮಾನದ ಬೆಂಕಿಯಲ್ಲಿ ಸುಟ್ಟುಕೊಳ್ಳುವ ಪತಂಗಗಳಂತೆ ಪ್ರೇಕ್ಷಕರ ಅನುಕಂಪಕ್ಕೆ ಪಾತ್ರರಾಗುತ್ತಾರೆ.

ಇನ್ನು ಗಂಡು, "ತಾನು ಪಡೆದುಕೊಂಡ ಹೆಣ್ಣು ತನ್ನ ಸೊತ್ತು ಮಾತ್ರ. ಅವಳ ದೇಹ ಮನಸ್ಸುಗಳು ಅವನು ತನಗಿಷ್ಟ ಬಂದಾಗ ತೊಟ್ಟು ಕಳಚುವ ವಸ್ತ್ರಗಳು. ಅವಳ ಪಾವಿತ್ರ್ಯತೆಯೇ ಅವರಿಬ್ಬರ ಸಂಬಂಧದ ರುಜುತ್ವ. ಅವನು ಹಾಕಿದ ಗೆರೆಯಲ್ಲೇ, ಅವನಿಟ್ಟ ಮಿತಿಯಲ್ಲೇ ಇರಬೇಕೆಂದು ಬಯಸುವ" ಸಾಮಾನ್ಯ ಗಂಡು. ತಾನೇ ಹುಟ್ಟಿಸಿಕೊಂಡ ಹುಸಿ ಅನುಮಾನಗಳ ಸುಳಿಯಲ್ಲಿ ತಾನೂ ನರಳಿ ತನ್ನ ಸಂಗಾತಿಗಳನ್ನೂ ನರಳಿಸಿ ತನ್ನ ಕೈಯ್ಯಾರೆ ಅರಳಬೇಕಿದ್ದ ಬದುಕನ್ನು ಹೊಸಕಿ ಹಾಕುವ ಪುರುಷಾಹಂಕಾರವೇ ಇಲ್ಲಿನ ಗಂಡಿನ ಬಲು ದೊಡ್ಡ ದೌರ್ಬಲ್ಯ.

ಈಗಾಗಲೇ ಅನಭಿಜ್ಞ ಶಾಕುಂತಲವನ್ನು ನೋಡಿ ಆನಂದಿಸಿದ ದೆಹಲಿ ಕನ್ನಡಿಗರಿಗೆ ಡಾ. ಕೆ.ವೈ.ನಾರಾಯಣಸ್ವಾಮಿ ಮತ್ತು ಪ್ರಕಾಶ ಶೆಟ್ಟಿ ಅವರ ಜನಪದ ಶೈಲಿಯ ಸೊಗಡಿನಲ್ಲಿ ಪೋಣಿಸಿ ಹೆಣೆದ 'ಮಲ್ಲಿಗೆ' ನಾಟಕ ಹೊಸ ಅನುಭವವನ್ನು ಕೊಟ್ಟಿತು. ದೇಸಿ ಸೊಗಡಿನ ಕಥನ ಶೈಲಿಯಲ್ಲಿ ತಮ್ಮ ಛಾಪನ್ನು ಮೂಡಿಸಿ ಈಗಾಗಲೇ ಅಪಾರ ಅಭಿಮಾನಿಗಳನ್ನು ಗಳಿಸಿಕೊಂಡಿರುವ ಕೆ.ವೈ ನಾರಾಯಣಸ್ವಾಮಿ ಅವರ 'ಮಲ್ಲಿಗೆ' ಕುರಿತ ನಿರೀಕ್ಷೆಗಳು ಇನ್ನೂ ಬಹಳಷ್ಟಿವೆ.

ರಂಗದ ಮೇಲೆ ಒಂದು ಚೆಂದದ ಮನೆ. ಅದರಲ್ಲಿ ಬಣ್ಣದ ಎರಡು ಗೊಂಬೆಗಳು ತೂಗುತ್ತಿವೆ. ಹುಟ್ಟುಹಬ್ಬದ ಕೇಕು, ಕ್ಯಾಂಡಲ್ ಹಚ್ಚಲೋ ಬೇಡಲೋ ಎಂಬ ಅಸಮಂಜಸದಲ್ಲಿ ಅವಳಿಗಾಗಿ ಕಾಯುವ ಅವನು, ಬಾರದ ಅವಳು. ಹತಾಶೆಯಲ್ಲಿ ಅವನು ಆತ್ಮಹತ್ಯೆಮಾಡಿಕೊಳ್ಳುತ್ತಾನೆ. ಇಲ್ಲಿಂದ ನಾಟಕ ಮುನ್ನಡೆಯುತ್ತದೆ.

ವಿಚಾರಣೆಗಾಗಿ ಪೋಲಿಸ್ ಅಧಿಕಾರಿ ಬರುತ್ತಾನೆ. ಅವನ ಕಣ್ಣಲ್ಲಿ ಅವಳೇ ಅಪರಾಧಿ. ಅವನ ಸಾವಿಗೆ ಅವಳೇ ಕಾರಣ. ಸತ್ತುಹೋದವನ ಡೈರಿಯಲ್ಲಿ ಶಂಕೆಯ ಬೀಜಗಳು. ಅನುಮಾನದ ಕೊಂಡಿ ಅವಳ ಸುತ್ತ ಇನ್ನೂ ಬಿಗಿಗೊಳ್ಳುತ್ತದೆ. ವಿಚಾರಣಾ ಅಧಿಕಾರಿಗೆ ಇಡೀ ಘಟನೆಯನ್ನು ನಿಷ್ಪಕ್ಷಪಾತವಾಗಿ ನೋಡಲು ಸಾಧ್ಯವಾಗುವುದಿಲ್ಲ ಯಾಕೆಂದರೆ ಅವನ ನಿನ್ನೆಗಳಲ್ಲಿಯೂ ಒಬ್ಬ ಹೆಣ್ಣಿದ್ದಾಳೆ. ಅವಳೂ ಅವನ ನಂಬಿಕೆಗೆ ದ್ರೋಹಬಗೆದವಳೆಂದು ಅವನಾಗಲೇ ಅವಳಿಗೆ ವಿಚ್ಛೇದನವೆಂಬ ಕೈಕೋಳ ತೊಡಿಸಿದವನು. ಪೂರ್ವಾಗ್ರಹದ ಕನ್ನಡಕ ತೊಟ್ಟ ಪೋಲಿಸ್ ಅಧಿಕಾರಿಗೆ ಕಾಮಾಲೆ ಕಣ್ಣು. ನೋಡಿದ್ದೆಲ್ಲ ಹಳದಿ! ಡೈರಿಯಲ್ಲಿನ ವಿವರಗಳು ನೀಡಿದ ಚಿತ್ರಣದ ಪ್ರಕಾರ ಅವಳಿಗೊಬ್ಬ ನಲ್ಲನಿದ್ದ. ಆ ಸತ್ಯ ಅರಗಿಸಿಕೊಳ್ಳಲಾರದೇ ನಾಯಕ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಮನೆಯಲ್ಲಿರುವ ಗೊಂಬೆಗಳೇ ಮೂಕ ಸಾಕ್ಷಿಗಳು. ಮುಂದಿನ ಕಥೆಯನ್ನು ಗೊಂಬೆ ಮತ್ತು ಸೂತ್ರಧಾರ ಪ್ರೇಕ್ಷಕರ ಮುಂದಿಡಲು ಬರುತ್ತವೆ. ಗೊಂಬೆಗೆ ಕಣ್ಣಿವೆ ದನಿಯಿಲ್ಲ. ನೇಪಥ್ಯದಲ್ಲಿಯೇ ಇರುವ ಸೂತ್ರಧಾರನಿಗೆ ದನಿಯಿದೆ ಆದರೆ ಕಣ್ಣಿಲ್ಲ. ದನಿಯಿದ್ದವನಿಗೆ ನಿಜದ ಕನ್ನಡಿ ಕಾಣದು. ನಿಜದ ಕನ್ನಡಿ ಕಾಣುವವನಿಗೆ ದನಿಯಿಲ್ಲ. ಅದಕ್ಕೆ ಕನ್ನಡಿ ಮಾತಾಡುವುದಿಲ್ಲ. ಇಡಿ ನಾಟಕದ ಪ್ರತಿಮೆಯೇ ಇದು. ಇಲ್ಲಿನ ಹೆಣ್ಣುಗಳಿಗೆ ದನಿಯಿದೆ ಆದರೆ ಗಂಡು ಕೇಳಿಸಿಕೊಳ್ಳುತ್ತಿಲ್ಲ. ಈ ಸ್ವರೂಪವೇ ಇದರ ಜೀವಾಳ.

ಇಡೀ ನಾಟಕವನ್ನು ರಂಗದ ಮೇಲೆ ಜೀವಂತಿಕೆಯಿಂದ ನಡೆಸುವವರು ಗೊಂಬೆ ಮತ್ತು ಸೂತ್ರಧಾರ. ರಂಗದ ತುಂಬೆಲ್ಲ ಓಡಿಯಾಡುತ್ತ, ಪಾತ್ರಗಳ ಒಡಲಿನ ದನಿಯಾಗುತ್ತ, ಪ್ರೇಕ್ಷಕರಿಗೆ ಕಥೆ ಹೇಳುವ ವಿಧಾನ ಹೊಸತೆನಿಸಿದರೂ ಬಹುಶಃ ಈ ಸೂತ್ರ ತಪ್ಪಿದರೆ ಪ್ರೇಕ್ಷಕರಿಗೆ ಅರ್ಥವಾಗದೇ ಹೋಗಬಹುದೆನ್ನುವ ದ್ವಂದ್ವವಿತ್ತೆ 'ಅಥವಾ ಪಾತ್ರ ಮತ್ತು ಪ್ರೇಕ್ಷಕರ ನಡುವೆ ಗೊಂಬೆ ಮತ್ತು ಸೂತ್ರಧಾರ ಇಲ್ಲದೇ ಹೋಗಿದ್ದರೆ ಮಲ್ಲಿಗೆ ಮಂಟಪ ಕಳೆಗಟ್ಟುತ್ತಿದ್ದಿಲ್ಲವೇ' ಎನ್ನುವ ಪ್ರಶ್ನೆಯೂ ಕಾಡತೊಡಗುತ್ತದೆ.

ನಕ್ಕರೆ ಮಲ್ಲಿಗೆ ಸುರಿಯುವ ಚೆಲುವ ಮಲ್ಲಿಗೆರಾಯ. ಅವನ ಹೆಂಡತಿ ಮಲ್ಲಿಗೆ. ಅವನೋ ನಕ್ಕರೆ ಮಲ್ಲಿಗೆ, ಅವಳೋ ಅವಳೇ ಮಲ್ಲಿಗೆ. ಊರತುಂಬ ಅವನ ಪ್ರಶಂಸಕರೇ ಪ್ರಶಂಸಕರು. ಎಲ್ಲಿ ಅವನ ನಗುವಿಗಾಗಿ ಜನ ಕಾದರೋ ಅಲ್ಲೇ ಅವನ ಬಿಡಾರ. ಅಂತಃಪುರದಲ್ಲೀಗ ನಿಟ್ಟುಸಿರಿನದೇ ಮುಸ್ಸಂಜೆ. ಮಾಯೆಯಂಥಾ ಮನಸಿನಾ ಭಾರ, ತನುವ ತಂತಿಯ ಮಿಡಿದು ನುಡಿಸಬೇಕಾದವ ತನ್ನದೇ ಮೋಹದಲ್ಲಿ, ಸ್ವರತಿಯಲ್ಲಿ ಕಳೆದುಹೋಗಿದ್ದಾನೆ. ಮಲ್ಲಿಗೆ ನಲುಗುತ್ತಿದ್ದಾಳೆ. ಆದರೂ ತನ್ನವನ ಮೋಹದ ಲೀಲೆಯಲ್ಲಿಯೇ ಅವಳು ಲಯವಾಗಿದ್ದಾಳೆ. ಆದರೆ ಮಲ್ಲಿಗೆರಾಯನ ಮನಸಿನೊಳಗೆ ಅನುಮಾನದ ಹೊಗೆ ಸುತ್ತಿಕೊಳ್ಳುತ್ತದೆ. ನಾಟಕದ ಒಂದು ದೃಶ್ಯದಲ್ಲಿ ಮಲ್ಲಿಗೆರಾಯ 'ನನ್ನ ನಿನ್ನ ಸಂಬಂಧದಲ್ಲಿ ಇನ್ನೊಬ್ಬರು ನುಸುಳುವಷ್ಟು ತೆರಪಿದ್ದಿದ್ದಾದರೂ ಎಲ್ಲಿ', ನನ್ನ ಪ್ರೇಮದಲ್ಲಿ ಯಾವ ಕೊರತೆಯಿತ್ತು ಮಲ್ಲಿಗೇ ಎಂದು ಕೊರಗುತ್ತಾನೆ.

ಮಲ್ಲಿಗೆರಾಯ ಗೆಳೆಯ ಚೆನ್ನಿಗರಾಯನಲ್ಲಿಗೆ ಹೋಗುತ್ತಾನೆ. ನಕ್ಕರೆ ಮಲ್ಲಿಗೆ ಸುರಿಯುವ ಗೆಳೆಯನನ್ನು ತೋರಿಸಲು ಪುರಜನರ ದೊಡ್ಡ ಸಭೆಯನ್ನೇ ಆಯೋಜಿಸಿರುತ್ತಾನೆ ಚೆನ್ನಿಗರಾಯ. ಆದರೆ ಮಲ್ಲಿಗೆರಾಯನಿಗೆ ನಗು ಬರಲಿಲ್ಲ. ಮಲ್ಲಿಗೆ ಸುರಿಯಲಿಲ್ಲ.. ಎದೆಯಲ್ಲಿನ ಪ್ರೀತಿಯ ಗಿಡ



ಸತ್ತುಹೋಗಿರುತ್ತದೆ. ಮಲ್ಲಿಗೆ ಸುರಿಯುವುದು ಆ ಪ್ರೀತಿಯ ಅನುಭೂತಿಯಲ್ಲಿಯೇ ಹೊರತು ಯಾವ ಪವಾಡದಿಂದಲೂ ಅಲ್ಲ ಎನ್ನುವ ಸತ್ಯ ಅನಿಗರ್ಥವಾಗುವುದೇ ಇಲ್ಲ. ಇದು ತನಗೆ ಮಾಡಿದ ಮಿತ್ರದ್ರೋಹವೆಂದು ಬಗೆದ ಚೆನ್ನಿಗರಾಯ ಗೆಳೆಯನನ್ನು ಕಾರಾಗ್ರಹದಲ್ಲಿರಿಸುತ್ತಾನೆ.

ಇತ್ತ ಯಾವುದೇ ಅಪರಾಧವನ್ನೇ ಮಾಡದ ಹೆಣ್ಣು ಅಪರಾಧಿಯಾಗಬೇಕಾಗುತ್ತದೆ. ತಪ್ಪಿಹೋದ ಎಳೆಗಳನ್ನು ಮತ್ತೆ ಸೃಷ್ಟಿಸಿ ಪೂರ್ತಿ ಸನ್ನಿವೇಶವನ್ನು ಕಟ್ಟಿಕೊಡುವ ಗೊಂಬೆ ಮತ್ತು ಸೂತ್ರಧಾರನ ಪಾತ್ರಗಳು ನಾಟಕಗದ ಮೆರುಗನ್ನು ಹೆಚ್ಚಿಸಿವೆ.. ಇಡೀ ಒಂದೂವರೆಗಂಟೆ ಕಾಲ ಪ್ರೇಕ್ಷರೊಂದಿಗೆ ಆಪ್ತಾಲಾಪದಲ್ಲಿ ತೊಡಗಿದ ಗೊಂಬೆ ಮತ್ತು ಸೂತ್ರಧಾರರೇ ರಂಗದ ತುಂಬೆಲ್ಲ ಜೀವರಸದಂತೆ ಓಡಾಡುತ್ತಾರೆ. ಇಬ್ಬರದೂ ಅದ್ಭುತವಾದ ನಟನೆ.

ಮಲ್ಲಿಗೆರಾಯ ನಕ್ಕಾಗ ರಂಗದ ತುಂಬೆಲ್ಲ ಮಲ್ಲಿಗೆ ಉದುರುವ ದೃಶ್ಯವನ್ನು ಕಟ್ಟಿಕೊಡುವ ಟೆಕ್ನಿಕ್ ತುಂಬ ಚೆನ್ನಾಗಿದೆ. ವಸ್ತ್ರ ವಿನ್ಯಾಸ, ರಂಗಸಜ್ಜಿಕೆ ಎಲ್ಲವೂ ಸಮರ್ಪಕವಾಗಿದೆ. ಇನ್ನೊಂದು ಮಲ್ಲಿಗೆರಾಯ ಮತ್ತು ಸೈನಿಕರು ಕುದುರೆಯೇರಿ ಪಯಣಿಸುವ ಜನಪದೀಯ ತೊಗಲು ಬೊಂಬೆಯಾಟದ ದೃಶ್ಯ ಸೊಗಸಾಗಿದೆ. ವಿನೂತನ ಪ್ರಯೋಗ.

ಆದರೆ ಬಹುವಾಗಿ ಕಾಡುವುದೆಂದರೆ ಮಲ್ಲಿಗೆಯ ಒಂಟಿಯನದ ನೋವಿಗೆ ಸಮನಾಗಿ ನಂದಿನಿಯ ದುರಂತ ಪ್ರೇಕ್ಷಕರನ್ನು ತಟ್ಟುವುದಿಲ್ಲ. ನಿನ್ನೆಯ ಕತೆಗೂ ಮತ್ತು ಇಂದಿನ ಕತೆಗೂ ಅನುಸಂಧಾನವಾಗುವುದು ಗೊಂಬೆ ಮತ್ತು ಸೂತ್ರಧಾರನ ಮೂಲಕವೇ ಹೊರೆತು ಪ್ರತ್ಯಕ್ಷ್ಯವಾಗಲ್ಲ. ಮಲ್ಲಿಗೆ ಮತ್ತು ನಂದಿನಿಯ ಕಥೆ ಎಲ್ಲೂ ಜತೆಯಾಗಿ ಕೈಹಿಡಿದು ನಡೆಯುವುದಿಲ್ಲ. ಅವರಿಬ್ಬರು ಎಲ್ಲೂ ಸೇರದ ಕೊಂಡಿಗಳಾಗಿಯೇ ಉಳಿಯುತ್ತಾರೆ. ಇಬ್ಬರನ್ನೂ ಸಮೀಕರಿಸಲು ನೋಡಲು ಸಾಧ್ಯವಿಲ್ಲ. ಇಲ್ಲಿ ಯಾವ ಹೆಣ್ಣೂ ತಪ್ಪನ್ನೇ ಮಾಡಿಲ್ಲ. ಒಂದುವೇಳೆ ಮಾಡಿದ್ದರೆ ಏನಾಗುತ್ತಿತ್ತು ? ಎನ್ನುವ ಪ್ರಶ್ನೆಯೂ ಕಾಡುತ್ತಲೇ ಉಳಿಯುತ್ತದೆ. ಮೇಲ್ನೋಟಕ್ಕೆ ಸ್ತ್ರೀ ಸಂವೇದನೆಯುಳ್ಳ ಕಥನವೆನಿಸಿದರೂ ಒಳ ಆಳದಲ್ಲಿ ಪುರುಷಕೇಂದ್ರಿತ ನೋಟದ ಸಂಕೇತಗಳೂ ದಟ್ಟವಾಗಿವೆ ಎನಿಸುತ್ತದೆ.

ಮೀರಾ ಅರುಣ್ ಮತ್ತು ಮಾನಸಾ ಮುಸ್ತಫಾರ ವಸ್ತ್ರವಿನ್ಯಾಸ, ರಾಮಕೃಷ್ಣ ಬೆಳ್ತೂರರ ಪ್ರಸಾಧನ ಚಮತ್ಕಾರ ಹುಟ್ಟಿಸುತ್ತದೆ. ಶಶಿಧರ ಅಡಪರ ಕಲಾವಿನ್ಯಾಸ ಅಷ್ಟೇ ಅದ್ಭುತವಾಗಿದೆ. ಗಜಾನನ ನಾಯ್ಕ ಮತ್ತು ಪ್ರಕಾಶ್ ಶೆಟ್ಟಿಯವರ ಸಾರಥ್ಯದಲ್ಲಿ ಸಂಗೀತ ಸೊಗಸಾಗಿದೆ. ಒಟ್ಟಾರೆ ಮಲ್ಲಿಗೆ ಹೊಸ ಅನುಭವವದೊಂದಿಗ ಚಿಂತನೆಗೊಡ್ಡುವ ಸುಂದರ ನಾಟಕ. ಅ

*ರೇಣುಕಾ ನಿಡಗುಂದಿ*



ಇದೇ ಆಗಸ್ಟ್ 14ರಂದು ನಡೆದ ರಂಗಮಂಟಪದ ನಾಟಕ ವರ್ಷ ಸಂದರ್ಭದಲ್ಲಿ ನಾಟಕಕಾರರಾದ ಶ್ರೀ ಕೆ.ವೈ. ನಾರಾಯಣ ಸ್ವಾಮಿ ಅವರನ್ನು ದೆಹಲಿ ಕರ್ನಾಟಕ ಸಂಘದ ಪರವಾಗಿ ಸನ್ಮಾನಿಸಲಾಯಿತು.

'ಅಕ್ಕು' ಪಾತ್ರ ವಹಿಸಿದ ರಂಗಮಂಟಪದ ಕಲಾವಿದೆ ಯಶಸ್ವಿನಿ ರಾವ್ ಅವರು ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾಕ್ಕೆ ಆಯ್ಕೆಯಾದ ಸಂದರ್ಭದಲ್ಲಿ ನಾಟಕಕಾರ ಎಚ್.ಎಸ್. ಶಿವಪ್ರಕಾಶ್ ಅವರು ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದಿಸುತ್ತಿರುವುದು.






ಇದೇ ಆಗಸ್ಟ್ 31ರಂದು ನಡೆದ ಪದ್ಮಭೂಷಣ ಡಾ. ವೀರೇಂದ್ರ ಹೆಗ್ಗಡೆ ಅವರೊಂದಿಗೆ ನಡೆದ ಪರಸ್ಪರ ಕಾರ್ಯಕ್ರಮದಲ್ಲಿ ಮಂಗಳೂರಿನ ವಿದ್ಯಾಶ್ರೀ ರಾಧಾಕೃಷ್ಣ, ಗಾನ ನೃತ್ಯ ಅಕಾಡೆಮಿ ತಂಡದಿಂದ ಶ್ರೀಕೃಷ್ಣ ಕಾಳಿಂಗ ಮರ್ದನ ಹಾಗೂ ಶಿವನ ಕುರಿತಾದ ಭರತನಾಟ್ಯ ನೃತ್ಯ ಪ್ರದರ್ಶನ.



# ಜೆಎನ್‌ಯುನಲ್ಲಿ ಕರ್ನಾಟಕದ ಜನಪದ ಕಲೆಗಳ ಅಮೋಘ ಪ್ರದರ್ಶನ

ಜವಾಹರಲಾಲ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು)ದಲ್ಲಿ ಸ್ಥಾಪಿತವಾದ ಕನ್ನಡ ಅಧ್ಯಯನ ಪೀಠವು ಇದೇ ಅಗಸ್ಟ್ 11ರಂದು ಅಲ್ಲಿನ ವಿದ್ಯಾರ್ಥಿಗಳಿಗಾಗಿ ಕರ್ನಾಟಕದ ಪ್ರಮುಖ ನಾಲ್ಕು ಜನಪದ ಕಲೆಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿತು. ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ನಡೆದ ಭಾರತ ಪರ್ವ ಕಾರ್ಯಕ್ರಮಕ್ಕಾಗಿ ಕರ್ನಾಟಕದ ವಿವಿಧ ಕಡೆಗಳಿಂದ ಆಗಮಿಸಿದ 70 ಕಲಾವಿದರನ್ನು ಕನ್ನಡ ಸಂಸ್ಕೃತಿ ಇಲಾಖೆಯ ಸಹ ನಿರ್ದೇಶಕರಾದ ಶ್ರೀ ಬಲವಂತ ರಾವ್ ಪಾಟೀಲ್ ಅವರು ತಮ್ಮ ನೇತೃತ್ವದಲ್ಲಿ ಜೆ.ಎನ್.ಯು. ವಿಗೆ ಕರೆತಂದಿದ್ದರು. ಕನ್ನಡ ಭಾಷಾ ಪೀಠವು ಹಾಕಿಕೊಂಡ 'ಜೆ.ಎನ್.ಯು.ವಿಗೆ ಕರ್ನಾಟಕದ ಪರಿಚಯ' ಕಾರ್ಯಕ್ರಮದ ಭಾಗವಾಗಿ ಈ ಕಲಾ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ವಿಶ್ವವಿದ್ಯಾಲಯದ ಸಮಾಜ ವಿಜ್ಞಾನ ನಿಕಾಯದ ಸಭಾಂಗಣದಲ್ಲಿ ಸೇರಿದ ದೇಶ ವಿದೇಶಗಳ ಸುಮಾರು 250ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಮೊದಲು ಮಂಡ್ಯದಿಂದ ಆಗಮಿಸಿದ ಪೂಜಾ ಕುಣಿತವನ್ನು ತೋರಿಸಲಾಯಿತು. ಪೂಜಾ ಕುಣಿತವು ಶಕ್ತಿ ದೇವತೆಗೆ ಸಂಬಂದಿಸಿದಂತಹ ಒಂದು ಆಕರ್ಷಕ ಕುಣಿತ. ಬೆಂಗಳೂರು, ಮಂಡ್ಯ, ಕೋಲಾರ, ತುಮಕೂರು, ಮೈಸೂರು ಜಿಲ್ಲೆಗಳಲ್ಲಿ ಹೆಚ್ಚು ಪ್ರಚಲಿತವಾಗಿದೆ. ಹಬ್ಬ, ಉತ್ಸವದ ದಿನಗಳಲ್ಲಿ ದೇವತೆಯು 'ಪೂಜೆ'ಯ ರೂಪದಲ್ಲಿ ಹೊರಬರುತ್ತಾಳೆ. ಬಿದಿರಿನ ತಳಿ ಮಧ್ಯೆ ದೇವತೆಯ ಮುಖವಾಡಗೆಳನ್ನು ಇರಿಸಿಕೊಂಡು ಕುಣಿಯುವುದಕ್ಕೆ ಪೂಜಾ ಕುಣಿತವೆಂದು ಹೆಸರು. ಸುಮಾರು ಐದು ಅಡಿ ಉದ್ದ, ನಾಲ್ಕು ಅಡಿ ಅಗಲವಿರುವ ಬಿದಿರಿನ 'ಗಳು' ಮತ್ತು ಅದರ ಹಚ್ಚೆಗಳನ್ನು ಜೋಡಿಸಿ ಪೂಜೆಯನ್ನು ಸಿದ್ಧಪಡಿಸುತ್ತಾರೆ.

ಸಾಮ್ಯಾನವಾಗಿ ಬೋರಲಿಟ್ಟ ಮಡಿಕೆಗಳ ಮೇಲೆ ಅವು ಒಡೆಯದಂತೆ ತಾಳಕ್ಕೆ ತಕ್ಕಂತೆ ಒಂದೊಂದೇ ಹೆಜ್ಜೆಯಲ್ಲಿ ನಡೆಯುವುದು, ಮುಖವನ್ನು ಒಂದೇ ಕಡೆ ಮಾಡಿಕೊಂಡು ತಲೆಯ ಮೇಲಿರುವ ಪೂಜೆಯನ್ನು ಮಾತ್ರ ಒಂದು ಸುತ್ತು ತಿರುಗುವಂತೆ ಮಾಡುವುದು ಈ ಕುಣಿತದ ವಿಶೇಷ. ಇದಕ್ಕೆ ಹಿನ್ನೆಲೆಯಾಗಿ ವಾದ್ಯಗಳನ್ನು ಬಾರಿಸುವ ಜೊತೆಗೆ ಗ್ರಾಮದೇವತೆಗಳ ಹಾಡನ್ನು ಹೇಳಲಾಯಿತು. ಸುಮಾರು 35 ಕಿಲೋ ತೂಕದ ದೇವರನ್ನು ತಲೆಯಲ್ಲಿ ಹೊತ್ತು ಕುಣಿಯುವ ಮಂಡ್ಯದ ಮಹಿಳೆಯರ ಶಕ್ತಿಗೆ ಪ್ರೇಕ್ಷಕರು ನಿಬ್ಬೆರಗಾದರು.

ಇಲ್ಲಿ ಪ್ರದರ್ಶಿತವಾದ ಎರಡನೇ ಕಲೆ ವೀರಗಾಸೆ. ಇದು ಕರ್ನಾಟಕದ ಶೈವ ಸಂಪ್ರದಾಯಕ್ಕೆ ಸೇರಿದ ಸೊಗಸಾದ ಧಾರ್ಮಿಕ ವೀರನೃತ್ಯ. ನೃತ್ಯದ ನಡುವೆ ಕಲಾವಿದರುಗಳು ವೀರಭದ್ರನ ಒಡಪುಗಳನ್ನೂ ಹೇಳುತ್ತಾರೆ. ತಾಳ, ಶ್ರುತಿ, ಚಮಾಳ (ಸಮ್ಮೇಳ ಸಂಬಾಳ), ಓಲಗ ಅಥವಾ ಮೌರಿ, ಕರಡೆವಾದ್ಯ–ಎಂಬ ಪಂಚವಾದ್ಯಗಳು ಇಲ್ಲಿ ಬಳಕೆಯಾಗಿದ್ದು ವಿದ್ಯಾರ್ಥಿಗಳ ಗಮನ ಸಳೆಯುವಲ್ಲಿ ಈ ವಾದ್ಯಗಳು ಯಶಸ್ವಿಯಾದುವು. ಜೊತೆಗೆ ವೀರಭದ್ರ ತೋರಿದ ಪ್ರತಾಪಕ್ಕೆ ಕೂಡಾ ಪ್ರೇಕ್ಷಕರು ವಿಶೇಷವಾದ ಕರತಾಡನ ಮಾಡುವ ಮೂಲಕ ತಮ್ಮ ಮೆಚ್ಚುಗೆಯನ್ನು ಪ್ರಕಟಿಸಿದರು.

ಜೆಎನ್‌ಯು ಪ್ರೇಕ್ಷಕರ ಮನಗೆದ್ದ ಇನ್ನೊಂದು ಪ್ರದರ್ಶನ ಕಲೆಯೆಂದರೆ ಜೋಗತಿ ಕುಣಿತ. ಸವದತ್ತಿ ಎಲ್ಲಮ್ಮನ ಭಕ್ತರಾದ ಜೋಗತಿಯರು ಈಚಿನ ದಿನಗಳಲ್ಲಿ ಮಂಗಳಮುಖಿಯರೆಂದೇ ಕರೆಯಿಸಿಕೊಳ್ಳುತ್ತಿದ್ದಾರೆ. ಎಲ್ಲಮ್ಮನ ಪ್ರತೀಕವಾದ ಕೊಡವನ್ನು ತಲೆ ಮೇಲೆ ಇರಿಸಿಕೊಂಡು ಜಮದಗ್ನಿಯ ಕತೆಗೆ ಕುಣಿಯುವ ಭಕ್ತರು ಬಹಳ ಸಂಕೀರ್ಣವೂ, ಆಕರ್ಷಕವೂ ಆದ ನೃತ್ಯ ಪರಂಪರೆಯೊಂದನ್ನು ಪ್ರತೀತಗೊಳಿಸಿಕೊಂಡಿದ್ದಾರೆ. ಎಲ್ಲಮ್ಮ ಮೂಲದಲ್ಲಿ ಸಮೃದ್ಧಿ ದೇವತೆ ಇರಬಹುದು ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. ಒಂದು ಕಾಲಕ್ಕೆ ಹೀಗೆ ಫಲಸಮೃದ್ಧಿ ದೇವತೆಯಾಗಿದ್ದ ಎಲ್ಲಮ್ಮನ ಪುರಾಣಕ್ಕೆ ರೇಣುಕೆಯ ಪುರಾಣ ಸೇರಿಕೊಂಡಂತೆ ಮೇಲ್ನೋಟಕ್ಕೆ ಕಾಣುತ್ತದೆ. ಇಲ್ಲಿ ಕೊಡ ಶೀಲವನ್ನು ಮೀರಿದ ರೇಣುಕೆಯು ಜಮದಗ್ನಿ ಮತ್ತು ಪರಶುರಾಮರು ಪ್ರತಿನಿಧಿಸುವ ಪುರುಷ ಪ್ರಧಾನ ವ್ಯವಸ್ಥೆಗೆ ವಿರುದ್ಧವಾಗಿ ಮಹಿಳಾ ಪರವಾದ ಒಂದು ನೆಲೆಯನ್ನು ಹೊಂದಿದಂತೆ ತೋರುತ್ತದೆ. ಈ ಅಂಶವನ್ನು ಜೆ ಎನ್ ಯು ವಿದ್ಯಾರ್ಥಿಗಳು ಮರುದಿನ ನಡೆದ ಸಂಕ್ಷಿಪ್ತ ಚರ್ಚೆಯಲ್ಲಿ ಗುರುತಿಸಿದರು ಮತ್ತು ಈ ಕುರಿತು ಸಂಶೋಧನೆ ನಡೆಸುವ ಇರಾದೆಯನ್ನೂ ಪ್ರಕಟಪಡಿಸಿದರು. ಗಂಡಸರು ಜೋಗಮ್ಮಗಳಾಗುವುದು, ಹೆಂಗಸರು ಜೋಗತಿಯರಾಗಿ ದೀಕ್ಷೆ ಪಡೆಯುವುದು ಹಾಗೂ ಆ ಮೂಲಕ ಹುಟ್ಟಿಕೊಂಡ ದೇವದಾಸಿ ಸಂಪ್ರದಾಯ ಇವುಗಳೆಲ್ಲ ಸಂಶೋಧಕರಲ್ಲಿ ಮತ್ತಷ್ಟು ಪ್ರಶ್ನೆಗಳನ್ನು ಹುಟ್ಟು ಹಾಕಿದ್ದು, ಇದು ಕಾರ್ಯಕ್ರಮದ ಯಶಸ್ಸನ್ನು ಸಂಕೇತಿಸುತ್ತದೆ.

ಕಾರ್ಯಕ್ರಮದಲ್ಲಿ ಕೊನೆಗೆ ಪ್ರದರ್ಶಿತವಾದ ಕಲೆಯೆಂದರೆ ನಗಾರಿ. ಮೈಸೂರಿನ ನಗಾರಿ ಕಲಾವಿದರು ತಮ್ಮ ಅಸೀಮವಾದ ಉತ್ಸಾಹ ಮತ್ತು ತಾಕತ್ತನ್ನು ರಂಗದಲ್ಲಿ ಪ್ರಕಟಪಡಿಸಿದ ರೀತಿಗೆ ಎಲ್ಲರೂ ಮಾರುಹೋದರು. 'ನಗಾರಿ ಎತ್ತ ಮುಂದ ಮುಂದ ಪರಸಿ ಹೊಂಟ್ಯೆತಿ ಹಿಂದ ಹಿಂದ' ಎಂಬ ಮಾತಿನಲ್ಲಿ ಮೇಳವಾದ್ಯಗಳಲ್ಲಿ ನಗಾರಿಯ ಸ್ಥಾನ ನಿರ್ದೇಶಿತವಾಗಿದೆ. ಹಿಂದೆ ಉತ್ಸವ ಹೊರಡುವ ಕಾಲದಲ್ಲಿ ನಗಾರಿಗಳನ್ನು ಎತ್ತುಗಳ ಮೇಲೆ ಹೇರಿಕೊಂಡು ನುಡಿಸುತ್ತಾ ಉತ್ಸವದ ಮುಂಚೂಣಿಯಲ್ಲಿ ಕಲಾವಿದರಿರುತ್ತಿದ್ದರು. ಯುದ್ಧಗಳಲ್ಲಿ ಸೈನಿಕರನ್ನು ಹುರಿದುಂಬಿಸಲು, ವೈರಿಗಳ ಆಗಮನವನ್ನು ಸೂಚಿಸಲು, ಮಹತ್ವದ ಸುದ್ದಿ ಸಾರಲು ಕೂಡಾ ಈ ವಾದ್ಯವನ್ನು ಬಳಸಿಕೊಳ್ಳುತ್ತಿದ್ದರು. ಇಂಥ ಚಾರಿತ್ರಿಕ ಮಹತ್ವದ ನಗಾರಿಯ ಸದ್ದಿಗೆ ಅನೇಕರು ಮಾರು ಹೋದದ್ದರಲ್ಲಿ ಅಚ್ಚರಿಯೇನಿಲ್ಲ.

ಕಾರ್ಯಕ್ರಮದ ಆರಂಭದಲ್ಲಿ ಕನ್ನಡ ಭಾಷಾ ಪೀಠದ ಪ್ರಾಧ್ಯಾಪಕ ಪುರುಷೋತ್ತಮ ಬಿಳಿಮಲೆಯವರು ಎಲ್ಲರನ್ನೂ ಸ್ವಾಗತಿಸಿದರು. ಭಾರತೀಯ ಭಾಷಾ ಕೇಂದ್ರದ ಅಧ್ಯಕ್ಷ ಪ್ರೊ. ಅನ್ವರ್ ಪಾಶಾ ಅವರು ಸಂಸ್ಕೃತಿ ಇಲಾಖೆಯ ಜೊತೆ ಕಾರ್ಯದರ್ಶಿ ಶ್ರೀ ಬಲವಂತ ರಾವ್ ಪಾಟೀಲರಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು. ಶ್ರೀ ಬಲವಂತ ರಾವ್ ಪಾಟೀಲರು ಕಲಾವಿದರನ್ನು ಮತ್ತು ಪ್ರೇಕ್ಷಕರನ್ನು ಅಭಿನಂದಿಸಿದರು. ಕಲಾ ಮತ್ತು ಸೌಂದರ್ಯ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ. ಎಚ್.ಎಸ್. ಶಿವಪ್ರಕಾಶ ಅವರು ಕನ್ನಡ ಪೀಠವು ಜೆಎನ್‌ಯು ವಿನಲ್ಲಿ ಬಲವಾಗಿ ಬೇರೂರುತ್ತಿರುವುದರ ಬಗ್ಗೆ ತಮ್ಮ ಸಂತಸ ವ್ಯಕ್ತ ಪಡಿಸಿದರು. ವಿದ್ಯಾರ್ಥಿಗಳ ಜೊತೆಗೆ ವಿಶ್ವವಿದ್ಯಾಲಯದ ಅನೇಕ ಪ್ರಾಧ್ಯಾಪಕರೂ, ಪ್ರತಿಷ್ಠಿತ ಕನ್ನಡಿಗರೂ ಕಾರ್ಯಕ್ರಮದಲ್ಲಿ ಹಾಜರಿದ್ದರು. ಅ

***ಡಾ. ಪುರುಷೋತ್ತಮ ಬಿಳಿಮಲೆ***



# ದೆಹಲಿ ಕರ್ನಾಟಕ ಸಂಘದಲ್ಲಿ ಕರ್ನಾಟಕದ ವರ್ಣರಂಜಿತ ಜಾನಪದ ಪ್ರಾತ್ಯಕ್ಷತೆ



ಭಾರತ ಸರ್ಕಾರವು ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ದೆಹಲಿಯ ರಾಜಪಥ್‌ನಲ್ಲಿ, ನಡೆದ ಭಾರತ ಪರ್ವ ಕಾರ್ಯಕ್ರಮಕ್ಕಾಗಿ ಕರ್ನಾಟಕದ ವಿವಿಧ ಕಡೆಗಳಿಂದ ಆಗಮಿಸಿದ ಜಾನಪದ ಕಲಾತಂಡಗಳ ಪ್ರದರ್ಶನವು ಇದೇ ಆಗಸ್ಟ್ 13ರಂದು ದೆಹಲಿ ಕರ್ನಾಟಕ ಸಂಘದ ಆವರಣ ಮತ್ತು ಸಭಾಂಗಣದಲ್ಲಿ ನಡೆಯಿತು. ಈ ಕಾರ್ಯಕ್ರಮವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಶ್ರೀ ಬಲವಂತ ರಾವ್ ಪಾಟೀಲ ಅವರ ನೇತೃತ್ವದಲ್ಲಿ ನಡೆಯಿತು. ಈ ವರ್ಣರಂಜಿತ ಕಾರ್ಯಕ್ರಮವು ಕನ್ನಡ ಮತ್ತು ಕನ್ನಡೇತರರ ಮನಸೆಳೆಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಕಲಾತಂಡಗಳಿಗೆ ಸಂಘದ ಸ್ಮರಣಿಕೆ ಮತ್ತು ಹೂಗುಚ್ಛ ನೀಡಿ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಗೌರವಿಸಿದರು. ಇದೇ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷೆ ಶ್ರೀಮತಿ ಆಶಾಲತ, ಖಜಾಂಚಿ ಶ್ರೀ ಕೆ.ಎಸ್.ಜಿ. ಶೆಟ್ಟಿ ಹಾಗೂ ಇನ್ನಿತರ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಜರಿದ್ದರು. ಈ ಕಾರ್ಯಕ್ರಮವನ್ನು ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ನಿರೂಪಿಸಿದರು. ಅ

***ಅಭಿಮತ ವರದಿ***

# ಸಾಲಿಗ್ರಾಮ ಮೇಳದ ಯಕ್ಷಗಾನ ಕಲಾವಿದರೊಂದಿಗೆ ಪರಸ್ಪರ



ಶ್ರೀ ಗುರುಪ್ರಸಾದಿತ ಯಕ್ಷಗಾನ ಮಂಡಳಿ, ಸಾಲಿಗ್ರಾಮದ ಕಲಾವಿದರು, ಇದೇ ಜುಲೈ 16ರಂದು 'ಭೀಷ್ಮ ವಿಜಯ' ಮತ್ತು 'ನಾಗಶ್ರೀ' ಆಹೋರಾತ್ರಿ ಯಕ್ಷಗಾನ ಪ್ರಸಂಗಗಳು ದೆಹಲಿಯ ಕನ್ನಡಿಗರ ಮನದಾಳದಲ್ಲಿ ಅಚ್ಚಳಿಯದೆ ಉಳಿಯುವಂತಹ ಪ್ರದರ್ಶನವನ್ನು ನೀಡಿರುವುದು ಅಷ್ಟೇ ಅಲ್ಲದೆ, ಸಂಘದ ವಿಚಾರಸಂಕಿರಣದ ಭವನದಲ್ಲಿ ಜುಲೈ 14ರಂದು ನಡೆದ 'ಪರಸ್ಪರ' ಕಾರ್ಯಕ್ರಮದಲ್ಲಿ ದೆಹಲಿಯ ಹಲವಾರು ಮಂದಿ ಕಲಾವಿದರು ಮತ್ತು ಗಣ್ಯರೊಡನೆ ತಮ್ಮ ಮೇಳದ ಬದುಕಿನ ಅನುಭವಗಳನ್ನು ಮನಮುಟ್ಟುವಂತೆ ಹಂಚಿಕೊಂಡರು.

ಸುಮಾರು 40 ವರ್ಷಗಳಿಂದ ಮೇಳದಲ್ಲಿ ಸಹಾಯಕನಾಗಿ ದುಡಿಯುತ್ತಿರುವ ಅರಾಟೆ ಕೃಷ್ಣ ಅವರು ತಮ್ಮ ಮೇಳದ ಅಂದಿನಿಂದ ಇಂದಿನವರೆಗಿನ ಮಾಲೀಕರು, ಕಾಳಿಂಗ ನಾವಡರೂ ಸೇರಿದಂತೆ ಭಾಗವತರು ಹಾಗೂ ವೇಷಧಾರಿಗಳ ಜೊತೆಗಿನ ಅನುಭವಗಳನ್ನು ಹಂಚಿಕೊಂಡರು. ಚೆಂಡೆ, ಮದ್ದಳೆ, ಭಾಗವತಿಕೆ ಹಾಗೂ ಹಾಸ್ಯ ಇವೆಲ್ಲದರ ನಡುವಿನ ರಂಗದ ಮೇಲೆ ಮತ್ತು ರಂಗದ ಹಿಂದೆ ನಡೆಯುವ ಹಲವಾರು ಸಿಹಿ ಅನುಭವಗಳನ್ನು ವಿವಿಧ ಕಲಾವಿದರು ಬಣ್ಣಿಸಿದರು. ದೆಹಲಿಯ ದೂರದ ಊರಿಗೆ ಬರುವ ಮೊದಲು ಅವರಿಗಿದ್ದ ಮುಜುಗರ ಹಾಗೂ ಇಲ್ಲಿ ಬಂದ ನಂತರ ಸಂಘದ ಸಿಬ್ಬಂದಿಗಳು, ಪದಾಧಿಕಾರಿಗಳು ಹಾಗೂ ಇತರ ಸದಸ್ಯರುಗಳೊಡನೆ ಬೆರೆತು ಮಾತನಾಡಿದೊಡನೆ ಅವರಿಗಾದ ಅನುಭವಗಳನ್ನು ಸಹ ಬಹಳ ಸೂಕ್ಷ್ಮವಾಗಿ ವಿವರಿಸಿದರು. ಮೇಳದ ಮ್ಯಾನೇಜರ್‌ಗಳಾದ ಎನ್.ಜಿ. ಹೆಗ್ಡೆ ಸಿದ್ದಾಪುರ, ಪ್ರಶಾಂತ್ ಶೆಟ್ಟಿ ಬೈಲೂರು ಹಾಗೂ ಸಹಾಯಕರಾದ ಹರೀಶ್ ಮತ್ತು ಕಲಾವಿದರು ಸಂಘದ ಆತಿಥ್ಯವನ್ನು ಕೃತಜ್ಞತಾಪೂರ್ವಕವಾಗಿ ವಿವರಿಸಿದರು.

ಸುಪ್ರಸಿದ್ಧ ಭಾಗವತರಾದ ಶ್ರೀ ರಾಘವೇಂದ್ರ ಮಯ್ಯ, ರವಿಕುಮಾರ್, ಆನಂದ್ ಕುಮಾರ್ ಚೆಂಡೆವಾದಕರಾದ ಶ್ರೀ ಶಿವಾನಂದ ಕೋಟ, ರಾಮ ಭಂಡಾರಿ, ಮದ್ದಳೆಗಾರರಾದ ಶ್ರೀ ಪರಮೇಶ್ವರ ಭಂಡಾರಿ ಮತ್ತು ನಾಗರಾಜ ಭಂಡಾರಿ, ಮುಖ್ಯ ಸ್ತ್ರೀಪಾತ್ರಧಾರಿಯಾದ ಶಶಿಧರ ಶೆಟ್ಟಿ ಕಾರ್ಕಳ, ಹಾಸ್ಯಗಾರರಾದ ಮಹಾಬಲೇಶ್ವರ ಭಟ್ ಕ್ಯಾದಗಿ, ಅರುಣ್ ಕುಮಾರ್ ಜಾರ್ಕಳ, ಮುಖ್ಯವೇಷಧಾರಿಗಳಾದ ಪ್ರಸನ್ನ ಶೆಟ್ಟಿಗಾರ್ ಮಂದರ್ತಿ, ಭಾಸ್ಕರ ಬಿಲ್ಲವ ತುಂಬ್ರಿ, ಈಶ್ವರ ನಾಯ್ಕ್ ಮಂಕಿ, ರಾಜೇಶ್ ಭಂಡಾರಿ ಗುಣವಂತೆ, ನರಸಿಂಹ ಗಾಂವ್‌ಕರ್ ಯಲ್ಲಾಪುರ ಮತ್ತಿತರರು ಯಕ್ಷಗಾನ ಕ್ಷೇತ್ರದಲ್ಲಿ ನಡೆದು ಬಂದ ಬದಲಾವಣೆಗಳ ಬಗ್ಗೆ ಹಾಗೂ ಯಕ್ಷಗಾನವು ಎದುರಿಸುತ್ತಿರುವ ಸವಾಲುಗಳ ಬಗ್ಗೆ ತಮ್ಮ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಎಲ್ಲಾ ಕಲಾವಿದರು ಹಾಗೂ ಇತರ ಸಿಬ್ಬಂದಿಗಳು ಒಕ್ಕೊರಲಿನಿಂದ ಮೇಳದ ವ್ಯವಸ್ಥಾಪಕರಾದ ಶ್ರೀ ಪಿ. ಕಿಶನ್ ಹೆಗ್ಡೆ ಅವರ ನಾಯಕತ್ವ ಹಾಗೂ ಕಲಾವಿದರನ್ನು ಗೌರವದಿಂದ ನಡೆಸಿಕೊಳ್ಳುವ ಗುಣವನ್ನು ಕೊಂಡಾಡಿದರು.

ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಖಜಾಂಚಿ ಶ್ರೀ ಕೆ.ಎಸ್.ಜಿ. ಶೆಟ್ಟಿ, ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಶ್ರೀ ಸಖಾರಾಮ ಉಪ್ಪೂರು, ಶ್ರೀ ರಾಧಾಕೃಷ್ಣ, ಶ್ರೀಮತಿ ಪೂಜಾ ಪಿ. ರಾವ್ ಇನ್ನು ಹಲವಾರು ದೆಹಲಿಯ ಗಣ್ಯ ಕನ್ನಡಿಗರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಲಾವಿದರ ಕಷ್ಟಸುಖಗಳನ್ನು ಹಾಗೂ ಅನುಭವಗಳನ್ನು ಆಲಿಸಿದರು.

ಕಾರ್ಯಕ್ರಮದ ಮೊದಲಲ್ಲಿ ಶ್ರೀ ಸಖಾರಾಮ ಉಪ್ಪೂರು ಅವರು ಎಲ್ಲರನ್ನು ಸ್ವಾಗತಿಸುತ್ತಾ, ಸಾಲಿಗ್ರಾಮ ಮೇಳದ ಒಂದು ಕಿರುಪರಿಚಯ ಮಾಡಿಕೊಟ್ಟರು. ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ನಾಗಶ್ರೀ ಮತ್ತು ಭೀಷ್ಮ ವಿಜಯ ಪ್ರಸಂಗಗಳ ಕುರಿತಾಗಿ ಸಂಕ್ಷಿಪ್ತವಾಗಿ ವಿವರಿಸಿ, ದೆಹಲಿ ಕರ್ನಾಟಕ ಸಂಘವು ಯಕ್ಷಗಾನ ಕಲೆಗೆ ಮತ್ತು ಕಲಾವಿದರ ಪ್ರೋತ್ಸಾಹಕ್ಕಾಗಿ ನಡೆಸಿಕೊಂಡು ಬರುತ್ತಿರುವ ಪ್ರಯತ್ನಗಳನ್ನು ವಿವರಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಧನ್ಯವಾದಗಳನ್ನು ಅರ್ಪಿಸಿದರು. ಅ

***ಸಖಾರಾಮ ಉಪ್ಪೂರು***

# ಸ್ವಾತಂತ್ರ್ಯ ದಿನಾಚರಣೆ-70

## ಒಂದು ಅವಲೋಕನ

ಭಾರತಾಂಬೆ ಬ್ರಿಟೀಷರ ದಾಸ್ಯದ ಸಂಕೋಲೆಯಿಂದ ಮುಕ್ತಗೊಂಡ ಆಗಸ್ಟ್ 15ನೇ ತಾರೀಕು ಪ್ರತಿಯೊಬ್ಬ ಭಾರತೀಯನಿಗೂ ಅತ್ಯಂತ ಸಂಭ್ರಮ ಸಡಗರದ ದಿನ.

1947ರ ನಡುರಾತ್ರಿ ಭಾರತ ದೇಶಕ್ಕೆ ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ನಮ್ಮ ಮೊದಲ ಪ್ರಧಾನಿ ಪಂಡಿತ್ ಜವಹರಲಾಲ್ ನೆಹರೂ ಅವರು ಮಾಡಿದ ರೋಮಾಂಚನಕಾರಿ ಭಾಷಣವನ್ನು ಆಕಾಶವಾಣಿಯ ಮೂಲಕ ಪ್ರಸಾರ ಮಾಡಿ ದೇಶವಾಸಿಗಳಿಗೆಲ್ಲಾ ದೇಶ ಸ್ವಾತಂತ್ರ್ಯಗೊಂಡ ಸಂಭ್ರಮವನ್ನು ಹಂಚಿಕೊಳ್ಳಲಾಯಿತು. ಇದು 70ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಯಾಗಿದ್ದು ಇಡೀ ದೇಶದೆಲ್ಲೆಡೆ ಅತ್ಯಂತ ವೈಭವಯುತವಾಗಿ ಆಚರಿಸಲ್ಪಡುತ್ತಿದೆ. ಭಾರತ ಸರ್ಕಾರ ಕೂಡ 70ನೇ ಈ ಸ್ವಾತಂತ್ರ್ಯ ದಿನಾಚರಣೆಯನ್ನು ಹದಿನೈದು ದಿನಗಳ 'ಭಾರತ್ ಪರ್ವ' ಮತ್ತು 'ತಿರಂಗಾ ಯಾತ್ರೆ' ಎಂಬ ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದು ದೇಶದ ಮೂಲೆ ಮೂಲೆಗಳಲ್ಲಿರುವ ಎಲ್ಲ ದೇಶಬಾಂಧವರಿಗೂ ಭಾರತ ಸ್ವಾತಂತ್ರ್ಯ ದಿನಾಚರಣೆಯ ಮಹತ್ವವನ್ನು ತಿಳಿಸುವ ಮತ್ತು ಇಂದಿನ ಯುವ ಪೀಳಿಗೆಗೆ ಮುಖ್ಯವಾಗಿ ಮಕ್ಕಳಿಗೆ ನಮ್ಮ ದೇಶದ ಪರಂಪರೆ, ಸಂಸ್ಕೃತಿ, ಆದರ್ಶ, ಮೌಲ್ಯಗಳ ಬಗ್ಗೆ ಗೌರವ ಭಾವನೆ ಮೂಡಿಸುವ ಪ್ರಯತ್ನ ಮಾಡುತ್ತಿದೆ.

ಮುಖ್ಯವಾಗಿ ನಾವು ಸ್ವಾತಂತ್ರ್ಯ ದಿನಾಚರಣೆಯಂತಹ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದರ ಮಹತ್ವ ಏನು ಎಂಬುದನ್ನು ಕುರಿತು ಆಲೋಚಿಸಿದಾಗ: ಇವತ್ತು ನಮ್ಮ ದೇಶ ಸ್ವಾತಂತ್ರ್ಯಗೊಂಡಿದ್ದರೂ ಕೂಡ ಗಡಿಭಾಗಗಳಲ್ಲಿ ಒಂದು ಕಡೆ ಪಾಕಿಸ್ತಾನ ಮತ್ತು ಇನ್ನೊಂದೆಡೆ ಚೀನಾ ದೇಶಗಳು ಕಾಲುಕೆರೆದು ಜಗಳಕ್ಕೆ ಬರುತ್ತಿವೆ. ಭಯೋತ್ಪಾದನೆ ಎಲ್ಲೆಡೆ ನಡುಕ ಸೃಷ್ಟಿಸುತ್ತಿದೆ. ಇನ್ನೂ ಮುಖ್ಯವಾಗಿ ದೇಶದೊಳಗೆ ದಲಿತರು ಮತು ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ, ಮಹಿಳೆ ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ಅತ್ಯಾಚಾರ–ಇತ್ಯಾದಿ ಪಿಡುಗುಗಳಿಂದ ದೇಶವಾಸಿಗಳನ್ನು ಬಿಡುಗಡೆಗೊಳಿಸಬೇಕಾದ ತುರ್ತು ಎದುರಾಗಿದೆ. ಆದ್ದರಿಂದ ಈ ಕಾರ್ಯದಲ್ಲಿ ತೊಡಗಿಕೊಳ್ಳುವುದಕ್ಕೆ ಸದೃಢ ಯುವ ಪಡೆಯನ್ನು ನಿರ್ಮಿಸಬೇಕಾದ ಅಗತ್ಯವಿದೆ. ಯುವಕರು, ಮಕ್ಕಳು ಎಲ್ಲರಲ್ಲೂ ದೇಶದಲ್ಲಿನ ಈ ಪಿಡುಗುಗಳನ್ನು ನಿಯಂತ್ರಿಸುವ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸಬೇಕಿದೆ. ಈ ನಿಟ್ಟಿನಲ್ಲಿ ಇಂದಿನ ಯುವ ಜನಾಂಗ ದೇಶಸೇವೆ ಮತ್ತು ಸಮಾಜ ಸೇವಾ ಮನೋಭಾವನೆಗಳನ್ನು ಮೈಗೂಡಿಸಿಕೊಳ್ಳಬೇಕಾದ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚು ಇದೆ. ನಮ್ಮ ಯುವ ಪೀಳಿಗೆಗೆ ಸ್ವತಂತ್ರ ಭಾರತದ ಇಂದಿನ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಪರಿಸ್ಥಿತಿಗಳನ್ನು ಮನದಟ್ಟು ಮಾಡಿಕೊಡಬೇಕಾದರೆ ಈ ಸನ್ನಿವೇಶಗಳನ್ನು ಸ್ವಾತಂತ್ರ್ಯ ಪೂರ್ವದ ಸನ್ನಿವೇಶಗಳ ಜೊತೆ ಹೋಲಿಕೆ ಮಾಡಿ ತಿಳಿಸುವುದು ಅಗತ್ಯವಿದೆ. ಆದುದರಿಂದ ಸ್ವಾತಂತ್ರ್ಯ ದಿನಾಚಾರಣೆಯನ್ನು ಆಚರಣೆ ಮಾಡುವ ನಿಜವಾದ ಉದ್ದೇಶ ಬ್ರಿಟೀಷರ ದಾಸ್ಯಕ್ಕೊಳಗಾಗಿದ್ದ ಸಂದರ್ಭದಲ್ಲಿ ನಮ್ಮ ಹಿರಿಯ ತಲೆಮಾರಿನವರು ಅನುಭವಿಸಿದ್ದ ಕಷ್ಟ ಕಾರ್ಪಣ್ಯಗಳು ಹಾಗೂ ದೇಶವನ್ನು ಬ್ರಿಟೀಷರಿಂದ ಮುಕ್ತಿಗೊಳಿಸಲು ನಡೆಸಿದ ಸ್ವಾತಂತ್ರ್ಯ ಹೋರಾಟ, ತ್ಯಾಗ ಬಲಿದಾನಗಳು, ಕಾರಾಗೃಹವಾಸ ಎಲ್ಲವನ್ನು ತಿಳಿಸಿಕೊಟ್ಟು, ಇಷ್ಟೆಲ್ಲಾ ಹೋರಾಟದ ಫಲವಾಗಿ ದೊರೆತಿರುವ ಅಮೂಲ್ಯವಾದ ಸ್ವಾತಂತ್ರ್ಯವನ್ನು ಸದುಪಯೋಗಪಡಿಸಿಕೊಂಡು ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ದೇಶವಾದ ನಮ್ಮ ಭಾರತದೇಶವನ್ನು ಜಾಗತಿಕ ಭೂಪಟದಲ್ಲಿ ಮಿನುಗಿ ಮೆರೆಯುವಂತೆ ಮಾಡಬೇಕಾದ ಗುರುತರ ಜವಾಬ್ದಾರಿ ಪ್ರತಿಯೊಬ್ಬ ಭಾರತೀಯನದ್ದೂ ಆಗಿರುತ್ತದೆಂಬದನ್ನು ಮನಗಾಣಬೇಕಿದೆ. ಈ ಹಿನ್ನೆಲೆಯಲ್ಲಿ "70 ವರ್ಷದ ಸ್ವಾತಂತ್ರ್ಯ ದಿನಾಚರಣೆ–ಪ್ರಾಣಾರ್ಪಣೆ ಮಾಡಿದವರ ಸ್ಮರಣೆ" ಎಂಬ ಹೆಸರಿನ 15 ದಿನಗಳ ಕಾರ್ಯಕ್ರಮವನ್ನು ಭಾರತ ಸರ್ಕಾರ ಆಯೋಜಿಸಿದ್ದುದು ಅರ್ಥಪೂರ್ಣವಾಗಿದೆ.

ಈ ರೀತಿ ದೇಶದ ವಿಮೋಚನೆಗಾಗಿ ನಡೆದ ಸುಮಾರು ಇನ್ನೂರು ವರ್ಷಗಳ ಹೋರಾಟಗಳಲ್ಲಿ ಕರ್ನಾಟಕ ಕೂಡ ಅಪಾರ ಕೊಡುಗೆ ನೀಡಿದೆ. ಬ್ರಿಟೀಷರ ವಿರುದ್ಧ ಟೊಂಕ ಕಟ್ಟಿ ಹೋರಾಡಿದ ವೀರ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ, ಬ್ರಿಟೀಷರಿಗೆ ಸಿಂಹಸ್ವಪ್ನವಾಗಿದ್ದ ಮೈಸೂರುಹುಲಿ ಟಿಪ್ಪು ಸುಲ್ತಾನ್, ಸಂಗೊಳ್ಳಿ ರಾಯಣ್ಣ ಮುಂತಾದವರ ವೀರ ಶೌರ್ಯಗಳ ಜೊತೆಗೆ ಈಸೂರು, ವಿದುರಾಶ್ವಥ ಮತ್ತು ಶಿವಪುರ ಗಳಲ್ಲಿ ನಡೆದ ಸ್ವತಂತ್ರ ಹೋರಾಟಗಳು ಕೂಡ ಸ್ಮರಣೀಯವಾಗಿವೆ.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ಈ ಸಂದರ್ಭದಲ್ಲಿ ಹಲವು ಬಾರಿ ಕರ್ನಾಟಕಕ್ಕೆ ಭೇಟಿ ನೀಡಿ ಕನ್ನಡಿಗರನ್ನು ಹುರಿದುಂಬಿಸಿರುವ ಉದಾಹರಣೆಗಳಿವೆ.

ಇನ್ನು ಕಳೆದ 70ವರ್ಷಗಳ ಸ್ವಾತಂತ್ರ್ಯ ಭಾರತದ ಆಡಳಿತದಲ್ಲಿ ನಮ್ಮ ದೇಶದ ಕೃಷಿ, ಶಿಕ್ಷಣ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಆಗಿರುವ ಸಾಧನೆ ಮತ್ತು ಆಗಬೇಕಿರುವ ಕೆಲಸಗಳನ್ನು ಕುರಿತು ನೋಡಿದಾಗ–ಈ 70 ವರ್ಷಗಳಲ್ಲಿ ಭಾರತ ದೇಶ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರ, ಬಾಹ್ಯಕಾಶ ಕ್ಷೇತ್ರ, ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಅಗಾಧವಾದ ಸಾಧನೆ ಮಾಡಿದೆ. ಇನ್ನು ಕೃಷಿ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗನುಗುಣವಾಗಿ ಇನ್ನೂ ಕೂಡ ಬಹಳಷ್ಟು ಸಾಧನೆ ಮಾಡಬೇಕಾಗಿದೆ.



**ಶಿಕ್ಷಣ ಕ್ಷೇತ್ರ :** 1950–51ರಲ್ಲಿ ಭಾರತದ ಸಾಕ್ಷರತೆಯ ಪ್ರಮಾಣ 12.2% ರಷ್ಟಿತ್ತು. 2011ರಲ್ಲಿ ಅದು 74% ಆಗಿದೆ. ಅದೇ ಕರ್ನಾಟಕದ ಸಾಕ್ಷರತೆ ಪ್ರಮಾಣ 75.6% ಇದೆ.

ಇನ್ನು ದೇಶದಲ್ಲಿ ಶಾಲಾ ದಾಖಲಾತಿ 1950–51ರಲ್ಲಿ 43% ಇದ್ದುದ್ದು 2000ನೇ ಇಸವಿ ವೇಳೆಗೆ 100% ಆಗಿದೆ.

1950–51ರಲ್ಲಿ ಒಟ್ಟು 2.10 ಲಕ್ಷ ಶಾಲೆಗಳಿದ್ದುವು. ಈಗ ಭಾರತದಾದ್ಯಂತ ಒಟ್ಟು 15 ಲಕ್ಷ ಶಾಲೆಗಳಿವೆ. ಒಟ್ಟು 25.2 ಕೋಟಿ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಅಲ್ಲದೆ 3 ಕೋಟಿ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮಾಡುತ್ತಿದ್ದಾರೆ. ಸರ್ಕಾರ ಪ್ರತಿಯೊಬ್ಬ ಪ್ರಾಥಮಿಕ ಶಾಲಾ ವಿದ್ಯಾರ್ಥಿಯ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿರುವ ಹಣದಲ್ಲಿ 11,217 ಆಗಿದೆ.

ಇಷ್ಟೆಲ್ಲ ಆದರೂ ಕೂಡ ಹೆಣ್ಣುಮಕ್ಕಳ ಶಾಲಾ ದಾಖಲಾತಿ ಪ್ರಮಾಣ ಇನ್ನು ಕೂಡ 100% ಆಗಿಲ್ಲ. 1ನೇ ತರಗತಿಗೆ 100 ವಿದ್ಯಾರ್ಥಿಗಳು ಪ್ರವೇಶ ಪಡೆದರೆ 9ನೇ ತರಗತಿಗೆ ಬರುವ ವೇಳೆಗೆ ಕೇವಲ 64 ವಿದ್ಯಾರ್ಥಿಗಳೂ, ಹಾಗೆಯೇ 11ನೇ ತರಗತಿಯ ವೇಳೆಗೆ 54 ವಿದ್ಯಾರ್ಥಿಗಳಿರುತ್ತಾರೆ.

ಪ್ರಸ್ತುತ ನಮ್ಮ ದೇಶದಲ್ಲಿ ಶಿಕ್ಷಣಕ್ಕೆ ಖರ್ಚು ಮಾಡುತ್ತಿರುವ ಹಣ ದೇಶದ ಜಿ.ಡಿ.ಪಿ.ಯ 3.8% ಆಗಿದೆ. ಈ ಪ್ರಮಾಣ ಶೇ.6ರಷ್ಟು ಆಗಬೇಕಾದ ಅಗತ್ಯವಿದೆ. ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ನಮ್ಮ ಸಮಾಜದಲ್ಲ ಇನ್ನೂ ಹೆಚ್ಚಿನ ಜನಜಾಗೃತಿ ಮೂಡಬೇಕಿದೆ, ಇದಕ್ಕಾಗಿ ನಾವೆಲ್ಲರೂ ಕೈಜೋಡಿಸಿ ಕೆಲಸ ಮಾಡಿದಾಗ ಮಾತ್ರ ಶೇ. 100% ರಷ್ಟು ಸಾಧನೆ ಸಾಧ್ಯವಾಗುತ್ತದೆ. ನಮ್ಮ ಜಿಲ್ಲೆ, ರಾಜ್ಯ, ಮತ್ತು ದೇಶ ಸುಶಿಕ್ಷಿತಗೊಳ್ಳಲು ಸಾಧ್ಯವಾಗುತ್ತದೆ.

**ಕೃಷಿ ಕ್ಷೇತ್ರ :** 1950–51ರಲ್ಲಿ ನಮ್ಮ ದೇಶದ ವಾರ್ಷಿಕ ಆಹಾರ ಉತ್ಪಾದನೆ ಪ್ರಮಾಣ ಕೇವಲ 50.83 ಮಿಲಿಯನ್ ಟನ್ನುಗಳಷ್ಟಿತ್ತು. 2015ರ ವೇಳೆಗೆ ಈ ಪ್ರಮಾಣ 265 ಮಿಲಿಯನ್ ಟನ್ನುಗಳಾಗಿದೆ. ದೇಶದಲ್ಲಿ ಆಹಾರ ಭದ್ರತೆ ಕಾಯ್ದೆ ಜಾರಿಗೆ ತಂದು ಪ್ರತಿಯೊಬ್ಬ ಬಿಪಿಎಲ್ ಫಲಾನುಭವಿಗೂ ಪ್ರತಿ ತಿಂಗಳು ಪಡಿತರ ಧಾನ್ಯಗಳನ್ನು ವಿತರಿಸಲಾಗುತ್ತಿದೆ.

ಇನ್ನು ಹಾಲಿನ ಉತ್ಪಾದನೆಯಲ್ಲಿ ಭಾರತ ಜಗತ್ತಿನಲ್ಲೇ ಮೊದಲ ಸ್ಥಾನದಲ್ಲಿದೆ. 2009–10ರಲ್ಲಿ 116 ಮಿಲಿಯನ್ ಟನ್ ಹಾಲಿನ ಉತ್ಪಾದನೆಯಾಗಿದ್ದರೆ, 2014ರಲ್ಲಿ 146 ಮಿ. ಟನ್ನುಗಳಷ್ಟು ಉತ್ಪಾದನೆ ಮಾಡಲಾಗಿದೆ. ಆದರೂ ಆಹಾರಧಾನ್ಯಗಳ ಸಂಸ್ಕರಣೆ, ಗುಣಮಟ್ಟದ ಹಾಲು ಉತ್ಪಾದನೆ, ಹಣ್ಣು ತರಕಾರಿಗಳ ಬೆಳೆಗಳಲ್ಲಿ ಆಗುತ್ತಿರುವ ನಷ್ಟ ಇತ್ಯಾದಿಗಳನ್ನು ಸರಿಪಡಿಸಿಕೊಳ್ಳಲು ಮತ್ತು ಕೃಷಿ ಯಂತ್ರೋಪಕರಣಗಳನ್ನು ಬಳಕೆ ಮಾಡಿಕೊಂಡು ಆಧುನಿಕ ಕೃಷಿ ಪದ್ಧತಿಯನ್ನು ಅನುಸರಿಸಲು ನಮ್ಮ ಯುವ ಜನಾಂಗ ಕೃಷಿ ಕ್ಷೇತ್ರದ ಕಡೆಗೆ ಆಸಕ್ತಿ ತೋರಬೇಕಾಗಿದೆ. ಆಗ ಮಾತ್ರ ಕೃಷಿಯನ್ನು ಲಾಭದಾಯಕ ಕ್ಷೇತ್ರವನ್ನಾಗಿಸಲು ಸಾಧ್ಯ.

**ಸೇವಾಕ್ಷೇತ್ರ :** 1960ರ ದಶಕದಲ್ಲಿ ನಮ್ಮ ದೇಶದಲ್ಲಿ ಸೇವಾಕ್ಷೇತ್ರವು ಕೇವಲ 4.5% ರಷ್ಟು ಉದ್ಯೋಗ ಸೃಷ್ಟಿ ಮಾಡುತ್ತಿತ್ತು. ಈಗ ಸೇವಾಕ್ಷೇತ್ರ 23% ರಷ್ಟು

# ಸಂಗೊಳ್ಳಿ ರಾಯಣ್ಣ ಜನ್ಮ ದಿನಾಚರಣೆ




ನವದೆಹಲಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ವತಿಯಿಂದ ಸಂಗೊಳ್ಳಿ ರಾಯಣ್ಣ ಜನ್ಮದಿನವನ್ನು ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ಇದೇ ಆಗಸ್ಟ್ 15ರಂದು ಆಚರಿಸಲಾಯಿತು. ಡಾ. ಮುನಿರಾಜು ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಾಣತೆತ್ತ ಕನ್ನಡದ ವೀರಾಗ್ರಣಿಗಳ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ದೆಹಲಿಯ ಮಕ್ಕಳಿಗೆ ಕನ್ನಡ ಪ್ರಭಂಧ ಸ್ಪರ್ಧೆಯನ್ನು ಏರ್ಪಡಿಸಲಾಯಿತು. ಮಕ್ಕಳು ಒನಕೆ ಓಬವ್ವ, ಸಂಗೊಳ್ಳಿ ರಾಯಣ್ಣ, ಡಾ. ನಾ.ಸು. ಹರ್ಡೀಕರ, ಕಿತ್ತೂರು ರಾಣಿ ಚೆನ್ನಮ್ಮ, ಹೈದರಾಲಿ, ನೇತಾಜಿ ಸುಭಾಸ್‌ಚಂದ್ರ ಭೋಸ್, ಭಗತ್‌ಸಿಂಗ್ ಮುಂತಾದವರ ಬಗ್ಗೆ ಮಾತಾಡಿದರು. ಬಹುತೇಕ ಮಕ್ಕಳಿಗೆ ಕನ್ನಡ ಅಕ್ಷರ ಜ್ಞಾನ ಇಲ್ಲದಿದ್ದುದರಿಂದ ಭಾಷಣವನ್ನು ಹಿಂದಿ ಹಾಗೂ ಇಂಗ್ಲಿಷ್ ಲಿಪಿಗಳಲ್ಲಿ ಬರೆದುಕೊಂಡು ಕಂಠಪಾಠ ಮಾಡಿ ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಈ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಕು. ಶ್ರೇಯ ಮತ್ತು ಕು. ಪ್ರೇರಣಾ ರಾವ್, ದ್ವಿತೀಯ ಬಹುಮಾನ ಜೆ. ರಿಷಿ, ತೃತೀಯ ಬಹುಮಾನ ಕು. ರಚನಾ ಮತ್ತು ಲಿಖಿತ್ ಪಡೆದರು. ಕ್ಷಿತಿಜ್, ನವ್‌ಯುಗ್ ಮತ್ತು ಭುವನ್ ಅವರಿಗೆ ಸಮಾಧಾನಕರ ಬಹುಮಾನವನ್ನು ನೀಡಲಾಯಿತು.

ಇದೇ ಸಂದರ್ಭದಲ್ಲಿ ಹಲವಾರು ದೇಶಭಕ್ತಿ ಗೀತೆಗಳನ್ನು ಸ್ಥಳೀಯ ಕಲಾವಿದರಾದ ಶ್ರೀಮತಿ ಮಂಜುಳಾ ನಾಗರಾಜ, ಶ್ರೀಮತಿ ನೇತ್ರಾ ಕುಮಾರ್, ಶ್ರೀ ಚಿದಂಬರ ಕೋಟೆ, ಕು. ಪ್ರೇರಣಾ ರಾವ್ ಮೊದಲಾದವರು ಸೇರಿ ಹಾಡಿದರು.

ಈ ಕಾರ್ಯಕ್ರಮದಲ್ಲಿ ಡಾ. ಮುನಿರಾಜು, ಶ್ರೀ ರಾಜಣ್ಣ, ಚೆನ್ನು ಎಸ್. ಮಠದ, ಶ್ರೀ ಸಿ.ಎಂ. ನಾಗರಾಜ, ಶ್ರೀ ಸಖಾರಾಮ ಉಪ್ಪೂರು, ಶ್ರೀ ಕೆ.ಎಸ್.ಜಿ. ಶೆಟ್ಟಿ, ಶ್ರೀ ನರಸಿಂಹ ಮೂರ್ತಿ, ಶ್ರೀ ಶಿವಾನಂದ ಇಂಗಳೇಶ್ವರ ಶ್ರೀ ಎಸ್.ಡಿ. ಶ್ರೀನಿವಾಸ ಇನ್ನೂ ದೆಹಲಿಯ ಹಲವಾರು ಮಂದಿ ಗಣ್ಯ ಕನ್ನಡಿಗರು ಪಾಲ್ಗೊಂಡಿದ್ದು, ಸಂಗೊಳ್ಳಿ ರಾಯಣ್ಣನ ಜೀವನ, ಹೋರಾಟ ಮತ್ತು ತ್ಯಾಗದ ಬಗ್ಗೆ ಮಾತನಾಡಿದರು. ಶ್ರೀ ಮಹಾದೇವ್ ಅವರು ಸ್ವಾಗತಿಸಿದರು. ಶ್ರೀಮತಿ ಆಶಾಲತಾ ಅವರು ಕಾರ್ಯಕ್ರಮವನ್ನು ನಿರೂಪಿಸಿ ಧನ್ಯವಾದ ಸಮರ್ಪಿಸಿದರು.

***ಆಶಾಲತಾ ಮಹಾದೇವ್***

ಉದ್ಯೋಗ ನೀಡುತ್ತಿದೆ, ಇನ್ನು ಸೇವಾಕ್ಷೇತ್ರದಿಂದ ನಮ್ಮ ದೇಶದ ಜಿಡಿಪಿಗೆ ಬರುತ್ತಿರುವ ಆದಾಯದ ಪಾಲು ಶೇ. 63ಕ್ಕೂ ಹೆಚ್ಚಿದೆ.

ಇದನ್ನು ನೋಡಿದಾಗ ಶೇ. 65ಕ್ಕೂ ಹೆಚ್ಚು ಉದ್ಯೋಗವಕಾಶ ಸೃಷ್ಟಿಸುತ್ತಿರುವ ಕೃಷಿ ಕ್ಷೇತ್ರ ನಮ್ಮ ಜಿಡಿಪಿಗೆ ನೀಡುತ್ತಿರುವ ಪಾಲು ಶೇ. 16ರಷ್ಟಿದೆ. ಅದೇ ರೀತಿ ಶೇ. 23ರಷ್ಟು ಉದ್ಯೋಗ ಸೃಷ್ಟಿಸುತ್ತಿರುವ ಸೇವಾ ಕ್ಷೇತ್ರದ ಪಾಲು ಶೇ. 63ರಷ್ಟಿದೆ. ಈ ಹಿನ್ನಲೆಯಲ್ಲಿ ನಮ್ಮ ದೇಶದ ವಿದ್ಯಾವಂತ ಯುವ ಜನಾಂಗ ಆಧುನಿಕ ಮಾದರಿಯ ಕೃಷಿ ವಿಧಾನವನ್ನು ಅನುಸರಿಸುವುದಕ್ಕೆ ಆಸಕ್ತಿ ತೋರಿಸಲು ಮುಂದಾಗಬೇಕು.

**ಆರೋಗ್ಯ ಕ್ಷೇತ್ರ :** ಸ್ವಾತಂತ್ರ್ಯಾನಂತರ ಭಾರತ ದೇಶದ ಆರೋಗ್ಯ ಕ್ಷೇತ್ರದಲ್ಲಿ ಕೆಲವು ಪ್ರಗತಿ ಸಾಧಿಸಿದ್ದರೂ ಆಗಬೇಕಾದ ಕೆಲಸ ಇನ್ನೂ ಅಗಾಧವಾಗಿದೆ. 1951ರಲ್ಲಿದ್ದ ಸರಾಸರಿ ಆಯುಷ್ಯ (ಜೀವಿತಾವಧಿ) 37 ವರ್ಷ, ಅದು 2011 ರವೇಳೆಗೆ 65 ವರ್ಷಕ್ಕೆ ಏರಿದೆ. ಪೋಲಿಯೋ ಮುಕ್ತ ಭಾರತ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಅಪೌಷ್ಟಿಕತೆ ಪ್ರಮಾಣ 1979 ರಲ್ಲಿ 67% ಇತ್ತು, ಇದು ಈಗ ಶೇ. 40ಕ್ಕೆ ಇಳಿದಿದೆ. ಶಿಶು ಮರಣ ಪ್ರಮಾಣ 1951ರಲ್ಲಿ 183 ಇತ್ತು. ಇದು ಈಗ 41ಕ್ಕೆ ಇಳಿದಿದೆ.

ಭಾರತ ಸ್ವಾತಂತ್ರ್ಯಗೊಂಡಾಗ ಪ್ರತಿ ವರ್ಷ ಮಲೇರಿಯಾ ರೋಗಕ್ಕೆ ತುತ್ತಾಗುತ್ತಿದ್ದವರ ಸಂಖ್ಯೆ 10 ಲಕ್ಷ ಇತ್ತು. ಆದರೆ ಕ್ರಮಬದ್ಧವಾದ ಕಾರ್ಯಕ್ರಮಗಳ ಮೂಲಕ ಈ ಪ್ರಮಾಣವನ್ನು ಗಣನೀಯವಾಗಿ ಕುಗ್ಗಿಸಿದೆ.

ಹಾಗೆಯೇ ಟಿ.ಬಿ. ನಿಯಂತ್ರಣ, ಏಡ್ಸ್ ನಿರ್ಮೂಲನೆ ಇತ್ಯಾದಿ ಕಾರ್‍ಯಕ್ರಮಗಳ ಮೂಲಕ ಆರೋಗ್ಯ ಕ್ಷೇತ್ರದಲ್ಲಿ ಮುಂದಡಿಯಿಡುತ್ತಿದೆ. ಆದರೂ ಜನಸಂಖ್ಯೆಯ ಹೆಚ್ಚಳ, ಆಹಾರ ಪದ್ಧತಿಗಳಲ್ಲಿ ಬದಲಾವಣೆ, ಜೀವನ ಶೈಲಿಯಲ್ಲಿ ಬದಲಾವಣೆ ಇತ್ಯಾದಿಗಳಿಂದಾಗಿ ಹಲವು ರೀತಿ ಆರೋಗ್ಯದ ಸಮಸ್ಯೆಗಳು ವೈದ್ಯಲೋಕಕ್ಕೆ ಸವಾಲಾಗಿವೆ. ಇಂತಹ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಸದೃಢ ಸ್ವತಂತ್ರ ಭಾರತ ದೇಶವನ್ನು ನಿರ್ಮಿಸಲು ಇನ್ನೂ ಹೆಚ್ಚಿನ ದಿಟ್ಟತನವನ್ನು ನಮ್ಮ ಸರ್ಕಾರಗಳು ತೋರಬೇಕಾಗಿದೆ.

***ಸಿ.ಎಸ್.ಎನ್.ಪಿ.***

## ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ 70ನೇ ಸ್ವಾತಂತ್ರ್ಯೋತ್ಸವ ಆಚರಣೆ

“ಶಿಕ್ಷಣವೇ ಈ ದೇಶದ ಪ್ರಗತಿಯ ಮಂತ್ರ. ಶಿಕ್ಷಣವು ಪ್ರತಿಯೊಬ್ಬನನ್ನು ಸ್ವಾವಲಂಬಿಯಾಗಿ, ಉತ್ತಮ ನಾಗರಿಕನನ್ನಾಗಿ ರೂಪಿಸುತ್ತದೆ. ಜೊತೆಗೆ ಎಲ್ಲಾ ಮೌಢ್ಯ, ಕಂದಾಚಾರಗಳಿಂದ ನಮ್ಮನ್ನು ಬಂಧಮುಕ್ತಗೊಳಿಸಿ ಸ್ವತಂತ್ರ ಬದುಕಿಗೆ ಹಿನ್ನಲೆಯಾಗುತ್ತದೆ” ಎಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಎ. ಆರ್. ಗುಡ್ಡೇಗೌಡ ಅವರು ಹೇಳಿದರು.

ಅವರು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ 70ನೇ ಸ್ವಾತಂತ್ರ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ವಿದ್ಯಾರ್ಥಿಗಳಿಗೆ ಸಂದೇಶ ನೀಡಿದರು. ಪ್ರಾಸ್ತಾವಿಕ ಮಾತುಗಳನ್ನಾಡಿದ ಪ್ರಾಂಶುಪಾಲ ಶ್ರೀ ಕೆ.ಟಿ. ಗಣೇಶ್ ಅವರು “ಶಿಸ್ತು, ಸಮಯಪ್ರಜ್ಞೆಯನ್ನು ಮೈಗೂಡಿಸಿಕೊಳ್ಳುವುದರ ಮೂಲಕ ವಿದ್ಯಾರ್ಥಿಗಳು ಕೂಡಾ ದೇಶ ಕಟ್ಟುವ ಕಾರ್ಯಕ್ಕೆ ಮುಂದಾಗಬೇಕು” ಎಂದು ಹೇಳಿದರು. ಬಳಿಕ ವಿದ್ಯಾರ್ಥಿಗಳಿಂದ ರಾಷ್ಟ್ರಪ್ರೇಮವನ್ನು ಬಿಂಬಿಸುವ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರುಗಳಾದ ಶ್ರೀ ಕೆ.ಆರ್. ರಾಮಮೂರ್ತಿ, ಶ್ರೀಮತಿ ಆಶಾ ಕಾರ್ಯಪ್ಪ ಹಾಗೂ ಗೌರವ ಕಾರ್ಯದರ್ಶಿ ಶ್ರೀ ಸಿ. ಆರ್. ಶ್ರೀನಿವಾಸ್ ಉಪಸ್ಥಿತರಿದ್ದರು.

## ದೆಹಲಿ ಕನ್ನಡ ಶಾಲೆಗೆ ಹೊಸ ಶಿಕ್ಷಕರ ನೇಮಕಾತಿ

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಗೆ ಈ ಕೆಳಕಂಡ ಮೂವರು ಅಧ್ಯಾಪಕರನ್ನು ಹೊಸದಾಗಿ ನೇಮಿಸಲಾಗಿದೆ. ಸಂಸ್ಕೃತ ಶಿಕ್ಷಕರಾಗಿ ಶ್ರೀ ಗಣೇಶ ಹೆಗಡೆ, ಚಿತ್ರಕಲಾ ಶಿಕ್ಷಕರಾಗಿ ಶ್ರೀಮತಿ ಜ್ಯೋತಿ ಎಸ್. ಪೊದ್ದಾರ್ ಮತ್ತು ಸಹಾಯ ಶಿಕ್ಷಕರಾಗಿ ಶ್ರೀಮತಿ ರೇಖಾ ಐ. ಅವರು ನೇಮಕಗೊಂಡಿದ್ದಾರೆ.

***ಅರವಿಂದ ಬಿಜ್ಜೈ***

## ಅಭಿಮತ ರಸಪ್ರಶ್ನೆ

1. ಈ ಬಾರಿ ಕರ್ನಾಟಕದಿಂದ ಎನ್.ಎಸ್.ಡಿ.ಗೆ ಆಯ್ಕೆಯಾದ ಪ್ರತಿಭೆ ಯಾರು?

2. ರಂಗಮಂಟಪ ಬೆಂಗಳೂರಿನವರು ಪ್ರಸ್ತುತಪಡಿಸಿದ 'ಮಲ್ಲಿಗೆ' ನಾಟಕದ ಕರ್ತೃ ಯಾರು?

3. ಧರ್ಮಸ್ಥಳ ವೀರೇಂದ್ರ ಹೆಗ್ಗಡೆಯವರ ಪರಸ್ಪರ ಕಾರ್ಯಕ್ರಮದ ನಂತರ ಭರತನಾಟ್ಯ ಕಾರ್ಯಕ್ರಮ ನೀಡಿದ ತಂಡ ಯಾವುದು?

4. ಭಾರತೀಯ ಭಕ್ತಿಪರಂಪರೆ ಮತ್ತು ಕನಕದಾಸರು ರಾಷ್ಟ್ರೀಯ ವಿಚಾರ ಸಂಕಿರಣದ ಉದ್ಘಾಟಕರು ಯಾರು?

5. ಭಾರತ ಪರ್ವ ಕಾರ್ಯಕ್ರಮಕ್ಕೆ ಕರ್ನಾಟಕದ ಜಾನಪದ ತಂಡ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿ ಯಾರು?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.09.2016ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅವರನ್ನು ಯೋಗ್ಯವಾಗಿ ಪುರಸ್ಕರಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ಅಗಸ್ಟ್ 2016ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ **ಸರಿಯಾದ ಉತ್ತರ**
1) ಶ್ರೀ ಎ.ಎಸ್. ಜಯಚಂದ್ರ 2) ಶ್ರೀಮತಿ ರಾಧಾ ಕೌಜಲಗಿ 3) ಭೀಷ್ಮ ವಿಜಯ ಮತ್ತು ನಾಗಶ್ರೀ 4) ಶ್ರೀಮತಿ ಸುಧಾರಾಣಿ
5) ಶ್ರೀಮತಿ ಪೂಜಾ ಪಿ. ರಾವ್

**ಸರಿಯಾದ ಉತ್ತರ ಕಳುಹಿಸಿದವರು.**
ಶ್ರೀಮತಿ ಪ್ರೇಮಲತಾ, ಶ್ರೀಮತಿ ಸೌಮ್ಯ ಕೊಟ್ರೇಶ್, ಶ್ರೀ ಬಸವರಾಜು. ಶ್ರೀ ಶಾಲಿನಿ ವಿ. ನಾಯಕ್, ಶ್ರೀ ರಾಜಶೇಖರ ಡಿ.ಎಸ್.



# ಜನಕಪುರಿ ಕನ್ನಡ ಕೂಟದ ನೂತನ ಕಾರ್ಯಕಾರಿ ಸಮಿತಿ

ಜನಕಪುರಿ ಕನ್ನಡ ಕೂಟದ ವಾರ್ಷಿಕ ಮಹಾಸಭೆಯು ಇದೇ ಅಗಸ್ಟ್ 21ರಂದು ನಡೆದು ಮುಂದಿನ ಎರಡು ವರ್ಷಗಳ ಅವಧಿಗಾಗಿ ನೂತನ ಕಾರ್ಯಕಾರಿ ಸಮಿತಿಯನ್ನು ಸರ್ವಾನುಮತದಿಂದ ಆರಿಸಲಾಯಿತು.

ಶ್ರೀ ಎನ್.ಆರ್. ಶ್ರೀನಾಥ್–ಅಧ್ಯಕ್ಷರು, ಡಾ. ಅಶೋಕ್ ಈಟಿ–ಉಪಾಧ್ಯಕ್ಷರು, ಶ್ರೀ ಶೇಷಗಿರಿ ನಾಯಕ್–ಪ್ರಧಾನ ಕಾರ್ಯದರ್ಶಿ, ಶ್ರೀ ಶಿವರಾಮ ರೈ–ಜಂಟಿ ಕಾರ್ಯದರ್ಶಿ, ಶ್ರೀ ಎಂ.ವಿ. ವೆಂಕಟೇಶ್–ಖಜಾಂಚಿ

ಸದಸ್ಯರುಗಳಾಗಿ ಶ್ರೀ ಬಿ.ಕೆ. ಬಸವರಾಜು, ಶ್ರೀ ಗಂಗಾಧರ, ಶ್ರೀ ಸಂಜೀವ್ ದೇಶಪಾಂಡೆ, ಶ್ರೀ ಎಸ್. ಎಲ್. ಭಂಡಾರ್‌ಕರ್, ಶ್ರೀ ಶ್ರೀಹರಿ, ಶ್ರೀ ಕೃಷ್ಣರಾಜ್ ಕೆ.ಎನ್., ಶ್ರೀಮತಿ ಭಾಗ್ಯಶ್ರೀ ಪ್ರಭಾಕರನ್, ಶ್ರೀಮತಿ ಲಾವಣ್ಯ ಬಸವರಾಜು

ಮಹಿಳಾ ಮಂಡಳಿ ಪ್ರತಿನಿಧಿಗಳು : ಶ್ರೀಮತಿ ಜಯಶ್ರೀ ಬಸವರಾಜು, ಶ್ರೀಮತಿ ಪವಿತ್ರ ತಮಣ್‌ಕರ್ ಅವರನ್ನು ಸರ್ವಾನುಮತದಿಂದ ಆರಿಸಲಾಯಿತು. ಅ

*ಎಂ.ವಿ. ವೆಂಕಟೇಶ್*

# ಗುರುಗಾಂವ್‌ನಲ್ಲಿ ಸತ್ಯನಾರಾಯಣ ಪೂಜೆ

ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ಗುರುಗಾಂವ್ ಕನ್ನಡ ಸಂಘದ ವತಿಯಿಂದ ಸಾರ್ವಜನಿಕ ಸತ್ಯನಾರಾಯಣ ಪೂಜೆಯನ್ನು ಇದೇ ಅಗಸ್ಟ್ 14ರಂದು ಹರಿಯಾಣದ ಗುರುಗಾಂವ್ ನಗರದಲ್ಲಿರುವ ರಾಧಾಕೃಷ್ಣ ಹಾಲ್‌ನಲ್ಲಿ ನಡೆಸಲಾಯಿತು. ಸುಮಾರು 400 ಮಂದಿ ಕನ್ನಡಿಗರು ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಈ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅ

*ಚಂದ್ರಶೇಖರ ಜೋಳದರಾಶಿ*



# ಅಭಿನಂದನೆ



## ಎಸ್.ಎಲ್. ಭಂಡಾರ್‌ಕರ್ ಅವರಿಗೆ ಡಾಕ್ಟರೇಟ್

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಹಾಗೂ ಜನಕಪುರಿ ಕನ್ನಡ ಕೂಟದ ಸದಸ್ಯರೂ ಆಗಿರುವ ಶ್ರೀ ಎಸ್. ಎಲ್. ಭಂಡಾರ್‌ಕರ್ ಅವರಿಗೆ ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಕಲಬುರ್ಗಿ ಅವರು ಮಂಡಿಸಿದ 'ಪರ್ಯಾಯ ಇಂಧನ ಬಳಸಿ, ಗುಲ್ಬರ್ಗಾ ನಗರದ ವಾಹನ ಮಾಲಿನ್ಯ ಕಡಿತ' ಪ್ರಬಂಧಕ್ಕೆ ಪಿ.ಎಚ್.ಡಿ. ಪದವಿ ನೀಡಿ ಗೌರವಿಸಿದೆ. ಶ್ರೀ ಭಂಡಾರ್‌ಕರ್ ಅವರಿಗೆ ಮಾರ್ಗದರ್ಶಕರಾಗಿ ಪ್ರೊ. ಆರ್. ನಿಜಗುಣಪ್ಪ ಅವರು ಮಾರ್ಗದರ್ಶನ ನೀಡಿದ್ದು, ಫ್ಯಾಕಲ್ಟಿ ಆಫ್ ಸಯನ್ಸ್ ಮತ್ತು ಟೆಕ್ನೋಲಜಿ ವತಿಯಿಂದ ಡಾಕ್ಟರೇಟ್ ಪದವಿಯನ್ನು ಇದೇ ಆಗಸ್ಟ್ 25ರಂದು ನೀಡಲಾಯಿತು. ಅ

## ಡಾ. ಅವನೀಂದ್ರನಾಥ್ ರಾವ್ ಅವರಿಗೆ ತುಳುವ ಐಸಿರಿ ಪುರಸ್ಕಾರ




ಟ್ರೈಮ್ಸ್ ಆಫ್ ಕುಡ್ಲ ಮತ್ತು ತುಳು ಸಮ್ಮೇಳನ ಸಮಿತಿ, ಮೂಲ್ಕಿ ಆಯೋಜಿಸಿದ ಎರಡು ದಿನಗಳ ತುಳು ಸಮ್ಮೇಳನದಲ್ಲಿ ದೆಹಲಿ ತುಳುಸಿರಿಯ ಮಾಜಿ ಅಧ್ಯಕ್ಷ ಡಾ. ವೈ. ಅವನೀಂದ್ರನಾಥ್ ರಾವ್ ಅವರಿಗೆ 'ತುಳುವ ಐಸಿರಿ' ಸಾಧಕ ಪುರಸ್ಕಾರ ನೀಡಿ ಗೌರವಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿಯಲ್ಲಿ ಇತ್ತೀಚೆಗೆ ನಡೆದ 'ತುಳುವ ಐಸಿರಿದ ಐಸ್ರ' ಎಂಬ ಸಮಾವೇಶವನ್ನು ಪದ್ಮ ವಿಭೂಷಣ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರು ಉದ್ಘಾಟಿಸಿದ್ದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಅ

# ಓದುಗರ ಪತ್ರ

ಅಗಸ್ಟ್ ತಿಂಗಳ ಅಭಿಮತದಲ್ಲಿ ನೀವು ಪ್ರೀತಿಯಿಂದ ರಾಜ್ಯೋತ್ಸವ ಸಂದರ್ಭದಲ್ಲಿ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕೃತನಾಗಿ ನಾನು ಆಡಿದ ಮಾತುಗಳನ್ನು ಆಯ್ದು ಅಭಿಮತದ ಓದುಗರಿಗಾಗಿ ಪ್ರಕಟಿಸಿದ್ದೀರಿ. ಇದಕ್ಕಾಗಿ ನಾನು ನಿಮಗೆ ಸದಾ ಕೃತಜ್ಞ. ಇಲ್ಲಿ ಒಂದು ಬಹುಮುಖ್ಯವಾದ ಮಾತನ್ನು ನಾನು ಹೇಳಬೇಕೆಂದಿರುವೆ. ಅದೇನೆಂದರೆ ಬಾಲ್ಯದಲ್ಲಿ ಬದುಕಲು ಹಾಗೂ ವಿದ್ಯಾಭ್ಯಾಸಕ್ಕಾಗಿ ಬವಣೆ ಅನುಭವಿಸುತ್ತಿದ್ದ ಸಂದರ್ಭದಲ್ಲಿ ನಮ್ಮ ಮಾವ ಕೆ.ಎಲ್. ನರಸಿಂಹ ಮೂರ್ತಿಯವರು ಊರಿನಲ್ಲಿ ಹಾಗೂ ನನ್ನ ಅಕ್ಕ ಮತ್ತು ನಮ್ಮ ಭಾವ ಕೆ. ವಾಸುದೇವ ರಾವ್, ಬಿ. ರಾಮಕೃಷ್ಣ ರಾವ್ ಅವರು ದೆಹಲಿಯಲ್ಲಿ ನನಗೆ ಮಾಡಿದ ಸಹಾಯದಿಂದಲೇ ನಾನು ಜೀವನದಲ್ಲಿ ಮುಂದೆ ಬರಲು ಸಾಧ್ಯವಾಯಿತು. ನನಗೆ ದೆಹಲಿಯಲ್ಲಿ Master of Library Science ಮಾಡಿ ಮುಗಿಸಲು ನನ್ನ ಭಾವನವರೇ ಸಂಪೂರ್ಣವಾಗಿ ಸಹಾಯ ಮಾಡಿದರು. ಅವರು ನನಗೆ ಗಾಡ್ ಫಾದರ್ ಆಗಿದ್ದರು.

***ಬಿ.ಎನ್. ರಾವ್***




ಅಭಿಮತದ ಅಗಸ್ಟ್ ಸಂಚಿಕೆ ವಿನೂತನ ರೀತಿಯಲ್ಲಿ ನಿರೂಪಿಸಲ್ಪಟ್ಟಿದೆ ಎನ್ನುವುದಕ್ಕೆ ಸಂಚಿಕೆಯ ಹೊರ ಒಳಗಿನ ಪುಟಗಳು ಕಾರಣವಾಯಿತು. ಅದರಲ್ಲೂ ಹೊರಪುಟ ಕಂಡಾಗ ಹಿಂಬದಿ ತಿರುಗಿಸಿ ಕಣ್ಣೋಡಿಸಿದಂತೆ ಯಕ್ಷಗಾನ ಸಂಚಿಕೆಯೊಂದನ್ನು ಕೈಗೆತ್ತಿಕೊಂಡೆನೇ ಎಂದೊಮ್ಮೆ ನೋಡಿಕೊಂಡುದೂ ನಿಜ. ಸಂಘದಲ್ಲಿ ಭೀಷ್ಮ ವಿಜಯ ಹಾಗೂ ನಾಗಶ್ರೀ ಯಕ್ಷಗಾನದ ದೃಶ್ಯಗಳು ಎನ್ನುವ ವಿಶಿಷ್ಟ ಬರಹಗಳೇ ಕಾಣಿಸಿಕೊಂಡಾಗ ತಟ್ಟನೆ ಅಭಿಮತ ಎಂದು ದೃಢಪಡಿಸಿಕೊಳ್ಳುವುದು ಹ್ಯಾಗೆ? ಎಂದು ಅನ್ನಿಸಿಕೊಂಡುದು ಸತ್ಯ. ಸಂಚಿಕೆಯನ್ನು ಸಂಕಲನಗೊಳಿಸಿದ ನೇಪಥ್ಯದ ಹಿಂದಿರುವ ಮಿತ್ರ ಬಳಗಕ್ಕೆ ನಮೋ ನಮಃ

***ಕೀರಿಕ್ಕಾಡು ವನಮಾಲಾ ಕೇಶವ ಭಟ್ಟ***

**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com
PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
Sept-2016, Vol. No.26, Issue No.12, Price Rs.1/- RNI Regn. No. 53405/91, DL-SW-1/4016/16-18
Printout Date : Sept 8th / 9th, Postal Date :10th / 11th, Total Pages-24
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

